ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ


ಬಿಗ್ ಚೀಟ್‌ಗೆ ಕ್ಲೀನ್ ಚಿಟ್!?



ಸಂಪುಟ 10 | ಸಂಚಿಕೆ 16 | ಪುಟ 20 | ಏಪ್ರಿಲ್ 17, 2016 | ರೂ. 10/-

web: www.janashakthi.co.in e-mail : js_weekly@yahoo.com

ಅಂಬೇಡ್ಕರ್ 125 ವಿಶೇಷಾಂಕ



- ಅಂಬೇಡ್ಕರ್ ಬಂಡಾಯವನ್ನು ಮುಂದುವರೆಸಬೇಕು
- ಬಂಡವಾಳಶಾಹಿಯೊಳಗೇ ಜಾತಿ ವಿನಾಶ ಸಾಧ್ಯವೇ?
- ಅಂಬೇಡ್ಕರ್ ಚಿಂತನೆ ಹೋರಾಟಗಳ ಮರು ಚೇತರಿಕೆ ಅಗತ್ಯ
- ಅಂಬೇಡ್ಕರ್ ಮತ್ತು ಎಡಪಂಥ
- ಬ್ಯಾರಿಸ್ಟರ್ ಆದ ಮೇಲೂ
- ಮಹಾಡ್ ನೆನಪು
- ರೋಹಿತ್ ಕಾನೂನು
- ಅಸ್ಪೃಶ್ಯತೆಯ ವಿರುದ್ಧ ನೇರ ಕಾರ್ಯಾಚರಣೆ : ಆಂಧ್ರ
- ಅಸ್ಪೃಶ್ಯತೆಯ ಗೋಡೆಗಳನ್ನು ಕೆಡವಿದಾಗ : ತಮಿಳುನಾಡು
- ದಲಿತ ಕ್ಯಾಪಿಟಲಿಸಂ
- ಜಾತಿವಿನಾಶ : ಅಂಬೇಡ್ಕರ್ ವಿಚಾರ



ತುಮಕೂರು: ಆಜಾದಿ ಕರಪತ್ರಕ್ಕೆ ದೇಶದ್ರೋಹ ಕೇಸ್

ಸಿಗರನಹಳ್ಳಿ : ಬೂದಿ ಮುಚ್ಚಿದ ಕೆಂಡ ಬೆಂಕಿಯಾದದ್ದು

ದೊಡ್ಡಬಳ್ಳಾಪುರ : ಕೊಚ್ಚೆಗುಂಡಿ ಸಾವಿನ ಕೂಪ



ಜೆಎನ್‌ಯು ಮತ್ತು ಹೆಚ್‌ಸಿಯು ದೇಶದ ಅತ್ಯುತ್ತಮ ವಿವಿಗಳು:
ಮಾನವ ಸಂಪನ್ಮೂಲ ಅಭಿವೃದ್ಧಿ (ಹೆಚ್‌ಆರ್‌ಡಿ) ಮಂತ್ರಾಲಯದ ಕೆನ್ನೆಗೆ ಬಾರಿಸಿದ ಏಟು–ಯೆಚೂರಿ

ದೇಶದ ಉನ್ನತ ಶಿಕ್ಷಣ ಸಂಸ್ಥೆಗಳ ರ‍್ಯಾಂಕಿಂಗ್‌ನಲ್ಲಿ ಜವಹರಲಾಲ್ ನಹರೂ ವಿಶ್ವವಿದ್ಯಾಲಯ ಮತ್ತು ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯ ಮೂರನೇ ಮತ್ತು ನಾಲ್ಕನೇ ಸ್ಥಾನಗಳನ್ನು ಪಡೆದಿವೆ. ಮೊದಲ ಸ್ಥಾನ ಪಡೆದಿರುವುದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ(ಐಐಎಸ್‌ಸಿ) ಮತ್ತು ಎರಡನೇ ಸ್ಥಾನ ಮುಂಬೈಯ ರಸಾಯನ ಶಾಸ್ತ್ರ ತಂತ್ರಜ್ಞಾನ ಸಂಸ್ಥೆ(ಐಸಿಟಿ). ಅಂದರೆ ಇವೆರೆಡು ವಿಜ್ಞಾನ–ತಂತ್ರಜ್ಞಾನದ ಸಂಸ್ಥೆಗಳನ್ನು ಬಿಟ್ಟರೆ ಜೆಎನ್‌ಯು ಮತ್ತು ಹೆಚ್‌ಸಿಯು ದೇಶದ ಅತ್ಯುನ್ನತ ವಿಶ್ವವಿದ್ಯಾಲಯಗಳು ಎಂದು ಮತ್ತೊಮ್ಮೆ ಸಾಬೀತಾಗಿದೆ.

ತಮಾಷೆಯೆಂದರೆ ಈ ರ‍್ಯಾಂಕಿಂಗ್‌ಗಳಿಗೆ ಸ್ವತಃ ಹೆಚ್‌ಆರ್‌ಡಿಯೇ ಮಂಜೂರಾತಿ ನೀಡಿದೆ. ಜಾಗತಿಕ ಶಿಕ್ಷಣ ಸಂಸ್ಥೆಯ ರ‍್ಯಾಂಕಿಂಗ್‌ಗಳಲ್ಲಿ ದೇಶೀಯ ಹಿನ್ನೆಲೆ ಇರುವುದಿಲ್ಲವಾದ್ದರಿಂದ ದೇಶದ ಸನ್ನಿವೇಶದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳ ಮಟ್ಟವನ್ನು ಅಳೆಯಲೆಂದು ನ್ಯಾಶನಲ್ ಇನ್‌ಸ್ಟಿಟ್ಯೂಶನಲ್ ಫ್ರೇಮ್‌ವರ್ಕ್‌ನ ಅಡಿಯಲ್ಲಿ ಈ ರ‍್ಯಾಂಕಿಂಗ್‌ಗಳನ್ನು ಪಟ್ಟಿ ಮಾಡಲಾಗಿದೆ.

ಈ ರ‍್ಯಾಂಕಿಂಗ್‌ಗಳು ಹೆಚ್‌ಆರ್‌ಡಿ ಮಂತ್ರಾಲಯ ಮತ್ತು ಮೋದಿ ಸರಕಾರದ ಕೆನ್ನೆಗೆ ಬಾರಿಸಿರುವ ಏಟು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟಿಪ್ಪಣಿ ಮಾಡಿದ್ದಾರೆ. ವಿಶ್ವವಿದ್ಯಾಲಯಗಳೆಂದರೆ ಕಲ್ಲು–ಇಟ್ಟಿಗೆಗಳ ಕಟ್ಟಡಗಳಷ್ಟೇ ಅಲ, ಅಥವ ಅವುಗಳ ಆವರಣಗಳಲ್ಲಿ ಎಷ್ಟು ಎತ್ತರದ, ಅಗಲದ ರಾಷ್ಟ್ರೀಯ ಬಾವುಟವನ್ನು ಹಾರಿಸಲಾಗುತ್ತಿದೆ ಎಂಬುದೂ ಅಲ್ಲ, ಪುಸ್ತಕಗಳು, ತರಗತಿಗಳು, ಬೋಧನೆಗಳ ಆಚೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಎಂತಹ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸುತ್ತಾರೆ ಎಂಬುದು ಅಲ್ಲಿನ ಶೈಕ್ಷಣಿಕ ಫಲಿತಾಂಶವನ್ನು ತೋರಿಸುತ್ತವೆ ಎಂಬುದನ್ನು ಇದು ಪ್ರದರ್ಶಿಸುತ್ತದೆ ಎಂದು ಅವರು ಹೇಳಿದ್ದಾರೆ. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ರಕ್ಷಿಸುವುದು ಮಾತ್ರವಲ್ಲ, ಪ್ರೋತ್ಸಾಹಿಸುವ, ಪ್ರಗತಿಪರ ರಾಜಕೀಯ ವಾತಾವರಣವನ್ನು ಕೂಡ ಇದು ಬಿಂಬಿಸುತ್ತದೆ.

ಇಷ್ಟೇ ಅಲ್ಲ, ಒಂದು ದಶಕದ ಹಿಂದಿನ ವರೆಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಲಾರದ ವಿಭಾಗಗಳಿಂದ ಬಂದ ವಿದ್ಯಾರ್ಥಿಗಳಿಗೆ ಆದ್ಯತೆ ನೀಡಿರುವ ವಿಶ್ವವಿದ್ಯಾಲಯಗಳಿವು ಎಂಬ ಸಂಗತಿಯತ್ತವೂ ಯೆಚೂರಿ ಗಮನ ಸೆಳೆದಿದ್ದಾರೆ. ಮೀಸಲಾತಿಗಳು ಗುಣಮಟ್ಟವನ್ನು ಇಳಿಸುತ್ತವೆ ಎಂಬುದು ಪಟ್ಟಭದ್ರರ ಹುಸಿಬೊಬ್ಬೆ ಎನ್ನುವುದನ್ನೂ ಇದು ಸಾಬೀತು ಪಡಿಸಿದೆ.

ಬಿಜೆಪಿ ಮತ್ತು ಸಂಘ ಪರಿವಾರ ಈ ವಿವಿಗಳ ವಿದ್ಯಾರ್ಥಿಗಳಿಗೆ ರಾಷ್ಟ್ರ–ವಿರೋಧಿಗಳೆಂಬ ಹಣಪಟ್ಟಿ ಹಚ್ಚಿ ಬೆನ್ನಟ್ಟುತ್ತಿರುವುದೂ ಇದೇ ಕಾರಣಕ್ಕೆ ಎಂಬುದಕ್ಕೆ ಇದೀಗ ಇನ್ನೊಂದು ಪುರಾವೆ.

ತಾನೇ ಮಂಜೂರು ಮಾಡಿರುವ ಈ ರ‍್ಯಾಂಕಿಂಗ್‌ಗಳಿಂದಲಾದರೂ ಬಿಜೆಪಿ ಸರಕಾರ, ಅದರ ಹೆಚ್‌ಆರ್‌ಡಿ ಮಂತ್ರಾಲಯ ಪಾಠ ಕಲಿಯುತ್ತದೆಯೇ? ಬಹುಶಃ ಕಲಿಯುವುದಿಲ್ಲ ಎನ್ನುತ್ತಾರೆ ಸೀತಾರಾಮ್ ಯೆಚೂರಿ. ಏಕೆಂದರೆ ಅವು ಆರೆಸ್ಸೆಸ್‌ನ ವಿಚ್ಛಿದ್ರಕಾರಿ ತತ್ವವನ್ನು ಹರಡಲು ಬದ್ಧವಾಗಿವೆ. ನಮ್ಮ ಅತ್ಯುತ್ತಮ ವಿವಿಗಳು ಇದಕ್ಕೆ ಬಲಿಯಾದರೂ ಪರವಾಗಿಲ್ಲ ಎಂಬುದು ಅವರ ನಿಲುವು. ಆದರೆ ದೇಶದ ವಿಶ್ವವಿದ್ಯಾಲಯಗಳು ನಿಜವಾಗಿಯೂ ಕಲಿಯುವ, ಪ್ರಗತಿಶೀಲ , ಜಾತ್ಯಾತೀತ, ಜನತಾಂತ್ರಿಕ ಆದರ್ಶಗಳನ್ನು ಮೈಗೂಡಿಸಿಕೊಳ್ಳುವ ಉನ್ನತ ಸ್ಥಳಗಳಾಗಿ ಉಳಿಯುವಂತೆ ಮಾಡುವ ಹೋರಾಟಗಳನ್ನು ಮುಂದೊಯ್ಯಬೇಕಾಗಿದೆ ಎಂದು ಯೆಚೂರಿ ಹೇಳಿದ್ದಾರೆ.

ಈ ನಡುವೆ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಯನ್ನು ತೆಗೆದುಹಾಕಬೇಕು, ಸ್ಮೃತಿ ಇರಾನಿ ಮತ್ತು ಬಂಡಾರು ದತ್ತಾತ್ರೆಯ ಮೇಲೆ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ಚಳುವಳಿ ನಿಲ್ಲದೆ ಸಾಗಿದೆ. ಎಪ್ರಿಲ್ 6ರಂದು ವಿವಿಯ ಅಕೆಡೆಮಿಕ್ ಕೌನ್ಸಿಲ್ ಸಭೆಯ ಸಂದರ್ಭದಲ್ಲಿ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಉಪಕುಲಪತಿ ಮತ್ತು ಇಬ್ಬರು ಕೇಂದ್ರೀಯ ಮಂತ್ರಿಗಳ ಮೇಲೆ ಕ್ರಮ ಕೈಗೊಳ್ಳಬೇಕೆಂದು ಘೋಷಣೆ ಕೂಗಿದರು. ವಿವಿಯ ಪರೀಕ್ಷಾ ನಿಯಂತ್ರಕ ಪ್ರೊ. ವಿ.ಕೃಷ್ಣ ವಿದ್ಯಾರ್ಥಿಗಳ ಪ್ರತಿಭಟನೆಗೆ ಬೆಂಬಲ ಸೂಚಿಸಿ ತಮ್ಮ ಹುದ್ದೆಗೆ ರಾಜೀನಾಮೆ ನೀಡಿ ಅಕೆಡೆಮಿಕ್ ಕೌನ್ಸಿಲ್ ಸಭೆಯಿಂದ ಹೊರಗೆದ್ದು ನಡೆದರು ಎಂದು ವರದಿಯಾಗಿದೆ.

ಹಿರಿಯ ನಾಗರಿಕರ ಕಲ್ಯಾಣ ನಿಧಿಯ ಹೆಸರಲ್ಲಿ ಹಣಕಾಸು ಮಂತ್ರಾಲಯದ ಕಾನೂನಾತ್ಮಕವಾಗಿ, ನೈತಿಕವಾಗಿ ಸರಿಯಲ್ಲದ ಕ್ರಮ–ತಪನ್ ಸೆನ್ ಪತ್ರ

ಹಣಕಾಸು ಮಂತ್ರಾಲಯ ಪೋಸ್ಟ್ ಆಫೀಸಿನ ಸಣ್ಣ ಉಳಿತಾಯ ಖಾತೆಗಳು, ನೌಕರರ ಭವಿಷ್ಯ ನಿಧಿ (ಇಪಿಎಫ್) ಮತ್ತು ಸಾರ್ವಜನಿಕ ಭವಿಷ್ಯ ನಿಧಿ(ಪಿಪಿಎಫ್)ಗಳಲ್ಲಿ ಯಾರೂ ಕೇಳದೆ ಉಳಿದುಕೊಂಡಿರುವ ಹಣವನ್ನು ಒಂದು 'ಹಿರಿಯ ನಾಗರಿಕರ ಕಲ್ಯಾಣ ನಿಧಿ' ಸ್ಥಾಪಿಸಿ ಅದಕ್ಕೆ ವರ್ಗಾಯಿಸಲಾಗುವುದು ಎಂದು ಮಾರ್ಚ್ 18 ರಂದು ಅಧಿಸೂಚನೆ ನೀಡಿರುವುದಾಗಿ ಎಪ್ರಿಲ್ 1ರಂದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ.


ಇದು ಕಾನೂನಾತ್ಮಕವಾಗಿಯೂ, ನೈತಿಕವಾಗಿಯೂ ಸರಿಯಲ್ಲ ಎಂದು ಸಿಐಟಿಯು ಪ್ರಧಾನ ಕಾರ್ಯದರ್ಶಿ ಹಣಕಾಸು ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಖಂಡಿಸಿದ್ದಾರೆ.

ಇಪಿಎಫ್ ಸಂಬಂಧಪಟ್ಟ ನೌಕರರ ಹಣ , ಅವರ ಪರವಾಗಿ ಮಾಲಕರು ನೀಡಿದ ವಂತಿಗೆ ಕೂಡ ನೌಕರನಿಗೇ ಸೇರಬೇಕಾದ್ದು. ತ್ರಿಪಕ್ಷೀಯ ಕೇಂದ್ರೀಯ ಟ್ರಸ್ಟಿಗಳ ಮಂಡಳಿ(ಸಿಬಿಟಿ) ನೌಕರರ ಈ ನಿಧಿಯ ಟ್ರಸ್ಟಿಯಾಗಿದೆ. ಈ ಬಗ್ಗೆ ಸರಕಾರ ಏಕಪಕ್ಷೀಯವಾಗಿ ಹೇಗೆ ತಾನೇ ನಿರ್ಧರಿಸಲು ಸಾಧ್ಯ ಎಂದು ತಪನ್ ಸೆನ್ ಪ್ರಶ್ನಿಸಿದ್ದಾರೆ.

ಸಿಬಿಟಿಯ ಸರ್ವಸಮ್ಮತಿಯ ಮೇರೆಗೆ ಮಾತ್ರವೇ ಈ ನಿಧಿಯಿಂದ ಸರಕಾರ ಏನ್ನಾದರೂ ವರ್ಗಾಯಿಸಲು ಸಾಧ್ಯ. ಈ ವಿಷಯವನ್ನು ಸರಕಾರ ಅಲ್ಲಿ ಮಂಡಿಸಿಲ್ಲ. ಮಾರ್ಚ್11, 2015ರಲ್ಲಿ ಕಾರ್ಮಿಕ ಸಂಘಗಳು ತಾವಾಗೇ ಈ ಪ್ರಶ್ನೆಯನ್ನೆತ್ತಿ ಇಂತಹ ವಿಚಾರವನ್ನು ಬಲವಾಗಿ ವಿರೋಧಿಸಿದ್ದವು ಎಂಬುದನ್ನು ತಪನ್ ಸೆನ್ ತಮ್ಮ ಪತ್ರದಲ್ಲಿ ನೆನಪಿಸಿದ್ದಾರೆ.

aAiAvEAzAgÉ EzÀÄ

ಕುಡಿಯಲು ನೀರು ಕೊಡದ,
ಕೊನೇಪಕ್ಷ ದೇವರನ್ನೂ ನೋಡಲು ಬಿಡದ,
ಧರ್ಮ ಧರ್ಮವೇ ಅಲ್ಲ.
ಅದು ಪಾಪದ, ಕೊಚ್ಚೆಯ ರಾಶಿ.
ಅಂತಹುದನ್ನು ಧರ್ಮ ಎಂದು ಕರೆಯಬಾರದು.
ನೀವು ವಿದ್ಯಾವಂತರಾಗುವುದನ್ನು ನಿಷೇಧಿಸಿದ,
ನಿಮ್ಮ ಭೌತಿಕ ಸುಖಗಳನ್ನು ನಾಶ ಮಾಡಿದ ಧರ್ಮದಲ್ಲಿ
ನೀವು ಒಂದು ಕ್ಷಣ ಕೂಡಾ ಇರಬಾರದು........
ಧರ್ಮ ಇರುವುದು ಮನುಷ್ಯರಿಗಾಗಿ;
ಮನುಷ್ಯರಿರುವುದು ಧರ್ಮಕ್ಕಾಗಿ ಅಲ್ಲ.
ಸಮಾನತೆ, ಪ್ರೀತಿ ಮತ್ತು ಕರುಣೆಗಳು
ಧರ್ಮದ ಆಧಾರಸ್ತಂಭಗಳಾಗಿರಬೇಕು.
ಇವುಗಳಾವುವೂ ಹಿಂದೂ ಧರ್ಮದಲ್ಲಿ
ಕಾಣುತ್ತಿಲ್ಲ.



ಡಾ|| ಬಿ.ಆರ್.ಅಂಬೇಡ್ಕರ್

ಮುಖ್ಯಮಂತ್ರಿಯೊಬ್ಬರ ಸಂವಿಧಾನ–ವಿರೋಧಿ ಅಬ್ಬರ ಯೋಗಗುರುವೊಬ್ಬರ ದ್ವೇಷ ಹಬ್ಬಿಸುವ ಹುನ್ನಾರ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

"ಈ ದೇಶದಲ್ಲಿ ಇರಬೇಕಾಗಿದ್ದರೆ ನೀವು ಭಾರತ್ ಮಾತಾಕೀ ಜೈ ಎನ್ನಲೇಬೇಕು. ಇಲ್ಲವಾದರೆ ನಿಮಗೆ ಇಲ್ಲಿ ಬದುಕಲು ಹಕ್ಕಿಲ್ಲ"– ಇದು ಮುಖ್ಯಮಂತ್ರಿಗಳೊಬ್ಬರ ಉದ್ಗಾರ! ಇದು ಪಕ್ಕಾ ಸಂವಿಧಾನ–ವಿರೋಧಿ ನಿಲುವು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ. ರಾಷ್ಟ್ರೀಯವಾದದ ಹಿಂದುತ್ವ ಆವೃತ್ತಿಯನ್ನು ಒಪ್ಪದವರಿಗೆ ಈ ದೇಶದಲ್ಲಿ ಇರಲು ಹಕ್ಕಿಲ್ಲ ಎಂಬುದೇ ದೇವೇಂದ್ರ ಫಡ್ನವೀಸ್ ಅವರ ಮಾತಿನ ಅರ್ಥ. ಇದು ಒಬ್ಬ ಆರೆಸ್ಸೆಸ್ ಕಾರ್ಯಕರ್ತನ ಅಭಿಪ್ರಾಯ ಆಗಿರಬಹುದು, ಆದರೆ ಸಂವಿಧಾನವನ್ನು ಎತ್ತಿ ಹಿಡಿಯುವ ಪ್ರತಿಜ್ಞೆ ಸ್ವೀಕರಿಸಿರುವ ಒಬ್ಬ ಮುಖ್ಯಮಂತ್ರಿಯ ಅಭಿಪ್ರಾಯವಾಗಲು ಸಾಧ್ಯವಿಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಮಹಾರಾಷ್ಟ್ರದ ಮುಖ್ಯಮಂತ್ರಿ ಫಡ್ನವೀಸ್ ತಕ್ಷಣವೇ ಈ ಮಾತನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಮಹಾರಾಷ್ಟ್ರವನ್ನು ಗಂಭೀರ ಕೃಷಿ ಬಿಕ್ಕಟ್ಟು ಆವರಿಸಿಕೊಂಡಿದೆ, ರೈತರ ಆತ್ಮಹತ್ಯೆಗಳು ಹೊಸ ದಾಖಲೆಗಳನ್ನು ನಿರ್ಮಿಸುತ್ತಿವೆ, ಆದರೆ ಮುಖ್ಯಮಂತ್ರಿ ಗಮನ ಬೇರೆಡೆಗೆ ತಿರುಗಿಸುವ ಪ್ರಯತ್ನ ನಡೆಸಿದ್ದಾರೆ, ಆರೆಸ್ಸೆಸ್‌ನ ವಿಚ್ಛಿದ್ರಕಾರಿತೆಯನ್ನು ಮತ್ತೆ ಕಕ್ಕುತ್ತಿದ್ದಾರೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

ಇನ್ನೊಂದೆಡೆ ಯೋಗಗುರು ಎನಿಸಿಕೊಂಡಿರುವ ರಾಂದೇವ್ ಭಾರತ ಮಾತೆಗೆ ಜಯವೆನ್ನದವರ ತಲೆಗಳನ್ನು ಕತ್ತರಿಸುವುದಾಗಿ ಹೇಳಿದ್ದಾರೆ. ದೇಶದಲ್ಲಿ ಎಂತಹ ದ್ವೇಷದ ಮತ್ತು ಅಸಹಿಷ್ಣುತೆಯ ವಾತಾವರಣವನ್ನು ಸೃಷ್ಟಿಸಲಾಗುತ್ತಿದೆ ಎಂಬುದಕ್ಕೆ ಈ ಉನ್ಮತ್ತ ಕೋಮುವಾದಿ ನಿಲುವು ಒಂದು ಉದಾಹರಣೆ. ಇದು ಹಿಂಸಾಚಾರವನ್ನು, ಕೋಮುವಾದಿ ದ್ವೇಷವನ್ನು ಉದ್ರೇಕಿಸುವ ಭಾಷಣ. ಸಂಬಂಧಪಟ್ಟ ಅಧಿಕಾರಿಗಳು ತಕ್ಷಣವೇ ಭಾರತೀಯ ದಂಡ ಸಂಹಿತೆಯ ಅಡಿಯ ಸಂಬಂಧಪಟ್ಟ ವಿಧಿಗಳ ಅಡಿಯಲ್ಲಿ ಒಂದು ಮೊಕದ್ದಮೆಯನ್ನು ಹಾಕಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೋ ಹೇಳಿದೆ.

ಮೋದಿ ಸರಕಾರ ದೇಶವನ್ನು ಒಂದುಗೂಡಿಸುವ ಬದಲು ಒಡೆಯುವ ಘೋಷಣೆಗಳನ್ನು ಆರಿಸಿ ಆರಿಸಿ ಬಳಸಲು ಹಿಂದುತ್ವವಾಲಾಗಳಿಗೆ ಪರವಾನಿಗೆಯನ್ನೇ ಕೊಟ್ಟಂತಿದೆ ಎಂದು ಸಿಪಿಐ(ಎಂ)ನ ಹಿರಿಯ ಮುಖಂಡರಾದ ಬೃಂದಾ ಕಾರಟ್ ಹೇಳಿದ್ದಾರೆ.

ಕೊಲ್ಕತಾ ಫ್ಲೈಓವರ್ ದುರಂತ: ತಕ್ಷಣವೇ ಉನ್ನತ ಮಟ್ಟದ ಸ್ವತಂತ್ರ ತನಿಖೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹ

ಮಾರ್ಚ್ 31ರಂದು ಕೊಲ್ಕತಾ ನಗರದ ಜನನಿಬಿಡ ಪ್ರದೇಶ ಬಡಾಬಝಾರ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಫ್ಲೈಓವರ್ ಕುಸಿದು ಇದುವರೆಗೆ 27 ಜನರು ಪ್ರಾಣ ಕಳಕೊಂಡಿರುವ ಮತ್ತು 300ರಷ್ಟು ಮಂದಿ ತೀವ್ರವಾಗಿ ಗಾಯಗೊಂಡಿರುವ ಸುದ್ದಿ ಇಡೀ ದೇಶದ ಗಮನ ಸೆಳೆದಿದೆ. ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ದುರಂತದ ಬಗ್ಗೆ ತನ್ನ ಆಳವಾದ ದುಃಖವನ್ನು ವ್ಯಕ್ತಪಡಿಸಿದೆ, ಇದರಲ್ಲಿ ಪ್ರಾಣ ಕಳಕೊಂಡಿರುವವರ ಕುಟುಂಬಗಳಿಗೆ ತನ್ನ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ.

ಸಿಪಿಐ(ಎಂ) ಮತ್ತು ಅದರ ಸಾಮೂಹಿಕ ಸಂಘಟನೆಗಳು ಘಟನೆ ನಡೆದಾಗಿನಿಂದ ಸತತವಾಗಿ ಪೀಡಿತರಿಗೆ ಪರಿಹಾರ ಒದಗಿಸುವ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಗಾಯಗೊಂಡು ಆಸ್ಪತ್ರೆಗಳಲ್ಲಿರುವವರಿಗೆ ರಕ್ತ ಒದಗಿಸಲು ಒಂದು ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ.

ಮಾಧ್ಯಮಗಳಲ್ಲಿ ಈಗ ಆಳುವ ತೃಣಮೂಲ ಕಾಂಗ್ರೆಸ್ ಮತ್ತು ಫ್ಲೈಓವರ್ ನಿರ್ಮಾಣದ ವಿವಿಧ ಕಾಮಗಾರಿಗಳ ಕಾಂಟ್ರಾಕ್ಟ್ ಪಡೆದಿರುವ ಉಪಕಾಂಟ್ರಾಕ್ಟರುಗಳ ಶಾಮೀಲಿನ ಬಗ್ಗೆ ವರದಿಗಳು ಬರುತ್ತಿವೆ. ಆದ್ದರಿಂದ ಈ ದುರಂತದ ಕಾರಣಗಳ ಒಂದು ಉನ್ನತ ಮಟ್ಟದ ಸ್ವತಂತ್ರ ತನಿಖೆ ನಡೆಯಬೇಕಾಗಿದೆ, ಇದು ನಿಯಮಿತ ಸಮಯದೊಳಗೆ ವರದಿ ಕೊಡುವಂತಾಗಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ತಪ್ಪಿತಸ್ಥರು ಯಾರೆಂಬುದನ್ನು ಖಚಿತ ಪಡಿಸಿ ಅವರನ್ನು ಶಿಕ್ಷಿಸಬೇಕು ಎಂದು ಸಿಪಿಐ(ಎಂ) ಹೇಳಿದೆ. ತಕ್ಷಣವೇ ಒಂದು ಸ್ವತಂತ್ರ ತನಿಖಾ ಸಮಿತಿಯನ್ನು ರಚಿಸಿ ತನಿಖೆಯನ್ನು ನಡೆಸಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಫ್ಲೈಓವರ್ ನಿರ್ಮಾಣದಲ್ಲಿ ಏನೇನೂ ಅನುಭವವಿಲ್ಲದ ಒಬ್ಬ ಸಣ್ಣ ಉಪ–ಕಾಂಟ್ರಾಕ್ಟರ್ ಮಾರ್ಚ್ 30ರ ರಾತ್ರಿ ಈ ವಿವೇಕಾನಂದ ರಸ್ತೆ ಫ್ಲೈಓವರ್‌ನ 40 ಮೀಟರ್ ವಿಭಾಗದಲ್ಲಿ ಕಾಸ್ಟಿಂಗ್ ಡೆಕ್ ಇರಿಸಿದ. ಇದಾದ ಕೆಲವೇ ಗಂಟೆಗಳೊಳಗಾಗಿ ಈ ಮೇಲ್ಸೇತುವೆ ಕುಸಿದ್ದು ಬಿತ್ತು ಎಂದು ಎಪ್ರಿಲ್ 1 ರ 'ದಿ ಟೆಲಿಗ್ರಾಫ್' ಪತ್ರಿಕೆ ವರದಿ ಮಾಡಿದೆ. ಈ ಉಪಕಾಂಟ್ರಾಕ್ಟರ್ ಹೆಸರು ರಜತ್ ಬಕ್ಷಿ, ಸಂಧ್ಯಾಮಣಿ ಪ್ರಾಜೆಕ್ಟ್ಸ್ ನ ಮಾಲಕನಾಗಿರುವ ಈತ ತೃಣಮೂಲ ಕಾಂಗ್ರೆಸ್ ಮುಖಂಡ ಸಂಜಯ್ ಬಕ್ಷಿಯ ಸೋದರ ಸಂಬಂಧಿ. ಸಂಜಯ್ ಬಕ್ಷಿಯ ಹೆಂಡತಿ ಸ್ಮಿತಾ ಜೊರಸಂಕೋದಿಂದ ಆರಿಸಲ್ಪಟ್ಟಿರುವ ಟಿಎಂಸಿ ಶಾಸಕಿ.

ಈ ಫ್ಲೈಓವರ್‌ನ ಕಾಂಟ್ರಾಕ್ಟನ್ನು 2009ರಲ್ಲಿ ಹೈದರಾಬಾದಿನ ಐವಿಆರ್‌ಸಿಎಲ್‌ಗೆ ಕೊಡಲಾಗಿತ್ತು. 2011ರಲ್ಲಿ ಈ ಕಂಪನಿ ಸಂಧ್ಯಾಮಣಿ ಪ್ರಾಜೆಕ್ಟ್ಸ್‌ನನ್ನು ಒಂದು ಸಬ್–ಕಾಂಟ್ರಾಕ್ಟರ್ ಆಗಿ ನೇಮಿಸಿಕೊಂಡಿತು. ಈ ಸಬ್–ಕಾಂಟ್ರಾಕ್ಟರ್‌ಗೆ ಇದರ ಸರ್ಟಿಫಿಕೇಟ್ ದೂರೆತದ್ದು 2013ರಲ್ಲಿ ಎಂದು ಕೊಲ್ಕತಾ ಮುನಿಸಿಪಲ್ ಕಾರ್ಪೊರೇಶನ್ (ಸಿಎಂಸಿ)ನ ಮೂಲಗಳಿಂದ ತಿಳಿದು ಬಂದಿರುವುದಾಗಿ ಈ ಪತ್ರಿಕೆ ವರದಿ ಮಾಡಿದೆ. ಸಾಮಾನ್ಯವಾಗಿ ಇಂತಹ ಸಬ್–ಕಾಂಟ್ರಾಕ್ಟ್‌ಗಳನ್ನು ಸಂಬಂಧಪಟ್ಟ ಕಂಪನಿಯ ಪೂರ್ವಾಪರಗಳನ್ನು ತಿಳಿದುಕೊಂಡ ನಂತರವೇ ಕೊಡಲಾಗುತ್ತದೆ. ಆದ್ದರಿಂದ ಈ ಕಂಪನಿಯ ನೇಮಕ ಸ್ವತಂತ್ರ ಇಂಜಿನಿಯರುಗಳಿಗೆ ಆಶ್ಚರ್ಯ ಉಂಟು ಮಾಡಿತ್ತಂತೆ.

ರಜತ್ ಭಕ್ಷಿಗೆ ಇದರಲ್ಲಿ ಅನುಭವವ ಏನೂ ಇಲ್ಲದಿದ್ದರೂ ಆತನಿಗೆ ಈ ಕೆಲಸ ಹೇಗೆ ಸಿಕ್ಕಿತು ಎಂಬ ಬಗ್ಗೆ ಈ ನಿರ್ಮಾಣದ ಹೊಣೆ ಇರುವ ಕೊಲ್ಕತಾ ಮಹಾನಗರ ಅಭಿವೃದ್ಧಿ ಪ್ರಾಧಿಕಾರ(ಸಿಎಂಡಿಎ)ದಿಂದ ಯಾರೂ ಉತ್ತರ ಕೊಡುತ್ತಿಲ್ಲ, ಐವಿಆರ್‌ಸಿಎಲ್ ಕಂಪನಿಯ ಮೂವರನ್ನು 'ಕೊಲೆ' ಆಪಾದನೆಯ ಮೇಲೆ ಬಂಧಿಸಲಾಗಿದ್ದು ಆ ಕಂಪನಿಯಿಂದ ಯಾವ ಟಿಪ್ಪಣಿಯೂ ಲಭ್ಯವಾಗಿಲ್ಲ ಎಂದು ಈ ಪತ್ರಿಕೆ ವರದಿ ಮಾಡಿದೆ

ರಜತ್ ಭಕ್ಷಿಗೆ ಈ ಕಾಂಟ್ರಾಕ್ಟ್ ಹೇಗೆ ಸಿಕ್ಕಿತು ಎಂಬುದು ಇನ್ನೂ ರಹಸ್ಯವಾಗಿದ್ದರೂ, ಟಿಎಂಸಿ ಮಂತ್ರಿಗಳ ಭ್ರಷ್ಟಾಚಾರವನ್ನು ಬಹಿರಂಗಗೊಳಿಸಿರುವ ನಾರದ ನ್ಯೂಸ್‌ನಲ್ಲಿ ಇಂತಹ ಕಾಂಟ್ರಾಕ್ಟುಗಳನ್ನು ಹೇಗೆ ಕೊಡಲಾಗಿದೆ ಎಂಬುದರ ಒಂದು ಸಂಕೇತ ಸಿಗುತ್ತದೆ. ಅದು ಪ್ರಕಟಿಸಿರುವ ಒಂದು ವೀಡಿಯೋದಲ್ಲಿ ಮಾಜಿ ಸಾರಿಗೆ ಮಂತ್ರಿ ಮದನ್ ಮಿತ್ರರನ್ನು ಹೋಲುವ ವ್ಯಕ್ತಿಯೊಬ್ಬ ಪಿಡಬ್ಲ್ಯುಡಿ ಇಲಾಖೆಯ ರಸ್ತೆ ಕಾಂಟ್ರಾಕ್ಟುಗಳನ್ನು ಕೂಡ ತನ್ನನು ಕೇಳಿಯೇ ಕೊಡಲಾಗುತ್ತಿದೆ ಎನ್ನುತ್ತಿರುವುದೂ ಕೇಳಬರುತ್ತಿದೆ. ನಗರಾಭಿವೃದ್ಧಿ ಮಂತ್ರಿ ಫಿರ್ಹಾದ್ ಹಕೀಂ ತನ್ನ ಪಕ್ಷದ ಶಾಸಕ ಇಕ್ಬಾಲ್ ಅಹ್ಮದ್‌ಗೆ ಸಿಎಂಡಿಎ ಪ್ರಾಜೆಕ್ಟುಗಳನ್ನು ಕೊಡಿಸುವ ಬಗ್ಗೆ ಹೇಳುತ್ತಿರುವ ಇನ್ನೊಂದು ವೀಡಿಯೋ ಬಹಿರಂಗವಾಗಿದೆ.

ನೀಲಿ ಬಾನಿನಲ್ಲಿ ಕೆಂಪು ಸೂರ್ಯ ಉದಯಿಸಬೇಕು

ಸಂಪಾದಕೀಯ

ಅಂಬೇಡ್ಕರ್ 125ನೇ ಜನ್ಮದಿನ ಬರಿಯ ಇನ್ನೊಂದು ಆಚರಣೆಯಲ್ಲ. ಇದೊಂದು ವಿಶಿಷ್ಟ ದಿನ. ಅಂಬೇಡ್ಕರ್ ಸಂವಿಧಾನಕ್ಕೆ ಇಳಿಸಿದ ಸ್ವಾತಂತ್ರ್ಯ ಚಳುವಳಿಗೆ ಹೋರಾಡಿದ ಭಾರತದ ಜನತೆಯ ಪ್ರಜಾಪ್ರಭುತ್ವ, ಜಾತ್ಯತೀತತೆ, ಸಮಾನತೆಯ ಆಶಯಗಳು ಎಷ್ಟರ ಮಟ್ಟಿಗೆ ಜಾರಿಯಾಗಿವೆ ಎಂದು ಪರಿಶೀಲಿಸಬೇಕಾದ ದಿನ. ರಾಜಕೀಯ ಸ್ವಾತಂತ್ರ್ಯ ಬಂದು ಏಳು ದಶಕಗಳ ನಂತರವೂ, ಅಂಬೇಡ್ಕರ್ ಎಚ್ಚರಿಸಿದ ಹಾಗೆ ಎಲ್ಲರಿಗೂ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯ ಯಾಕೆ ಸಿಕ್ಕಿಲ್ಲ ಎಂದು ಕೇಳಿಕೊಳ್ಳಬೇಕಾದ ದಿನ. ಬದಲಾಗಿ, ಅಂಬೇಡ್ಕರ್ ಸಂವಿಧಾನದ ಮೇಲೆ ದಾಳಿ ಮಾಡುತ್ತಾ ಹುಸಿ ರಾಷ್ಟ್ರವಾದ, ಹುಸಿ ಧಾರ್ಮಿಕತೆಯನ್ನು ಮೆರೆಯುವ ಫ್ಯಾಸಿಸಂನತ್ತ ನಮ್ಮ ಆಳುವವರು ಸೆಳೆಯುತ್ತಿರುವ ಪರಿಸ್ಥಿತಿಗೆ ನಾವು ಬಂದು ನಿಂತಿರುವುದು ಏಕೆ? ಆರ್ಥಿಕ ಶೋಷಣೆ ಮಾಡುವ ಬಂಡವಾಳಶಾಹಿ ಮತ್ತು ಸಾಮಾಜಿಕ ದಮನ ಮಾಡುವ ಮನುವಾದಿಗಳ ದುಷ್ಟಕೂಟವನ್ನು ಎದುರಿಸುವುದು ಹೇಗೆ? ಈ ಎರಡರ ವಿರುದ್ಧ ಹೋರಾಡುತ್ತಿರುವ ಶಕ್ತಿಗಳು, ಸಿದ್ಧಾಂತಗಳು ಒಟ್ಟಾಗಿ ಇದನ್ನು ಎದುರಿಸಬೇಕು ಎಂಬ ಉತ್ತರ ಸಹ ಸ್ವಯಂಸಿದ್ಧ.

ಇಂತಹ ಎರಡು ಶಕ್ತಿಗಳು ಎಂದರೆ ಮಾರ್ಕ್ಸ್‌ವಾದವನ್ನು ನಿರ್ದೇಶಕ ಸಿದ್ಧಾಂತವಾಗಿ ಅಂಗೀಕರಿಸಿರುವ ಎಡ ಮತ್ತು ಕಮ್ಯುನಿಸ್ಟ್ ಪಕ್ಷಗಳು, ಗುಂಪುಗಳು, ಸಂಘಟನೆಗಳು, ವ್ಯಕ್ತಿಗಳು ಒಂದು ಕಡೆ. ಅಂಬೇಡ್ಕರ್‌ವಾದವನ್ನು ನಿರ್ದೇಶಕ ಸಿದ್ಧಾಂತವಾಗಿ ಅಂಗೀಕರಿಸಿರುವ ಪಕ್ಷಗಳು, ಗುಂಪುಗಳು, ಸಂಘಟನೆಗಳು, ವ್ಯಕ್ತಿಗಳು ಇನ್ನೊಂದು ಕಡೆ. ಈ ಎರಡೂ ಶಕ್ತಿಗಳು ಹಲವು ಚಳುವಳಿಗಳಲ್ಲಿ ಒಟ್ಟಾಗಿ ಭಾಗವಹಿಸುತ್ತಿವೆ. ಆದರೂ ಎರಡೂ ಚಳುವಳಿಗಳನ್ನು ಬೆಸೆಯುವ ಕೆಲಸ ಆರಂಭವಾಗಿದೆಯಷ್ಟೇ. ಜನಶಕ್ತಿಯ ಈ ವಿಶೇಷಾಂಕ ಇದಕ್ಕೆ ಮೀಸಲಾಗಿದೆ.

ಎರಡೂ ಚಳುವಳಿಗಳನ್ನು ಬೆಸೆಯುವ ಕೆಲಸ – ಈ ಎರಡೂ ಸಿದ್ಧಾಂತಗಳ ಶಕ್ತಿ–ದೌರ್ಬಲ್ಯಗಳನ್ನು ಗುರುತಿಸುವುದು, ಕೊಡು–ಕೊಳ್ಳುವಿಕೆಯ ಸಾಧ್ಯತೆ ಪರಿಶೀಲಿಸುವುದು. ಅವುಗಳ ನಡುವಿನ ವಿವಾದಿತ ಜಾತಿ–ವರ್ಗ ಪ್ರಶ್ನೆಗಳನ್ನು ಚರ್ಚಿಸುವುದು – ಇವುಗಳನ್ನು ಒಳಗೊಳ್ಳುತ್ತದೆ. ಈ ನಿಟ್ಟಿನಲ್ಲಿ ಇಲ್ಲಿ ನಾಲ್ಕು ಲೇಖನಗಳು ಇವೆ. ಹಿರಿಯ ಕಮ್ಯುನಿಸ್ಟ್ ನಾಯಕ ಪ್ರಭಾಕರ ಸಾಂಝಗಿರಿಯವರ 'ಡಾ. ಬಿ.ಆರ್.ಅಂಬೇಡ್ಕರ್–ಜೀವನ ಮತ್ತು ಹೋರಾಟ: ಒಂದು ಅಧ್ಯಯನ' ಲೇಖನದ ಒಂದು ಭಾಗ. "ಫುಲೆ ಮತ್ತು ಅಂಬೇಡ್ಕರ್ ಜಾತಿ ಪದ್ಧತಿಯ ನಿರ್ಮೂಲನದ ಬಂಡಾಯದ ಅಂಶಗಳನ್ನು ನೀಡಿದ ಸಾಮಾಜಿಕ ಸುಧಾರಣೆಯ ಆಂದೋಲನವನ್ನು ದುಡಿಯುವ ವರ್ಗದ ಪಕ್ಷ ಮುಂದುವರಿಸಬೇಕು, ಈ ಮೂಲಕ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಭಾಗವಾದ ಊಳಿಗಮಾನ್ಯ–ವಿರೋಧಿ ಕೆಲಸಗಳನ್ನು ಪೂರ್ಣಗೊಳಿಸಬೇಕು" ಎಂದು ಅವರು ಅಂಬೇಡ್ಕರ್ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಬರೆದದ್ದನ್ನು ಇಲ್ಲಿ ನೆನಪಿಸಿಕೊಳ್ಳಲಾಗಿದೆ.

ದೇಶದ ಪ್ರಮುಖ ಮಾರ್ಕ್ಸ್‌ವಾದಿ ಚಿಂತಕ ಪ್ರೊ. ಪ್ರಭಾತ್ ಪಟ್ನಾಯಕ್ ಜಾತಿ–ವರ್ಗ ಪ್ರಶ್ನೆಗಳನ್ನು ಎತ್ತಿಕೊಂಡು "ಜಾತಿ ದಬ್ಬಾಳಿಕೆಯೂ ಸೇರಿದಂತೆ ಎಲ್ಲ ಪ್ರಕಾರದ ದಬ್ಬಾಳಿಕೆಗಳನ್ನು ಕೊನೆಗೊಳಿಸಲು ಬಂಡವಾಳಶಾಹಿ ವ್ಯವಸ್ಥೆಯನ್ನೇ ಕೊನೆಗೊಳಿಸಬೇಕಾಗುತ್ತದೆ. ಆದ್ದರಿಂದ, ಮಾರ್ಕ್ಸ್‌ವಾದವು ವರ್ಗ ವೈರುಧ್ಯ ಮತ್ತು ವರ್ಗ ಹೋರಾಟಗಳಿಗೆ ಪ್ರಾಮುಖ್ಯತೆ ಕೊಡುತ್ತದೆ. ಬಂಡವಾಳಶಾಹಿ ವಿರುದ್ಧದ ಹೋರಾಟಕ್ಕೆ ಪ್ರಾಮುಖ್ಯತೆ ಕೊಡುವುದರ ಅರ್ಥ ಜಾತಿ ದಬ್ಬಾಳಿಕೆಯನ್ನು ಕಡೆಗಣಿಸಿದಂತೆಯೂ ಅಲ್ಲ ಅಥವಾ ಆ ಸಮಸ್ಯೆಗೆ ವರ್ಗದ ನಂತರದ ಸ್ಥಾನ ಕೊಟ್ಟಂತೆ–ಯೂ ಅಲ್ಲ. ಏಕೆಂದರೆ, ಜಾತಿ ದಬ್ಬಾಳಿಕೆಯನ್ನು ಕಡೆಗಣಿಸಿದರೆ, ವರ್ಗ ಹೋರಾಟವನ್ನೇ ಶಿಥಿಲಗೊಳಿಸಿದಂತಾಗುತ್ತದೆ. ಮಾರ್ಕ್ಸವಾದದಲ್ಲಿ "ವರ್ಗ" ಪ್ರಾಮುಖ್ಯತೆ ಪಡೆಯುವುದರ ಅರ್ಥ, ಜಾತಿ ದಬ್ಬಾಳಿಕೆಯೂ ಸೇರಿದಂತೆ ವರ್ಗ ಶೋಷಣೆ ಮತ್ತು ಎಲ್ಲ ರೀತಿಯ ದಬ್ಬಾಳಿಕೆಗಳ ವಿರುದ್ಧದ ಹೋರಾಟಗಳು ಬಂಡವಾಳಶಾಹಿಯನ್ನು ಕಿತ್ತೊಗೆಯುವ ಹೋರಾಟದಲ್ಲಿ ಐಕ್ಯವಾಗಿರುತ್ತವೆ ಎಂಬುದು" ಎಂದು ವಾದಿಸುತ್ತಾರೆ.

ನಾಡಿನ ಪ್ರಮುಖ ಎಡಚಿಂತಕ ಪ್ರೊ. ರಾಜೇಂದ್ರ ಚೆನ್ನಿ ತಮ್ಮ ಲೇಖನದಲ್ಲಿ "ಇತ್ತೀಚಿನ ವರ್ಷಗಳಲ್ಲಿ ಎಡಪಂಥೀಯ ಚಿಂತನೆಯು ಅಂಬೇಡ್ಕರ್ ಅವರನ್ನು ಗಂಭೀರವಾಗಿ ವಿಶ್ಲೇಷಿಸುತ್ತಿದೆ. ಈ ಪ್ರಯತ್ನವು ಒಂದು strategy ಮಾತ್ರವಲ್ಲ, ಪ್ರಾಮಾಣಿಕವಾದ, ಚಿಂತನೆಯಲ್ಲಾದ ಪಲ್ಲಟವೆಂದು ವಿಶ್ವಾಸ ಹುಟ್ಟಿಸಬೇಕಾಗಿದೆ. ಫ್ಯಾಸಿಜಮ್ ವಿರುದ್ಧದ ಹೋರಾಟಕ್ಕೆ ಅಂಬೇಡ್ಕರ್ ಚಿಂತನೆ ಹೋರಾಟಗಳ ಮರುಚೇತರಿಕೆ ಅಗತ್ಯ" ಎಂದು ವಾದಿಸುತ್ತಾರೆ.

ಕರ್ನಾಟಕದ ಕೆಲವು ಅಂಬೇಡ್ಕರ್‌ವಾದಿಗಳು ತಾವಾಗಲಿ ಅಂಬೇಡ್ಕರ್ ಆಗಲಿ ಎಡಪಂಥೀಯರೂ ಅಲ್ಲ ಬಲಪಂಥೀಯರೂ ಅಲ್ಲ ಎಂದು ವಾದಿಸುತ್ತಾರೆ. ಅಂಬೇಡ್ಕರ್‌ವಾದಿ ಮತ್ತು ಎಡಪಂಥೀಯ ಚಿಂತನೆ ಮತ್ತು ಚಳುವಳಿಗಳ ನಡುವೆ ಯಾವುದೇ ಸಮಾನ ಅಂಶಗಳು ಇಲ್ಲ. ಅವನ್ನು ಬೆಸೆಯುವ ಅಗತ್ಯವೂ ಇಲ್ಲ. ಸಾಧ್ಯವೂ ಇಲ್ಲ ಎನ್ನುತ್ತಾರೆ ಅವರು. ಸಿಪಿಐ(ಎಂ) ನಾಯಕ ಜಿ.ಎನ್. ನಾಗರಾಜ್ ತಮ್ಮ ಲೇಖನದಲ್ಲಿ – ಅಂಬೇಡ್ಕರ್ ಎಡಪಂಥೀಯರೇ ಎನ್ನುತ್ತ ಇವೆರಡರ ನಡುವಿನ ಸಮಾನ ಅಂಶಗಳನ್ನು ಎತ್ತಿ ತೋರಿಸುತ್ತಾ, ಈ ಎರಡು ಚಿಂತನೆ–ಚಳುವಳಿಗಳು ದೂರ ಸರಿದ ಚಾರಿತ್ರಿಕ ಕಾರಣಗಳನ್ನು ಶೋಧಿಸುತ್ತಾ, ಈಗ ಅವನ್ನು ಬೆಸೆಯಬೇಕಾದ ಅಗತ್ಯ ಮತ್ತು ಸಾಧ್ಯತೆ ಬಗ್ಗೆ ವಾದಿಸುತ್ತಾರೆ.

ಇದೇ ರೀತಿ ದಲಿತ ಕ್ಯಾಪಿಟಲಿಸಂ ಎಲ್ಲಾ ದಲಿತರ ವಿಮೋಚನೆಗೆ ಹಾದಿ ಎಂದು ಕೆಲವು ದಲಿತ ಬುದ್ಧಿಜೀವಿಗಳು ವಾದಿಸುತ್ತಿದ್ದಾರೆ. ಇದು ದಲಿತರ ಕ್ರಾಂತಿಕಾರಿ ಪರ್ಯಾಯವನ್ನು ತಡೆಯುವ ಆಳುವ ವರ್ಗಗಳ ಹುನ್ನಾರ ಎನ್ನುವಂತೆ ಕಾಣುತ್ತಿದೆ ಎನ್ನುತ್ತಾರೆ ಕೆ.ಪ್ರಕಾಶ್ ಆ ಬಗೆಗಿನ ತಮ್ಮ ಲೇಖನದಲ್ಲಿ.

ಈ ಸಂದರ್ಭದಲ್ಲಿ ಡಾ. ಅಂಬೇಡ್ಕರ್ ಅವರ ಜೀವನದ ಕೆಲವು ಅಧ್ಯಾಯಗಳನ್ನು ನೆನೆಯಲಾಗಿದೆ. 'ಬ್ಯಾರಿಸ್ಟರ್ ಆದ ಮೇಲೂ' ಅವರು ಅನುಭವಿಸಿದ ಜಾತಿ ತಾರತಮ್ಯ–ಅವಮಾನಗಳು, ಅವರು ನಡೆಸಿದ ಚಾರಿತ್ರಿಕ 'ಮಹಾಡ್ ಸತ್ಯಾಗ್ರಹ'ಗಳನ್ನು ಇಲ್ಲಿ ನೆನೆಸಲಾಗಿದೆ. ದಲಿತರು ಸಾರ್ವಜನಿಕ ಕೆರೆಯ ನೀರು ಕುಡಿಯುವ ಚಾರಿತ್ರಿಕ 'ಮಹಾಡ್ ಸತ್ಯಾಗ್ರಹ' ಅಂಬೇಡ್ಕರ್ ಮತ್ತು ಎಡಪಂಥೀಯರು ಸೇರಿ ಸಂಘಟಿಸಿದ ಮೊದಲ ದಲಿತ ಚಳುವಳಿಯನ್ನು ಮತ್ತು ಅದರ ಸಂಘಟಕ ಕಮ್ಯುನಿಸ್ಟ್ ನಾಯಕ ಆರ್.ಬಿ.ಮೋರೆಯವರನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳುವುದು ಸಮಯೋಚಿತ. ಡಾ. ಅಂಬೇಡ್ಕರ್ ಅವರ ಪ್ರಧಾನ ಕೃತಿಯಾದ 'ಜಾತಿ ವಿನಾಶ'ದ ಹಲವು ಪ್ರಸಿದ್ಧ ಉದ್ಧರಣೆಗಳನ್ನು ಕೊಡಲಾಗಿದೆ.

1950–80ರ ದಶಕದಲ್ಲಿ ಸಮರಶೀಲವಾಗಿದ್ದ ಅಂಬೇಡ್ಕರ್‌ವಾದಿ ಎಂದು ಹೇಳಿಕೊಳ್ಳುವ ದಲಿತ ಚಳುವಳಿಗಳು ಛಿದ್ರಗೊಂಡಿವೆ. ಇಲ್ಲವೇ ಶಿಥಿಲವಾಗಿವೆ. ಈ ಹಿನ್ನೆಲೆಯಲ್ಲಿ ಕಳೆದ ಎರಡು ದಶಕಗಳಿಂದ ಎಡಪಂಥೀಯ ದಲಿತ ಸಾಮಾಜಿಕ ಚಳುವಳಿಗಳು ಆರಂಭವಾಗಿವೆ. ಕರ್ನಾಟಕದ "ದಲಿತ ಹಕ್ಕುಗಳ ಸಮಿತಿ" ಸೇರಿದಂತೆ ಇಂತಹ ರಾಜ್ಯ ಮಟ್ಟದ ಚಳುವಳಿಗಳು "ದಲಿತ ಶೋಷಣ ಮುಕ್ತಿ ಮಂಚ್" (ಡಿ.ಎಸ್.ಎಂ.ಎಂ) ಎಂಬ ಅಖಿಲ ಬಾರತ ವೇದಿಕೆ ರಚಿಸಿಕೊಂಡಿವೆ. ಇಂತಹ ಆಂಧ್ರ ಪ್ರದೇಶದ ಕೆ.ಪಿ.ವಿ.ಎಸ್. ಮತ್ತು ತಮಿಳುನಾಡಿನ ಟಿ.ಎನ್.ಯು.ಇ.ಎಫ್.ಗಳ ಜಾತಿ–ಅಸ್ಪೃಶ್ಯತೆ ವಿರುದ್ಧ ಚಳುವಳಿಗಳಲ್ಲಿನ ಅನುಭವಗಳ ಕೆಲವು ಅಂಶಗಳನ್ನು ಇಲ್ಲಿ ಕೊಡಲಾಗಿದೆ.

ಡಾ.ಅಂಬೇಡ್ಕರ್ ಅವರ 125ನೇ ಜನ್ಮದಿನಾಚರಣೆಯನ್ನು ಪ್ರಸಕ್ತ ಸನ್ನಿವೇಶದಲ್ಲಿ ಅರ್ಥಪೂರ್ಣಗೊಳಿಸಲು ಸಂಸತ್ತಿನ ಒಂದು ವಿಶೇಷ ಅಧಿವೇಶನ ಕರೆದು ಸಾಮಾಜಿಕ ನ್ಯಾಯದ ಡಾ.ಅಂಬೇಡ್ಕರ್ ಅವರ ಅಪೂರ್ಣವಾಗಿ ಉಳಿದಿರುವ ಅಜೆಂಡಾವನ್ನು ಮತ್ತು ಕಣ್ಣೋಟವನ್ನು ಮುಂದೊಯ್ಯಲು ಕೈಗೊಳ್ಳಬೇಕಾದ ಪರಾಮರ್ಶೆ ಮತ್ತು ಶಾಸನಾತ್ಮಕ ಕ್ರಮಗಳ ಬಗ್ಗೆ ಗಂಭೀರ ಚರ್ಚೆ ನಡೆಸಬೇಕು ಎಂದು ಸಿಪಿಐ(ಎಂ) ಕಳೆದ ವರ್ಷದ ಎಪ್ರಿಲ್‌ನಿಂದಲೇ ಆಗ್ರಹಿಸುತ್ತ ಬಂದಿತ್ತು. ಕೊನೆಗೂ ವಿಶೇಷ ಅಧಿವೇಶನದ ಬದಲು ಮೋದಿ ಸರಕಾರ ಎರಡು ದಿನಗಳ ವಿಶೇಷ ಕಲಾಪಗಳನ್ನು ನಡೆಸಲು ನಿರ್ಧರಿಸಿತು. ಅದನ್ನಾದರೂ ಅರ್ಥಪೂರ್ಣವಾಗಿ ಬಳಸುವ ಬಗ್ಗೆ ಸಿಪಿಐ(ಎಂ) ಕೆಲವು ನಿರ್ದಿಷ್ಟ ಕ್ರಮಗಳನ್ನೂ ಸೂಚಿಸಿತು. ಆದರೆ ಹಿಂದುತ್ವದ ಅಸಮಾನತೆಯ ತತ್ವಕ್ಕೆ ಬದ್ಧವಾದ ಸರಕಾರಕ್ಕೆ ಅಂಬೇಡ್ಕರ್‌ರವರ ಸ್ವಾತಂತ್ರ್ಯ, ಸಮಾನತೆ ಮತ್ತು ಸೋದರತ್ವದ ಕಣ್ಣೋಟವನ್ನು ಮುಂದೊಯ್ಯುವದು ಖಂಡಿತಾ ಬೇಕಿಲ್ಲ. ರಾಜಕೀಯ ಲಾಭಕ್ಕೆ ಅವರ ಹೆಸರಷ್ಟೇ ಬೇಕು. ಅದು ಇತರೆಲ್ಲ ವಿಷಯಗಳಂತೆ ಇದನ್ನೂ ಒಂದು 'ಇವೆಂಟ್' ಆಗಿ ಮಾಡಿತಷ್ಟೇ.

ದೇಶದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯಗಳ ಆಚರಣೆಗಳಿಂದ ದಲಿತ ವಿದ್ಯಾರ್ಥಿಗಳು ತೀವ್ರವಾಗಿ ನೊಂದಿದ್ದರು. 2006ರಲ್ಲಿ ದೆಹಲಿಯ ಎ.ಐ.ಐ.ಎಂ.ಎಸ್. (ಏಮ್ಸ್)ನಲ್ಲಿ ಇಂತಹ ದೂರುಗಳು ಕೇಳಿ ಬಂದಾಗ ಆಗಿನ ಯು.ಪಿ.ಎ ಸರಕಾರ ಪ್ರೊ. ಸುಖದೇವ ಥೋರಟ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ರಚಿಸಿತು. ಆ ಸಮಿತಿಯ ವರದಿಯನ್ನು ಎ.ಐ.ಐ.ಎಂ.ಎಸ್. (ಏಮ್ಸ್) ತಿರಸ್ಕರಿಸಿತು. ಥೋರಟ್ ಸಮಿತಿ ವರದಿಯ ಬಗ್ಗೆ ಸರಕಾರವೂ ನಿರ್ಲಕ್ಷ್ಯ ತೋರಿತು. ಆದರೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯಗಳ ಆಚರಣೆಗಳು ಮುಂದುವರೆದಿದ್ದು ಹಲವಾರು ದಲಿತ ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ವರದಿಗಳು ಬಂದಿವೆ. ಹೈದರಾಬಾದ್ ವಿವಿಯ ರೋಹಿತ್ ವೆಮುಲಾ ಆತ್ಮಹತ್ಯೆ ಈ ವ್ಯಾಪಕ ಸಮಸ್ಯೆಯತ್ತ ಗಮನ ಸೆಳೆದಿದ್ದು ಅದರ ಪರಿಹಾರಕ್ಕೆ, ಮಹಿಳೆಯರ ಮೇಲಿನ ಅತ್ಯಾಚಾರದ ಬಗ್ಗೆ ನಿರ್ಭಯಾ ಕಾನೂನಿನಂತೆ, ದಲಿತ ವಿದ್ಯಾರ್ಥಿಗಳ ರಕ್ಷಣೆಗೆ 'ರೋಹಿತ್ ಕಾನೂನು' ತರಬೇಕೆಂದು ವಿದ್ಯಾರ್ಥಿ ಚಳುವಳಿ ಒಕ್ಕೊರಲಿನಿಂದ ಒತ್ತಾಯಿಸಿದೆ. ಈ ಹಿನ್ನೆಲೆಯಲ್ಲಿ ಥೋರಟ್ ಕಮಿಶನ್ ವರದಿಯ ಶಿಫಾರಸುಗಳನ್ನು ನೆನಪಿಸಿಕೊಳ್ಳಲಾಗಿದೆ.

ಅಂಬೇಡ್ಕರ್ 125ನೇ ಜನ್ಮದಿನೋತ್ಸವದ ಈ ವಾರದಲ್ಲಿ ಕರ್ನಾಟಕದ ದಲಿತರ ವಿರುದ್ಧ ಸಾಮಾಜಿಕ ದಬ್ಬಾಳಿಕೆಯ ಹಲವು ಪ್ರಕರಣಗಳು ಬೆಳಕಿಗೆ ಬಂದಿವೆ. ಸಿಗರನಹಳ್ಳಿಯ ದಲಿತರಿಗೆ ದೇವಸ್ಥಾನ ಪ್ರವೇಶ ನಿರಾಕರಿಸಿದ ಘಟನೆ ಬೂದಿ ಮುಚ್ಚಿದ ಕೆಂಡದಂತೆ ಇದ್ದ ಪುನಃ ಭುಗಿಲೆದ್ದಿದೆ. ಶಾಸಕ, ಲೋಕಸಭಾ ಸದಸ್ಯ ಯಥಾಪ್ರಕಾರ ದಲಿತರ ವಿರುದ್ಧ ಬೆಂಕಿ ಉಗುಳುತ್ತಿದ್ದಾರೆ. ಜಿಲ್ಲಾಡಳಿತ ದಲಿತರ ನೆರವಿಗೆ ಬಂದಿಲ್ಲ. ದೊಡ್ಡಬಳ್ಳಾಪುರದಲ್ಲಿ ಕಾನೂನಿನ ವಿರುದ್ಧವಾಗಿ ಕೊಚ್ಚೆ ಗುಂಡಿ ಶುದ್ದಗೊಳಿಸಲು ಇಳಿಸಲಾದ ಇಬ್ಬರು ಕಾರ್ಮಿಕರು ಮತ್ತು ಅವರ ನೆರವಿಗೆ ಧಾವಿಸಿದ ಇಬ್ಬರು ದಾರಿಹೋಕರು ಸತ್ತ ದಾರುಣ ಸುದ್ದಿ ಬಂದಿದೆ. ಮಂಡ್ಯದಿಂದ ವರದಿಯಾದ ಮರ್ಯಾದೆ ಗೇಡು ಹತ್ಯೆ ಹುಡುಗಿ ದಲಿತ ಹುಡುಗನ ಜತೆ ಪ್ರೇಮಕ್ಕೆ ಸಂಬಂಧಿಸಿದ್ದು ಎನ್ನಲಾಗಿದೆ. ಇನ್ನು ಆ ದಲಿತ ಹುಡುಗನಿಗೆ ಏನು ಕಾದಿದೆಯೋ? ಕುಖ್ಯಾತ ಕಂಬಾಲಪಲ್ಲಿ ಪ್ರಕರಣ, ಮರಕುಂಬಿ ವೀರೇಶನ ಕೊಲೆ, ಚಾಮರಾಜನಗರದ ದಲಿತರ ಕೈ ಕಡಿದ ಪ್ರಕರಣ ಮುಂತಾದ ಅತ್ಯಂತ ಹೀನಾಯ ದೌರ್ಜನ್ಯ ಪ್ರಕರಣಗಳಲ್ಲಿ ಸಹ ಅಪರಾಧಿಗಳಿಗೆ ಶಿಕ್ಷೆ ಆಗಿಲ್ಲ. ಕಳೆದ ಮೂರು ವರ್ಷಗಳಲ್ಲಿ ದಾಖಲಾದ (ದಾಖಲಾಗದವೆಷ್ಟೋ) 5922 ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಕೇವಲ 165 ಅಪರಾಧಿಗಳಿಗೆ ಶಿಕ್ಷೆ ಆಗಿದೆ.

ಈ ದಾರುಣ ಪರಿಸ್ಥಿತಿ ಬದಲಾಗಬೇಕಾದರೆ ಸಾಮಾಜಿಕ ದಬ್ಬಾಳಿಕೆ ಮತ್ತು ಆರ್ಥಿಕ ಶೋಷಣೆ ವಿರುದ್ಧ ದಲಿತರನ್ನು ಸಂಘಟಿಸಿ ತೀವ್ರ ಪ್ರತಿರೋಧ ಒಡ್ಡಬೇಕಾಗಿದೆ. ಇದಕ್ಕಾಗಿ ಅಂಬೇಡ್ಕರ್‌ವಾದಿ ಮತ್ತು ಎಡಪಂಥೀಯ ಚಿಂತನೆ–ಚಳುವಳಿಗಳನ್ನು ಬೆಸೆಯಬೇಕಾಗಿದೆ. ಇಂತಹ ಬೆಸೆಯುವಿಕೆ ವಿದ್ಯಾರ್ಥಿ ಚಳುವಳಿಯಲ್ಲಿ ಗಮನಾರ್ಹವಾಗಿ ನಡೆದಿದೆ. ಆದ್ದರಿಂದಲೇ ಕೇಂದ್ರ ಸರಕಾರ ವಿದ್ಯಾರ್ಥಿ ಚಳುವಳಿಯ ಬಗ್ಗೆ ಗಾಬರಿಗೊಂಡು ತೀವ್ರ ದಾಳಿ ನಡೆಸುತ್ತಿರುವುದು. ಈ ಬೆಸೆಯುವಿಕೆ ದುಡಿಯುವ ಜನರ ಚಳುವಳಿಯಲ್ಲೂ ಬರಬೇಕಾಗಿದೆ.

ನೀಲಿ ಬಾನಿನಲ್ಲಿ ಕೆಂಪು ಸೂರ್ಯ ಉದಯಿಸಬೇಕು !

ಬಿಜೆಪಿ ರಾಜ್ಯ ವಿಶೇಷ ಕಾರ್ಯಕಾರಿಣಿ:

ಒಡಕಿನ ಮನೆಯಲ್ಲಿ ತೋರಿಕೆಯ 'ಹೋರಾಡುವ' ಸಂಕಲ್ಪ!

– ಎಸ್. ವೈ. ಗುರುಶಾಂತ್

ಕರ್ನಾಟಕ ವಿಧಾನ ಸಭೆಯ ಬಜೆಟ್ ಅಧಿವೇಶನ ಮುಗಿಯುತ್ತಿದ್ದಂತೆ ಭಾರತೀಯ ಜನತಾ ಪಕ್ಷ ತನ್ನ ರಾಜ್ಯ ಕಾರ್ಯಕಾರಿ ಸಮಿತಿಯ 'ವಿಶೇಷ' ಅಧಿವೇಶನವನ್ನು ನಡೆಸಿತು. 2016 ರ ಏಪ್ರಿಲ್ 1 ರಂದು ಬೆಂಗಳೂರಿನಲ್ಲಿ ನಡೆದ ಈ ಸಭೆಯ ಒಟ್ಟು ಕಲಾಪಗಳನ್ನು ಅವಲೋಕಿಸಿದರೆ ರಾಜ್ಯದಲ್ಲಿ ಆಡಳಿತರೂಢ ಕಾಂಗ್ರೆಸ್ ಪಕ್ಷಕ್ಕೆ ತಾನೇ ಪರ್ಯಾಯವೆಂದು ಬಿಂಬಿಸಿಕೊಳ್ಳುವ ಪ್ರಯತ್ನದಲ್ಲಿ ಬಿಜೆಪಿ ಇರುವುದು ಸ್ಪಷ್ಟ. ತನ್ನ ಈ ರಾಜಕೀಯ ತಂತ್ರಗಾರಿಕೆಯನ್ನು ಗಟ್ಟಿಗೊಳಿಸುವ ಒಂದು ಹಂತದ ಕಸರತ್ತಿಗೆ ಇದು ವೇದಿಕೆಯಾಗಿತ್ತು. ಮಾತ್ರವಲ್ಲ, ಅವಧಿ ಮುಗಿದ ಅಧ್ಯಕ್ಷರನ್ನು ಬದಲಾಯಿಸುವ ಅಜೆಂಡಾವನ್ನು ಪ್ರಚುರ ಪಡಿಸಲಾಗಿತ್ತು. ಅದ-ರೆ ಅಧಿಕಾರದಾಹಿಗಳಿಂದ ತುಂಬಿದ ಒಡೆದ ಮನೆಯಾಗಿರುವ ಬಿಜೆಪಿಯಲ್ಲಿ ಅದು ಅಷ್ಟು ಸರಳವಲ್ಲ ಎಂಬುದೂ ಮರು ಸಾಬೀತಾಯಿತು.

ಬೈಠಕ್‌ನಲ್ಲಿ ಪಾಠ

ವಿಶೇಷವೆಂದರೆ ಇದಕ್ಕೆ ಹಿನ್ನೆಲೆಯಾಗಿ ಕೆಲವೇ ದಿನಗಳ ಮೊದಲೇ ಬಿಜೆಪಿ ನಾಯಕತ್ವದಲ್ಲಿರುವ 'ಸ್ವಯಂ ಸೇವಕ'ರೊಂದಿಗೆ ಆರೆಸ್ಸೆಸ್ ಪ್ರಮುಖರು ಸುದೀರ್ಘ ಬೈಠಕ್‌ನ್ನು ನಡೆಸಿದ್ದರು! ತಾನು ರಾಜಕೀಯದಿಂದ ದೂರವೆಂದೂ, ತನ್ನದೇನಿದ್ದರೂ ಸಾಂಸ್ಕೃತಿಕ ಸಂಘಟನೆಯೆಂದೂ ಅದು ಹೇಳಿಕೊಳ್ಳುವುದನ್ನು ಈಗ ಕೈ ಬಿಟ್ಟಿದೆ! ಯಾ-ಕೆಂದರೆ ಹಾಗೆ ಹೇಳಿದರೂ ಯಾರೂ ನಂಬುವ ಸ್ಥಿತಿಯಲ್ಲಿ ಜನರೂ ಇಲ್ಲ. ಅಷ್ಟು ನೇರಾ ನೇರವಾಗಿ ರಾಜಕಾರಣದಲ್ಲಿ ಕೈಯಾಡಿಸುತ್ತಿರುವುದು ಎದ್ದು ಕಾಣುತ್ತಿದೆ. ಮತ್ತು ಬಿಜೆಪಿ–ಮತ್ತದರ ಅಧಿಕಾರದ ಫಲಗಳ ಅಧಿಕೃತ ಪಾಲುದಾರನೂ ಆಗಿದೆ. ಇಂತಹ ಕೇಶವ ಕೃಪದ ಗುರುವಿನ ಸಮ್ಮುಖದಲ್ಲಿ ನಡೆದ ಆ 'ಮಾರ್ಗದರ್ಶಕ' ಸಭೆಯಲ್ಲಿ ಸಿದ್ದರಾಮಯ್ಯನವರ ನೇತೃತ್ವದಲ್ಲಿರುವ ಕಾಂಗ್ರೆಸ್ ಪಕ್ಷವನ್ನು ಅದರ 'ಅಹಿಂದ' ಸಮೀಕರಣವನ್ನು ಒಡೆಯುವುದು, ದುರ್ಬಲಗೊಳಿಸುವುದು ಅಥವಾ ಎದುರಿಸುವುದು ಹೇಗೆ ಎಂಬ ಬಗ್ಗೆ ಹಲವಾರು ಸೂತ್ರಗಳನ್ನು ಸೂಚಿಸಿತ್ತು.

ಮುಖ್ಯವಾಗಿ ಬಿಜೆಪಿ ಪಕ್ಷವು ಕಾಂಗ್ರೆಸ್‌ನ್ನು ಎದುರಿಸುವಲ್ಲಿ ಮತ್ತು ಪರ್ಯಾಯವಾಗಿ ಬಿಂಬಿಸಿಕೊಳ್ಳುವುದರಲ್ಲಿ ಹಿಂದೆ ಬೀಳಬಾರದು, ಅದೇ ಹೊತ್ತಿನಲ್ಲಿ ತನ್ನ ಹಿಂದಿರುವ ಜಾತಿಗಳ ಸಮೀಕರಣದಲ್ಲಿ ಕೊಂಚ ಬದಲಾವಣೆ ತರುವ ಬಗ್ಗೆ ಅಂದರೆ ಕಾಂಗ್ರೆಸ್‌ನ ಮತಗಳ ನೆಲೆಯಿಂದ ಆಚೆಗೆ ಇರುವ ಪರಿಶಿಷ್ಟ ಜಾತಿಯಲ್ಲಿನ ಎಡಗೈ ಸಮುದಾಯವನ್ನು ಸೆಳೆದರೆ ಹೇಗೆ? ಅವರ ಸಂಖ್ಯೆ ಶೇ.9 ಇರುವುದರಿಂದ ಅವರನ್ನು ಸೆಳೆದರೆ ಮುಂದಿನ ಚುನಾವಣೆಯಲ್ಲಿ ಗೆಲುವಿಗೆ ಸುಲಭವಾದೀತೇ? ಅದಕ್ಕಾಗಿ ಆ ಸಮುದಾಯದಿಂದಲೇ ರಾಜ್ಯ ಅಧ್ಯಕ್ಷರನ್ನಾಗಿಸಿದರೆ ಹೇಗೆ ಎಂಬಂತಹ ಲೆಕ್ಕಗಳನ್ನು ಅಲ್ಲಿ ಮಂಡಿಸಲಾಗಿತ್ತು. ಹೇಗೂ ಲಿಂಗಾಯತರಂತಹ ಪ್ರಬಲ ಜಾತಿಗಳ ಬೆಂಬಲವಂತೂ ಇದ್ದೇ ಇದೆ ಎನ್ನುವ ಅಭಿಪ್ರಾಯ ಅದರದು. ಇಂತಹ ಲೆಕ್ಕಾಚಾರಗಳ ಹಿನ್ನೆಲೆಯಲ್ಲಿ ಈ ಸಭೆ ಮಹತ್ವದ್ದಾಗಿತ್ತು.

ಆಗದ ಅಧ್ಯಕ್ಷರ ಆಯ್ಕೆ

ಈ ದೃಷ್ಟಿಯಲ್ಲೇ ಅಧಿವೇಶನದ ಮೊದಲು ರಾಜ್ಯಾಧ್ಯಕ್ಷರ ಬದಲಾವಣೆ ಅರ್ಥಾತ್ ಹೊಸ ಅಧ್ಯಕ್ಷರ ಆಯ್ಕೆಯನ್ನು ಇಲ್ಲೇ ಆಗಲಿದೆಯೆಂದು ಮಾಧ್ಯಮಗಳಲ್ಲಿ ಸುದ್ದಿಯನ್ನು ತೇಲಿ ಬಿಡಲಾಗಿತ್ತು. ಮತ್ತು ಸಂಭವನೀಯ ಅಭ್ಯರ್ಥಿಗಳ ಹೆಸರುಗಳ ಜೊತೆಗೆ ಗುಣಾವಗುಣಗಳ ಗಾನವೂ ಹರಿಯಿತು. ಮಂಗಳೂರಿನ ಸಂಸದ ನಳಿನ್‌ಕುಮಾರ್ ಕಟೀಲು ನಿಂದ ಹಿಡಿದು ಸಿ.ಟಿ.ರವಿ, ಜಿಗಜಿಣಗಿ, ಕೊನೆಗೆ ಯಡ್ಯೂರಪ್ಪನವರ ಹೆಸರುಗಳೂ ಬಂದವು. ಹೀಗೆ ಮಾಧ್ಯಮಗಳನ್ನು ಕುತೂಹಲದ ಬಾಗಿಲಿನಲ್ಲಿ ನಿಲ್ಲಿಸಲಾಗಿತ್ತು. ಆದರೆ ಈ ವಿಶೇಷ ಅಧಿವೇಶನದಲ್ಲಿ ಅಧ್ಯಕ್ಷರ ಆಯ್ಕೆಯ ಅಜೆಂಡಾವೇ ಮಾಯವಾಗಿತ್ತು! ಇದರ ಪ್ರದರ್ಶನವೆಂಬಂತೆ ಮಾಜಿ ಮುಖ್ಯಮಂತ್ರಿ, ಸಂಸದ ಯಡ್ಯೂರಪ್ಪನವರು ಅಧಿವೇಶನದ ಕಲಾಪಗಳಿಂದ ಅದೃಶ್ಯರಾಗಿ ಗಮನ ಸೆಳೆದರು. ಅವರು ಸಂಜೆಯ ಕಲಾಪದಲ್ಲಿ ಕಾಣಿಸಿಕೊಂಡರೂ ಅವರ ಮುನಿಸಿನ ಪ್ರಭಾವ ಎದ್ದು ಕಾಣುತ್ತಿತ್ತು. ತನ್ನನ್ನು ಪಕ್ಷಾಧ್ಯಕ್ಷನನ್ನಾಗಿಸಬೇಕು, ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಿಸಬೇಕೆಂಬ ಪಟ್ಟು ಬಿ.ಎಸ್. ವೈ. ಯವರಲ್ಲಿದೆ. ತಾನೀಗ ಎಲ್ಲಾ ಕಳಂಕಗಳಿಂದ ಮುಕ್ತ! ಮೇಲಾಗಿ ಜಾತಿಯ ಪ್ರತಿನಿಧಿ. ಈ 'ಅರ್ಹತೆ' ಇರುವಾಗಲೂ ಬಹುಶಃ ಆರೆಸ್ಸೆಸ್‌ನ ರಾಜಕೀಯ ತಂತ್ರದ ಚಿಂತನಾ ಲಹರಿಯನ್ನು ಪರಿಗಣಿಸಿಯೇ ಅವರು ಗೈರು ಹಾಜರಾಗಿದ್ದಲ್ಲದೇ ದೆಹಲಿಗೆ ಹೋಗಿ ಬಿಜೆಪಿ ರಾಷ್ಟ್ರಾಧ್ಯಕ್ಷ ಅಮಿತ್ ಷಾ ರವರ ಮುಂದೆ ಅಹವಾಲು ಸಲ್ಲಿಸಿ ಒತ್ತಡ ಹಾಕಿಯೂ ಆಗಿದೆ.

ಮುಗಿಯದ ಕಿತ್ತಾಟ

ಆದರೆ ಆರೆಸ್ಸೆಸ್‌ನಲ್ಲೂ ಮತ್ತು ಉಳಿದ ಬಿಜೆಪಿ ನಾಯಕರಲ್ಲೂ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಯಾರೂ ಸಿಗದೇ ಪರ್ಯಾಯವೇ ಇಲ್ಲವೆಂದಾದರೆ ಮಾತ್ರವೇ ಯಡ್ಯೂರಪ್ಪನವರ ಹೆಸರನ್ನು ಪರಿಶೀಲಿಸಬಹುದು ಎಂಬ ನಿಲುವಿದೆ. ಇತರೆ ಹಲವು ಹೆಸರುಗಳನ್ನು ಚಾಲ್ತಿಗೆ ಬಿಟ್ಟಿರುವುದರಿಂದ ಯಡ್ಯೂರಪ್ಪ ಪ್ರಶ್ನಾತೀತ ನಾಯಕರೇನೂ ಅಲ್ಲ ಮತ್ತು ಹುದ್ದೆ ಆಕಾಂ-ಕ್ಷಿ ಹುಟ್ಟು ಹಾಕಿರುವುದರಿಂದ ಸ್ಪರ್ಧಾಳುಗಳ ಕಣ ಸೃಷ್ಟಿಯೂ ಆಗಿದೆ. ಏನಿದ್ದರೂ ಈ ಬಾರಿ ಆರೆಸ್ಸೆಸ್ ತನ್ನ ಹಿಡಿತದಲ್ಲಿರುವವರೇ ಮುಂದಿನ ನಾಯಕರು ಎಂಬುದಂತೂ ಖಚಿತವಿದೆ. ಪಕ್ಷದ ಅಧ್ಯಕ್ಷ ಸ್ಥಾನ ಮತ್ತು ಮುಖ್ಯಮಂತ್ರಿ ಹುದ್ದೆ ಬೇ-ರೆಯಾಗಿಯೇ ತೋರಿಸುವ ತಂತ್ರವೂ ಅಲ್ಲಿ ಚಾಲ್ತಿಯಲ್ಲಿದೆ. ಹೀಗಿದ್ದರೂ ತರಾತುರಿಯಲ್ಲಿ ಆಯ್ಕೆ ಬೇಡವೆಂದು ಆ ಪ್ರಸ್ತಾಪವನ್ನೇ ಕೈ ಬಿಡಲಾಗಿತ್ತು. ಇಂತಹ ಸೂಚನೆಯ ಬಳಿಕವೇ ಯಡ್ಯೂರಪ್ಪನವರು ಮತ್ತೆ ಅಲ್ಲಿ ಕಾಣಿಸಿಕೊಂಡಿದ್ದು. ಈ ಒಟ್ಟು ಪ್ರಹಸನ ಬಿಜೆಪಿಯೊಳಗೆ ಅಧಿಕಾರಕ್ಕಾಗಿ ನಡೆದಿರುವ ಕಿತ್ತಾಟವನ್ನು ಮತ್ತು ಮುಂದೆ ಗುಂಪುಗಾರಿಕೆಯ ಹಲವು ಸ್ಫೋಟಗಳು ಸಂಭವಿಸುವ ಸಾಧ್ಯತೆಯನ್ನೂ ಮತ್ತೇ ತೋರಿಸಿತು.

ನಾಯ್ಡು ಹೇಳಿದ ಜೋಕ್!

ಅಧಿವೇಶನಕ್ಕೆ ಅಮಿತ್ ಷಾ ಬರಲಿಲ್ಲ. ಬದಲಾಗಿ ಕೇಂದ್ರ ಸಚಿವ ವೆಂಕಯ್ಯನಾಯ್ಡು ಉದ್ಘಾಟಿಸಿ ರಾಜ್ಯ ಸರಕಾರದ ವಿರುದ್ಧವೆ ಮಾತನಾಡಿದರು. ವಿಚಿತ್ರವೆಂದರೆ ಮೋದಿ ಸರಕಾರ ನುಡಿದಂತೆ ನಡೆದು ಎಲ್ಲಾ ಭರವಸೆಗಳನ್ನು ಈಡೇರಿಸಿ ಈಗ ಹೊಸ ಹಂತಕ್ಕೆ ದೇಶವನ್ನು ಕೊಂಡೊಯ್ಯುತ್ತಿರುವುದಾಗಿ ಹೇಳಿದ್ದು.

ರಾಜ್ಯದಲ್ಲಿನ ಬರಕ್ಕೆ 1541 ಕೋಟಿ ಕೊಟ್ಟದ್ದು, ತೆರಿಗೆ ಸಂಗ್ರಹದಲ್ಲಿ ಶೇ.42 ರಾಜ್ಯಗಳಿಗೆ ಕೊಟ್ಟಿರುವುದನ್ನು ಬಳಸಿಲ್ಲವೆಂದೂ ಹೇಳಿದ್ದು ಮೊನ್ನೆ ಬಜೆಟ್ ಅಧಿವೇಶನದ ಆರಂಭದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಎತ್ತಲಾದ ಪ್ರಶ್ನೆಗೆ ಉತ್ತರವಾಗಿತ್ತು. ನಾಯ್ಡು ಹೇಳಿದ ದೊಡ್ಡ ಜೋಕ್ ಎಂದರೆ ' ಕಾಂಗ್ರೆಸ್ ಬಡವರ ಪಕ್ಷವೆಂದು ಹೇಳುತ್ತಿದೆ. ಆದರೆ ನಿಜಕ್ಕೂ ತಮ್ಮ ಬಿಜೆಪಿಯೇ ಬಡವರ ಪಕ್ಷ' ಎಂದದ್ದು! ಈ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಈಗಲೂ ಬಡವರ ಪಕ್ಷಗಳು ಎಂದು ಜನರನ್ನು ನಂಬಿಸಲು ಹೆಣಗುತ್ತಿವೆಯಲ್ಲಾ! ಎಂಥಹ ವಿಪರ್ಯಾಸ!

ಎಲ್ಲಿದೆ ಪ್ರಾಮಾಣಿಕತೆ?

ಈ ಅಧಿವೇಶನದ ಕಲಾಪದಲ್ಲಿ ಕಾಂಗ್ರೆಸ್ ಸರಕಾರದ ವಿರುದ್ಧ ಹೋರಾಡುವ ಮೂರು ಪ್ರಮುಖ ವಿಷಯಗಳ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಎಸಿಬಿ ರಚನೆ ವಿರುದ್ಧ, ವಕ್ಫ್ ಆಸ್ತಿಯ ಕಬಳಿಕೆ ಕುರಿತ ಮಣಿಪ್ಪಾಡಿ ವರದಿ, ಪಿಯುಸಿ ರಸಾಯನ ಪ್ರಶ್ನೆ ಪತ್ರಿಕೆ ಸೋರಿಕೆ, ಕೆಲ ಕಾರ್ಯಕರ್ತರ ಹತ್ಯೆಗಳ ಕುರಿತು ರಾಜ್ಯಾದ್ಯಂತ ಎಪ್ರಿಲ್ ತಿಂಗಳಲ್ಲಿ ಬೃಹತ್ ಆಂದೋಲನ ನಡೆಸಿ, ಮೈಸೂರಿನಲ್ಲಿ ಸಮಾವೇಶದಲ್ಲಿ ಸಮಾರೋಪಿಸುವುದು ಎಂದು ನಿರ್ಧರಿಸಿದೆ. ಅಲ್ಲದೇ ಬರದ ಅಧ್ಯಯನಕ್ಕೆ 12 ತಂಡಗಳು ರಾಜ್ಯಾದ್ಯಂತ ಪ್ರವಾಸ ಮಾಡಲಿವೆಯಂತೆ. ಕಾಂಗ್ರೆಸ್‌ನ ದುರಾಡಳಿತದಿಂದ ರಾಜ್ಯವನ್ನು ಪಾರು ಮಾಡಲಿ, ಸುಶಾಸನಕ್ಕೆ ನಾಂದಿ ಹಾಡಲಿ ಎಂಬುದು ಅವರ ಕರೆ! ಗಮನಿಸಬೇಕಾದ ಸಂಗತಿಯೆಂದರೆ ಈ ಯಾವ ಪ್ರಶ್ನೆಗಳ ಬಗ್ಗೆಯೂ ಬಿಜೆಪಿಗೆ ಕನಿಷ್ಠ ಕಾಳಜಿ ಇಲ್ಲ. ರಾಜ್ಯದಲ್ಲಿ ಭೀಕರ ಬರ ತಲೆದೋರಿಸದಿರುವುದು, ನೀರು, ಮೇವಿಗೆ, ಅನ್ನಕ್ಕೆ ಜನ–ಜಾನುವಾರುಗಳು ಹಪಾಹಪಿಸುವುದು ಅವರಿಗೆ ಕಾಣಿಸುವುದಿಲ್ಲವೇ? ಕಳೆದ ಒಂದು ವರುಷದಿಂದಲೂ ಮಳೆಯಿಲ್ಲದೇ 126 ತಾಲೂಕುಗಳು ಕಷ್ಟ ಎದುರಿಸುತ್ತಿವೆ. ಉದ್ಯೋಗ ಖಾತ್ರಿ ಯೋಜನೆಗೂ ಹಣ ಕಡಿತ ಮಾಡಿದ ಮೋದಿ ಸರಕಾರದ ಕಾಳಜಿ ಯೇನು? ಕೇಂದ್ರದಿಂದ ಹೆಚ್ಚಿನ ನೆರವನ್ನು ತರಲು ಕಿಂಚಿತ್ತೂ ಪ್ರಯತ್ನವನ್ನೇ ಮಾಡದ ಬಿಜೆಪಿ ಈಗ ಬಿಡುಗಡೆಯಾದ ಅಲ್ಪ ನೆರವನ್ನೇ ಮಹಾದಾನವೆಂಬಂತೆ ಆಡುತ್ತಿರುವುದಕ್ಕೆ ಅದಕ್ಕೆ ನಾಚಿಕೆ ಇಲ್ಲ. ಬರದ ಪ್ರವಾಸವೆಂಬುದು ನಾಯಕರ ಪ್ರಚಾರ ಬಿಟ್ಟರೆ ಏನಾದೀತು?

ಇನ್ನು ಎಸಿಬಿ ವಿಚಾರದಲ್ಲಿ ವಿಧಾನ ಸಭೆಯಲ್ಲೇ ಬಿಜೆಪಿ ಪರಿಣಾಮಕಾರಿ ಪಾತ್ರ ವಹಿಸಲಿಲ್ಲ ಎಂಬ ವ್ಯಾಪಕ ಟೀಕೆಗಳೂ ಕೇಳಿ ಬಂದಿವೆ. ಕೇಂದ್ರದಲ್ಲಿ ಸಿಬಿಐ ಯನ್ನು ಮನ ಬಂದಂತೆ ತನ್ನ ರಾಜಕೀಯ ದುರುದ್ದೇಶಗಳಿಗೆ ಬಳಸುವ ಅವರು, ನೂರಾರು ಹಗರಣಗಳು, ಭ್ರಷ್ಟಾಚಾರದಲ್ಲಿ ಮುಳುಗೆದ್ದವರು ಈ ವಿಷಯದಲ್ಲಿ ಅದೆಷ್ಟು ಪ್ರಾಮಾಣಿಕರು? ಇವರ ಕಾಲದಲ್ಲೇ ಲೋಕಾಯುಕ್ತದ ಕತ್ತು ಹಿಸುಕಲಿಲ್ಲವೇ? ಪ್ರಶ್ನೆ ಪತ್ರಿಕೆಯ ಬಯಲಾದಾಗ ಅದೆಂತಹ ಕಠಿಣ ಕ್ರಮ ವಹಿಸಿದರು? ವ್ಯಾಪಂ ಹಗರಣದಲ್ಲಿ ನೂರಾರು ಪಾತಕಗಳು ಘಟಿಸುತ್ತಿರುವುದಾದರೂ ಯಾ-ಕೆ? ಎಲ್ಲಿಂದ? ಮುಖ್ಯ ಸಂಗತಿಯೆಂದರೆ ಇಂದು ಕಾಂಗ್ರೆಸ್‌ನ ವಿರುದ್ಧ ಚಳುವಳಿ ನಡೆಸಿ, ತಾನೇ ಪರ್ಯಾಯ ಎಂದು ಡಂಗುರ ಹೊಡೆಯಲಿರುವ ಬಿಜೆಪಿಗೆ ಯಾವ ನೈತಿಕತೆಯೂ ಇಲ್ಲ ಎಂಬುದು. ಈಗಾಗಲೇ ರಾಜ್ಯದಲ್ಲಿ ಸಂಘಪರಿವಾರ ಅನೇಕ ಕಡೆ ವಿವಿಧ ನೆಪಗಳನ್ನೆತ್ತಿ ಕೋಮು ಗಲಭೆ, ಹಿಂಸಾಚಾರ ನಡೆಸುತ್ತಿರುವ ಕೃತ್ಯಗಳು ನಡದೇ ಇವೆ. ಕೇವಲ ಕಾಂಗ್ರೆಸ್‌ನ ವಿರುದ್ಧದ ಅತೃಪ್ತಿಯನ್ನು ಬಳಸಿ ಪರ್ಯಾಯವೆಂದು ತೋರಿಸುವುದು, ತನ್ನ ಹಿಂದಿನ ಪಾತಕಗಳನ್ನು ಮರೆಸುವುದು ಅದರ ಗುರಿ ಹೊರತು ಜನರ ಬಗೆಗಿನ ನಿಜ ಕಾಳಜಿಯಲ್ಲ.

ಇಂತಹ ಬಿಜೆಪಿ ನಿಮ್ಮಲ್ಲಿಗೆ ಬಂದಾಗ ಹೇಗೆ ಸ್ವಾಗತಿಸುವಿರಿ?



ದೊಡ್ಡಬಳ್ಳಾಪುರ: ಮ್ಯಾನ್‌ಹೋಲ್ ಪುನಃ ಸಾವಿನ ಕೂಪ

ಮ್ಯಾನ್‌ಹೋಲ್‌ನಲ್ಲಿ ಕೆಲಸ ಮಾಡುವ ಸಂದರ್ಭದಲ್ಲಿ ಇಬ್ಬರು ಪೌರಕಾರ್ಮಿಕರು ಮತ್ತು ಅವರನ್ನು ರಕ್ಷಿಸಲು ಹೋದ ಇಬ್ಬರು ಸೇರಿ ನಾಲ್ಕು ಜನರ ಸಾವಿಗೆ ಇತ್ತೀಚಿಗೆ ಏಪ್ರಿಲ್ 3ರಂದು ದೊಡ್ಡಬಳ್ಳಾಪುರದಲ್ಲಿ ಮತ್ತೆ ಸಂಭವಿಸಿದೆ.

ಕೆಲವು ತಿಂಗಳ ಹಿಂದೆ ತುಮಕೂರಿನಲ್ಲಿ ಪೌರ ಕಾರ್ಮಿಕರು ಸ್ವಚ್ಛತೆಗಾಗಿ ಯುಜಿಡಿಗೆ ಇಳಿದ ಸಂದರ್ಭದಲ್ಲಿ ಸಾವನ್ನಪ್ಪಿರುವ ಘಟನೆ ಇನ್ನೂ ಹಸಿ ಆಗಿರುವಾಗಲೇ, ಮತ್ತೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲ್ಲೂಕಿನ ದರ್ಗಾಪುರದಲ್ಲಿ ನಡೆದಿದೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಮುನಿಸ್ವಾಮಿ(45), ಆಂಧ್ರಪ್ರದೇಶ ಜಿಲ್ಲೆಯ ಚಿತ್ತೂರು ಜಿಲ್ಲೆ ಪಲಮನೇರು ತಾಲ್ಲೂಕಿನ ಮೂಲತಿಮ್ಮನಹಳ್ಳಿ ಗ್ರಾಮದ ಜಗನ್ನಾಥ್(24) ಎಂಬ ಪೌರಕಾರ್ಮಿಕರು ಸಾವನ್ನಪ್ಪಿದ್ದಾರೆ.

ಕಾರ್ಮಿಕರನ್ನು ರಕ್ಷಿಸಲು ಹೋದ ದೊಡ್ಡಬಳ್ಳಾಪುರ ನಗರದ ವನ್ನಿಗರಪೇಟೆ ನಿವಾಸಿ ಮಧು(21) ಮತ್ತು ಹಮಾಮ್ ಗ್ರಾಮದ ಮುನಿರಾಜು(22) ಸಹ ಮೃತಪಟ್ಟದ್ದಾರೆ.

ಒಳಚರಂಡಿ ಸ್ವಚ್ಛಗೊಳಿಸಲು 14 ಅಡಿ ಆಳವಾಗಿದ್ದ ಮ್ಯಾನ್‌ಹೋಲ್‌ನಲ್ಲಿ ಮುನಿಸ್ವಾಮಿ ಒಳಕ್ಕೆ ಇಳಿದ್ದಾರೆ. ವಿಪರೀತವಾಗಿ ಮಿಥೇನ್ ಗ್ಯಾಸ್ ತುಂಬಿಕೊಂಡಿದ್ದರಿಂದ ಉಸಿರಾಟಕ್ಕೆ ತೊಂದರೆ-ಯಾಗಿದೆ. ಮುನಿಸ್ವಾಮಿಯನ್ನು ಮೇಲೆ ಎತ್ತಲು ಜಗನ್ನಾಥ್ ಸಹ ಇಳಿಸಿದ್ದಾರೆ.

ಇಬ್ಬರು ಕಾರ್ಮಿಕರು ಮ್ಯಾನ್‌ಹೋಲ್‌ನಲ್ಲಿ ಸಿಕ್ಕಿ ಕೂಗಿಕೊಳ್ಳುತ್ತಿರುವುದನ್ನು ಗಮನಿಸಿದ ಮಧು ಮತ್ತು ಮುನಿರಾಜು ಅವರನ್ನು ರಕ್ಷಿಸಲು ಮುಂದಾದಾಗ ಅವರು ಸಹ ಮ್ಯಾನ್‌ಹೋಲ್‌ನಲ್ಲಿ ಬಿದ್ದಿದ್ದರಿಂದ ಸಾವನ್ನಪ್ಪಿದ್ದಾರೆ.

ಹೈದರಾಬಾದ್ ಮೂಲಕ ಗುತ್ತಿಗೆ ಕಂಪನಿ :

ಒಳಚರಂಡಿ ಸ್ವಚ್ಛಗೊಳಿಸಲು ಹೈದರಾಬಾದ್ ಮೂಲದ ರಾವುಸ್ ಕಂಪನಿಯು 2009ರಿಂದ ರೂ.29 ಕೋಟಿ ವೆಚ್ಚದಲ್ಲಿ ಗುತ್ತಿಗೆ ಪಡೆದಿದೆ. ಗುತ್ತಿಗೆದಾರರನ್ನು ಬಂಧಿಸಬೇಕೆಂದು, ನಗರ ಆಡಳಿತ ಮೇಲೆ ಕ್ರಮ ಜರುಗಿಸಬೇಕೆಂದು ಸಿಪಿಐ(ಎಂ) ಮತ್ತು ಕನ್ನಡಪರ ಸಂಘಟನೆಗಳು ಕೂಡಲೇ ಪ್ರತಿಭಟನೆ ನಡೆಸಿದ್ದಾರೆ.

ನಗರಸಭಾ ಆಡಳಿತ ಅಧಿಕಾರಿಗಳ ಮೇಲೆ ಮೊಕದ್ದಮೆ ದಾಖಲಾಗಿದೆ. ಆಂಧ್ರ ಮೂಲದವರಾದ ಗುತ್ತಿಗೆದಾರರನ್ನು ಬಂಧಿಸಲು ವಿಶೇಷ ಪೊಲೀಸ್ ತಂಡ ರಚಿಸಿ ಬಂಧಿಸಲು ಕ್ರಮ ಕೈಗೊಳ್ಳಲಾಗಿದೆ.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ಮುಖಂಡರಾದ ಚಂದ್ರತೇಜಸ್ವಿ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.

ಕೆ.ಇ. ಸಿದ್ದಯ್ಯ

ಕನ್ನಯ್ಯ ಪ್ರಕರಣದ ಬಗ್ಗೆ ಕರಪತ್ರ
ತುಮಕೂರಿನಲ್ಲಿ ದೇಶದ್ರೋಹದ ಕೇಸ್

ಇತ್ತೀಚಿನ ಹಲವು ಪ್ರಕರಣಗಳನ್ನು ಗಮನಿಸಿದರೆ ನಮ್ಮ ರಾಜ್ಯದಲ್ಲಿ ಬಿಜೆಪಿ ಸರಕಾರ ಇದೆಯೋ ಎಂದು ಅನುಮಾನ ಬರಬೇಕು. ಕನ್ನಯ್ಯ ಪ್ರಕರಣದಲ್ಲಿ ಸಂಘ ಗ್ಯಾಂಗಿನ ಹುನ್ನಾರದ ಬಗ್ಗೆ ತುಮಕೂರಿನಲ್ಲಿ ಕರಪತ್ರ ಹಂಚಿದ ಎಡಪಂಥೀಯ ಸಂಘಟನೆಗಳ ಕಾರ್ಯಕರ್ತರ ಮೇಲೆ ಸಂಘ ಗ್ಯಾಂಗಿನ ಕಾರ್ಯಕರ್ತರ ತೀವ್ರ ದಾಳಿ ನಡೆದಿದೆ. ಮಾತ್ರವಲ್ಲ ದಾಳಿ ಮಾಡಿದವರ ದೂರಿನ ಮೇಲೆ, ಎಡಪಂಥೀಯ ಕಾರ್ಯಕರ್ತರ ಮೇಲೆ ದೇಶದ್ರೋಹದ ಕೇಸು ಹಾಕಲಾಗಿದೆ. ಬಿಜೆಪಿ ಮುಖಂಡರ ಒತ್ತಡದಿಂದ ಇಂತಹ ಕೇಸುಗಳನ್ನು ಹಾಕಲಾಗಿದೆ ಎಂದು ಸುದ್ದಿ ಹರಡಿದೆ.

ಅಂದು 2016ರ ಮಾರ್ಚ್ 30. ಎಐಎಸ್‌ಎಫ್ ಮತ್ತು ಎಐವೈಎಫ್ ಕಾರ್ಯಕರ್ತರು ತುಮಕೂರು ನಗರದ ಪ್ರಮುಖ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕರಪತ್ರ ಹಂಚುವ ಕೆಲಸ ಮಾಡುತ್ತಿದ್ದರು. ಅಖಿಲ ಭಾರತ ವಿದ್ಯಾರ್ಥಿ ಒಕ್ಕೂಟದ ವಿದ್ಯಾರ್ಥಿ ಮುಖಂಡರಾದ ಕಾಮ್ರೇಡ್ ಜ್ಯೋತಿ, ಮುತ್ಯಾಲ, ಗೋವಿಂದರಾಜು, ಮಂಜುನಾಥ್, ನಾಗೇಂದ್ರ, ವಿನೋದ್ ಕುಮಾರ್ ಮತ್ತು ಓಬಳೇಶ್, ಜವಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ನಯ್ಯಕುಮಾರ್ ವಿರುದ್ಧ ಸಂಘಪರಿವಾರ ರೂಪಿಸಿದ ಸಂಚು ಮತ್ತು ಸತ್ಯಸಂಗತಿ ಏನೆಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಸಲು ಮೊದಲು ತುಮಕೂರು ವಿಶ್ವವಿದ್ಯಾಲಯದ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಕರಪತ್ರ ಹಂಚಿಕೆ ಮಾಡಿದ್ದಾರೆ. ಅಂದು ಬೆಳಗ್ಗೆ 11.20ರ ಸಮಯಕ್ಕೆ ಸರಿಯಾಗಿ ಎಐಎಸ್‌ಎಫ್ ನಾಯಕಿ ಜ್ಯೋತಿ ನೇತೃತ್ವದಲ್ಲಿ ಸರ್ಕಾರಿ ಜೂನಿಯರ್ ಕಾಲೇಜಿನಲ್ಲೂ ಕನ್ನಯ್ಯಕುಮಾರ್ ಕುರಿತ ನಾಲ್ಕು ಪುಟದ ಕರಪತ್ರಗಳನ್ನು ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದ್ದಾರೆ.

ಸರಿಸುಮಾರು 11.30ರ ಹೊತ್ತಿಗೆ ಜೂನಿಯರ್ ಕಾಲೇಜು ಮೈದಾನಕ್ಕೆ ಬಂದ ಎಬಿವಿಪಿ ಮತ್ತು ಸಂಘಪರಿವಾರದ ಮುಖಂಡರು ನಿಮಗೆ ಕರಪತ್ರ ಹಂಚಲು ಹೇಳಿದ್ದುಯಾರು? ಯಾಕಾಗಿ ಹಂಚುತ್ತಿದ್ದೀರಿ ಎಂದು ಎಐಎಸ್‌ಎಫ್ ಕಾರ್ಯಕರ್ತರಿಗೆ ಧಮಕಿ ಹಾಕಿದ್ದಾರೆ. ಎಐಎಸ್‌ಎಫ್ ಕಾರ್ಯಕರ್ತರು, ನಾವು ಕನ್ನಯ್ಯಕುಮಾರ್‌ಗೆ ಸಂಬಂಧಿಸಿದ ಕರಪತ್ರಗಳನ್ನು ಮಾತ್ರ ಹಂಚುತ್ತಿದ್ದೇವೆ. ಬೇರೆ ಏನೂ ಮಾಡುತ್ತಿಲ್ಲ. ನಮಗೆ ಕರಪತ್ರ ಹಂಚಲು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿಕೊಂಡಿದ್ದಾರೆ. ಈ ಹಂತದಲ್ಲಿ ಪ್ರಚೋದನಾಕಾರಿ ಮಾತುಗಳನ್ನಾಡಿದ ಎಬಿವಿಪಿ ಮತ್ತು ಸಂಘಪರಿವಾರದ ಮುಖಂಡರು ಕರಪತ್ರ ಹಂಚುತ್ತಿದ್ದ ವಿದ್ಯೋದಯ ಕಾನೂನು ಕಾಲೇಜು ವಿದ್ಯಾರ್ಥಿನಿ ಕಾಮ್ರೆಡ್ ಜ್ಯೋತಿ ಮತ್ತಿತರರನ್ನು ಥಳಿಸಿದ್ದಾರೆ. ಇದರಿಂದ ಎಐಎಸ್‌ಎಫ್ ಕಾರ್ಯಕರ್ತರು ಕಂಗಾಲಾಗಿದ್ದಾರೆ. ಕೂಡಲೇ ನಿಮ್ಮ ನಾಯಕರನ್ನು ಇಲ್ಲಿಗೆ ಕರೆಸುವಂತೆ ಪಟ್ಟು ಹಿಡಿದು ಎಐಎಸ್‌ಎಫ್ ಕಾರ್ಯಕರ್ತರನ್ನು ಸುತ್ತುವರಿದಿದ್ದಾರೆ. ಆಗ ಅನಿವಾರ್ಯವಾಗಿ ಎಐವೈಎಫ್ ಮುಖಂಡ ಚಿನ್ನಪ್ಪ, ಎಐಟಿಯುಸಿ ಮುಖಂಡ ಕಂಬೇಗೌಡರಿಗೆ ಮೊಬೈಲ್ ಮೂಲಕ ಕರೆ ಮಾಡಿ ಕರೆಸಿಕೊಂಡಿದ್ದಾರೆ.

ಕೂಡಲೇ ಸರ್ಕಾರಿ ಜೂನಿಯರ್ ಕಾಲೇಜು ಮೈದಾನಕ್ಕೆ ಚಿನ್ನಪ್ಪ ಮತ್ತು ಕಂಬೇಗೌಡ ಇಬ್ಬರೂ ಕೂಡಿಯೇ ಬಂದಿದ್ದಾರೆ. ಆಗ ಎರಡು ಗುಂಪುಗಳ ಮಧ್ಯೆ ವಾಗ್ವಾದ ನಡೆದಿದೆ. ಕರಪತ್ರ ಹಂಚಲು ಬಿಡಿ, ನಾವು ಯಾರ ವಿರುದ್ಧವೂ ಕರಪತ್ರ ಹಂಚುತ್ತಿಲ್ಲ. ಕನ್ನಯ್ಯಕುಮಾರ್ ವಿರುದ್ಧ ಸಂಘಪರಿವಾರ ಸಂಚು ರೂಪಿಸಿ ಸುಳ್ಳು ಮೊಕದ್ದಮೆ ಹೂಡುವಂತೆ ಮಾಡಿತು. ಬಂಧನ ಮಾಡಲಾಯಿತು. ಆ ಘಟನೆಯ ವಿವರಗಳನ್ನೊಳಗೊಂಡ ಕರಪತ್ರ ಮಾತ್ರ ವಿತರಿಸುತ್ತಿದ್ದೇವೆ ಎಂದು ಚಿನ್ನಪ್ಪ ಮತ್ತು ಕಂಬೇಗೌಡ ಎಬಿವಿಪಿ ಮತ್ತು ಸಂಘಪರಿವಾದ ಮುಖಂಡರಿಗೆ ಮನವರಿಕೆ ಮಾಡಲು ಯತ್ನಿಸಿದರೂ ಕೇಳಿಲ್ಲ.

ಈ ಮಧ್ಯೆ, ಎಬಿವಿಪಿ ಕಾರ್ಯಕರ್ತ–ರೇ 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗಿ ಗಲಾಟೆ ಎಬ್ಬಿಸಿ ಸಂಘ ಪರಿವಾರದ ಗುಂಪು ಚಿನ್ನಪ್ಪ ಮತ್ತು ಜ್ಯೋತಿ ಅವರಿಬ್ಬರನ್ನು ಮನಬಂದಂತೆ ಥಳಿಸಿದೆ. ಚಿನ್ನಪ್ಪ ಅವರ ಹೊಟ್ಟೆ, ಮೂಗು, ಭುಜ–ಕ್ಕೆ ಗಾಯಗಳಾಗುವಂತೆ ಹೊಡೆದಿದ್ದಾರೆ. ಇದರ ಜೊತೆಗೆ ಹೆಣ್ಣುಮಗಳು ಎಂಬುದನ್ನೂ ನೋಡದೆ ಜ್ಯೋತಿ ಅವರ ಹೊಟ್ಟೆಗೂ ಸಂಘಪರಿವಾರದ ಕಾರ್ಯಕರ್ತರು ಒದ್ದಿದ್ದಾರೆ. ಈ ಹೊತ್ತಿಗೆ ನೂರಾರು ಮಂದಿ ಸೇರಿಕೊಂಡಿದ್ದಾರೆ.

ಮೊದಲೇ ಪ್ಲ್ಯಾನ್ ಮಾಡಿಕೊಂಡು ಬಂದಿದ್ದ ಎಬಿವಿಪಿ ಮತ್ತು ಸಂಘಪರಿವಾರದ ಮುಖಂಡರು, ಜನರು ಸೇರುತ್ತಿದ್ದಂತೆ "ಇವರು, ಪಾಕಿಸ್ತಾನ ಜಿಂದಾಬಾದ್, ನಕ್ಸಲೀಸಂ ಜಿಂದಾಬಾದ್ ಎಂದು ದೇಶವಿರೋಧಿ ಘೋಷಣೆ ಕೂಗುತ್ತಿದ್ದಾರೆ" ಎಂದು ಸುಳ್ಳುಸುದ್ದಿ ಹಬ್ಬಿಸಿದ್ದಾರೆ. ಅಷ್ಟೇ ಅಲ್ಲ ಚಿನ್ನಪ್ಪ ಮತ್ತು ಜ್ಯೋತಿ ಮತ್ತು ಕಂಬೇಗೌಡರನ್ನು ಹೊಡೆಯುತ್ತ ತಳ್ಳುತ್ತಾ ಬಂದಿದ್ದಾರೆ. ಪದವಿಪೂರ್ವ ಶಿಕ್ಷಣ ಇಲಾಖೆ ಕಚೇರಿಯಿಂದ ಹಿಡಿದು ಹೆಚ್ಚುಕಮ್ಮಿ ಬಿಎಚ್ ರಸ್ತೆಯಲ್ಲಿರುವ ಗಾಯತ್ರಿ ಚಿತ್ರಮಂದಿರದವರೆಗೂ ಎಬಿವಿಪಿ ಮತ್ತು ಸಂಘಪರಿವಾರದ ಮುಖಂಡರು ಎಐಎಸ್‌ಎಫ್ ಮತ್ತು ಎಐವೈಎಫ್ ಕಾರ್ಯಕರ್ತರನ್ನು ಥಳಿಸಿಕೊಂಡು ಬಂದಿದ್ದಾರೆ. ಈ ಹಂತದಲ್ಲಿ ಹಲ್ಲೆಗೊಳಗಾದವರು ಬೇರೆಯವರಿಗೆ ಮೊಬೈಲ್ ಮೂಲಕ ವಿಷಯ ಮುಟ್ಟಿಸಲು ಬಿಟ್ಟಿಲ್ಲ.

ವಿಷಯ ಪೊಲೀಸರಿಗೆ ತಿಳಿದು ಸ್ಥಳಕ್ಕೆ ಬರುತ್ತಿದ್ದಂತೆ ಮೊದಲೇ ಸಿದ್ಧಪಡಿಸಿಕೊಂಡಿದ್ದ ಸುಳ್ಳುಸುದ್ದಿಯನ್ನ ಎಬಿವಿಪಿ ಮತ್ತು ಸಂಘಪರಿವಾರದ ಮುಖಂಡರು ಪೊಲೀಸರಿಗೆ ತಿಳಿಸುತ್ತಾರೆ. ಸಂಘಪರಿವಾರಿಗರ ಹೊಡೆತಗಳಿಂದ ತತ್ತರಿಸಿಹೋಗಿದ್ದ ಚಿನ್ನಪ್ಪ ಮತ್ತು ಜ್ಯೋತಿ ಅವರನ್ನು ಕೂಡಲೇ ಸರ್ಕಾರಿ ಆಸ್ಪತ್ರೆಗೆ ದಾಖಲಿಸಾಗುತ್ತದೆ. ಚಿನ್ನಪ್ಪ ಪ್ರಜ್ಞಾಹೀನ ಸ್ಥಿತಿಯಲ್ಲಿಯೇ ಒಂದು ದಿನ ಕಳೆಯಬೇಕಾಗುತ್ತದೆ. ಆದರೂ ಪೊಲೀಸರು ದಾಳಿಕೋರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ.

ಘಟನೆಯನ್ನು ಖಂಡಿಸಿ ಸಿಪಿಐ, ಸಿಪಿಐ(ಎಂ), ಎಸ್‌ಎಫ್‌ಐ, ಡಿವೈಎಫ್‌ಐ, ಎಐಎಸ್‌ಎಫ್ ಸಂಘಟನೆಗಳ ಕಾರ್ಯಕರ್ತರು ಅಪರಾಹ್ನ ತುಮಕೂರು ನಗರದ ಟೌನ್‌ಹಾಲ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಆರೋಪಿಗಳನ್ನು ಬಂಧಿಸುವಂತೆ ಒತ್ತಾಯಿಸಿದರು. ಆದಾದ ಮೇಲೆ ಒಂದಿಬ್ಬರನ್ನು ನೆಪಮಾತ್ರ ಬಂಧಿಸಿದಂತೆ ಮಾಡಿ ಬಿಡುಗಡೆ ಮಾಡಲಾಯಿತು.

ಘಟನೆ ನಡೆದ ಮರುದಿನ; ಅಂದರೆ 2016 ಮಾರ್ಚ್ 31ರಂದು ಎಬಿವಿಪಿ ಕಾರ್ಯಕರ್ತರು ಹೊಸ ಬಡಾವಣೆ ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ ಮಾಡಿ ಎಐಎಸ್‌ಎಫ್ ಮುಖಂಡರಾದ ಚಿನ್ನಪ್ಪ ಮತ್ತು ಜ್ಯೋತಿ "ಪಾಕಿಸ್ತಾನ ಜಿಂದಾಬಾದ್ ನಕ್ಸಲೀಸಂ ಜಿಂದಾಬಾದ್ ಎಂದು ಕೂಗಿದ್ದಾರೆ. ಅಷ್ಟೇ ಅಲ್ಲ ನಡೆದಾಡುವ ದೇವರು ಸಿದ್ದಗಂಗಾ ಮಠದ ಡಾ.ಶಿವಕುಮಾರ ಸ್ವಾಮಿಗಳನ್ನು ಅವಹೇಳನ ಮಾಡಿದ್ದಾರೆ" ಎಂದು ದೂರಿ ಮನವಿ ಪತ್ರ ಸಲ್ಲಿಸಲಾಯಿತು. ರಾತ್ರಿ ಬೆಳಗಾಗುವುದರೊಳಗಾಗಿ ಚಿನ್ನಪ್ಪ ಮತ್ತು ಜ್ಯೋತಿ ಅವರ ಮೇಲೆ ದೇಶದ್ರೋಹ, ಕೋಮುಪ್ರಚೋದನೆ ಸೇರಿದಂತೆ ನಾಲ್ಕು ಪ್ರಕರಣ ದಾಖಲಿಸಿ ಎಫ್‌ಐಆರ್ ನ್ನು ಪೊಲೀಸರು ಹಾಕಿಬಿಟ್ಟರು. ಬಿಜೆಪಿ ಮುಖಂಡರ ಒತ್ತಡದಿಂದ ಇಂತಹ ಕೇಸುಗಳನ್ನು ಹಾಕಲಾಗಿದೆ ಎಂದು ಸುದ್ದಿ ಹರಡಿದೆ.

ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರವಿದ್ದರೂ ಬಿಜೆಪಿ ಮುಖಂಡರ ಮಾತಿಗೆ ಪೊಲೀಸರು ಬೆಲೆ ನೀಡಿ ದೇಶದ್ರೋಹದ ಪ್ರಕರಣ ದಾಖಲಿಸಿದ್ದಾರೆ ಎಂದರೆ ಕಾಂಗ್ರೆಸ್ ನಾಯಕರಿಗೆ ನಾಚಿಕೆಯಾಗುವುದಿಲ್ಲವೇ ಎಂದು ಕಾಂಗ್ರೆಸ್ಸಿಗರೇ ಮಾತನಾಡಿಕೊಳ್ಳುವಂತಾಗಿದೆ. ದೆಹಲಿ ಮಟ್ಟದಲ್ಲಿ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್‌ಗಾಂಧಿ ಕನ್ನಯ್ಯಕುಮಾರ ಪರವಾಗಿ ನಿಂತಿದ್ದರೆ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರವಿದ್ದೂ ಈ ರೀತಿ ಆಗುವುದೆಂದರೆ ಏನು ಹೇಳಬೇಕೋ ತಿಳಿಯದಾಗಿದೆ.

ಕಾಂಗ್ರೆಸ್ ಸರ್ಕಾರವಿರುವ ರಾಜ್ಯದಿಂದಲೇ ಸಂಘಪರಿವಾರ ತನ್ನ ಪ್ರಯೋಗಶಾಲೆಯನ್ನು ಮಾಡಿಕೊಂಡಿರುವುದು ವಿಪರ್ಯಾಸವಾಗಿದೆ. ಬಿಜೆಪಿ ಅದರಲ್ಲೂ ಮೋದಿ ವಿರುದ್ಧ ಮಾತನಾಡುವ, ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಎತ್ತಿತೋರಿಸುತ್ತಿರುವ ಎಡಪಕ್ಷಗಳ ಮೇಲೆ ಸಂಘಪರಿವಾರ ದೇಶದ್ರೋಹದಂತಹ ಆರೋಪಗಳನ್ನು ಮಾಡುತ್ತಿದೆ. ಈ ಪ್ರಕರಣದ ಬಗ್ಗೆ ವ್ಯಾಪಕ ಪ್ರತಿರೋ ಧ ಬರಬೇಕು.

ಪೌರ ಕಾರ್ಮಿಕರ 3 ದಿನಗಳ ಯಶಸ್ವಿ ಹೋರಾಟ

ಗುತ್ತಿಗೆ ಪದ್ಧತಿ ರದ್ದುಗೊಳಿಸಿ, ತಿಂಗಳ 5ನೇ ತಾರೀಖಿನ ಒಳಗೆ ಸಮರ್ಪಕವಾಗಿ ವೇತನ ಪಾವತಿಸಬೇಕೆಂದು ಇನ್ನಿತರ ಬೇಡಿಕೆಗಳಿಗಾಗಿ ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘವು ಸಿಐಟಿಯು ನೇತೃತ್ವದಲ್ಲಿ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಕಛೇರಿ ಬಳಿ ಅನಿರ್ಧಿಷ್ಟಾವಧಿ ಪ್ರತಿಭಟನೆ ನಡೆಸಿದರು.

ಏಪ್ರಿಲ್ 4ರಂದು ನಗರದ ಮಿತ್ರ ಸಮಾಜದಿಂದ ಮೆರವಣಿಗೆ ಆರಂಭಿಸಿ ನಗರಸಭೆ ಕಛೇರಿ ಬಳಿ ಪ್ರತಿಭಟನೆ ನಡೆಸಿದರು. ಹಾಜರಾತಿ ವಿಧಾನ ಸರಿಪಡಿಸಲು, ಯುಜಿಡಿಯಲ್ಲಿ ಪೌರ ಕಾರ್ಮಿಕರನ್ನು ಇಳಿಸಬಾರದೆಂದು, ಸುರಕ್ಷತಾ ಸಲಕರಣೆ ನೀಡಬೇಕೆಂದು, ಆರೋಗ್ಯ ಸಲಕರಣೆ ಮತ್ತು ಸಮವಸ್ತ್ರ ಒದಗಿಸಿ ಕನಿಷ್ಟ ಮೂರು ತಿಂಗಳಿಗೊಮ್ಮೆ ಆರೋಗ್ಯ ತಪಾಸಣೆ ಮಾಡಬೇಕೆಂದು ಆಗ್ರಹಿಸಿದರು.

ಜಿಲ್ಲಾಧಿಕಾರಿ ಕಛೇರಿ ಮುಂಭಾಗ ಪ್ರತಿಭಟನೆ ನಡೆಸಲು ತೆರಳುತ್ತಿದ್ದ ಪ್ರತಿಭಟನಾಕಾರರನ್ನು ಶಿವಾಜಿ ವೃತ್ತದಲ್ಲೇ ಪೊಲೀಸರು ತಡೆದರು. ಇದಕ್ಕೆ ಮಣಿಯದೆ ನಗರಸಭೆ ಕಛೇರಿ ಬಳಿ ಪ್ರತಿಭಟನೆ ನಡೆಸಿದರು. ಮನವಿ ಸ್ವೀಕರಿಸದೆ ಜಿಲ್ಲಾಧಿಕಾರಿ ಕಛೇರಿ ಸುತ್ತಾ 200 ಮೀಟರ್ ನಿಷೇಧಾಜ್ಞೆ ಜಾರಿಗೊಳಿಸಿದರು. ಪ್ರತಿಭಟನಾ ನಿರತ ಕಾರ್ಮಿಕರು ಹೋರಾಟವನ್ನು ತೀವ್ರಗೊಳಿಸಿದರು. ಜಿಲ್ಲಾಧಿಕಾರಿಗಳ ಈ ಕ್ರಮವನ್ನು ಖಂಡಿಸಿದರು.

ಅಧಿಕಾರಿಗಳಿಗೆ ತರಾಟೆ:

ಕಾರ್ಮಿಕರ ವೇತನದಲ್ಲಿ ಪಿ.ಎಫ್. – ಇ.ಎಸ್.ಐ.ಗೆ ಕಡಿತ ಮಾಡುತ್ತಿರುವ ಹಣದ



ಬಗ್ಗೆ ಗುತ್ತಿಗೆದಾರರು ನಗರ ಸ್ಥಳೀಯ ಸಂಸ್ಥೆಗಳ ಮೇಲಾಧಿಕಾರಿಗಳಿಗೆ ರಸಿದಿ ನೀಡಬೇಕು, ಕಾರ್ಮಿಕರಿಗೆ ಆ ಬಗ್ಗೆ ಲಿಖಿತವಾಗಿ ತಿಳಿಸಬೇಕು, ಆದರೆ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಈ ನಿಯಮಾವಳಿ ಪಾಲಿಸುತ್ತಿಲ್ಲ ಎಂದು ಪೌರಕಾರ್ಮಿಕರು ದೂರಿದರು.

ಎರಡನೇ ದಿನಕ್ಕೆ ಮುಂದುವರೆದ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಸಚಿವರಾದ ಆರ್.ವಿ.ದೇಶಪಾಂಡೆರವರು ಮನವಿ ಸ್ವೀಕರಿಸಿದರು. ಗುತ್ತಿಗೆ ಪೌರ ಕಾರ್ಮಿಕರ ಸಮಸ್ಯೆ ಆಲಿಸಲು ಏಪ್ರಿಲ್ 12ರಂದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಭೆ ಕರೆಯಲಾಗಿದೆ ಎಂದು ತಿಳಿಸಿದರು.

ಹೋರಾಟದ ಮೂರನೇ ದಿನ ಬುಧವಾರದಂದು ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಜಂಟಿ ಸಭೆ ನಡೆಯಿತು. ಪ್ರಭಾರ ಜಿಲ್ಲಾಧಿಕಾರಿ ರಾಮಪ್ರಸಾದ್ ಮನೋಹರ್ ಮಾತನಾಡಿ ಸ್ಥಳೀಯ ಸಂಸ್ಥೆಗಳಲ್ಲಿ ಹೊರಗುತ್ತಿಗೆ ಆಧಾರ ದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪೌರ ಕಾರ್ಮಿಕರಿಗೆ 2006ರಿಂದ ಬಾಕಿ ಉಳಿಸಿರುವ ಪಿಎಫ್ ಮತ್ತು ಇಎಸ್‌ಐ ಹಣವನ್ನು ಮುಂದಿನ 48 ಗಂಟೆಗಳ ಒಳಗಾಗಿ ಪಾವತಿಸದಿದ್ದರೆ ಅಂತಹ ಗುತ್ತಿಗೆದಾರರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದರು.

ಹೊರಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ಕಾರ್ಮಿಕರ ವಿಳಾಸ ಮತ್ತು ಯಾದಿಯನ್ನು ತಯಾರಿಸಿ ಗುರುವಾರ ಸಂಜೆಯ ಒಳಗಾಗಿ ಸಲ್ಲಿಸಬೇಕು. ವೇತನವನ್ನು ತಿಂಗಳ 5ನೇ ತಾರೀಖಿನ ಒಳಗೆ ನೀಡಬೇಕು. ಇಲ್ಲವಾದಲ್ಲಿ ಕಾನೂನು ಕ್ರಮ ಜರುಗಿಸಲಾಗುವುದು. ಬಹುತೇಕ ಕಾರ್ಮಿಕರು ಪರಿಶಿಷ್ಟ ಜಾತಿ/ಜನಾಂಗಕ್ಕೆ ಸೇರಿದ್ದು, ಅವರಿಗೆ ಸಿಗಬೇಕಾದ ಸೌಲಭ್ಯಗಳಿಂದ ವಂಚಿಸಿದರೆ ಅಂತಹ ಗುತ್ತಿಗೆದಾರರ ವಿರುದ್ಧ ಎಸ್.ಸಿ./ಎಸ್.ಟಿ ದೌರ್ಜನ್ಯ ಅಡಿ ಪ್ರಕರಣ ದಾಖಲಿಸಲು ಅವರು ಸೂಚಿಸಿದರು.

ಪ್ರತಿಭಟನೆಯಲ್ಲಿ ಸಿಐಟಿಯು ಕಾರ್ಯಕರ್ತರು ಹಾಗೂ ದಲಿತ ಸಂಘಟನೆಯ ಮುಖಂಡರು ಭಾಗವಹಿಸಿದ್ದರು.

–ಯಮುನಾ ಗಾಂವ್ಕರ್

ಈ ವಾರ ಚರಿತ್ರೆಯಲ್ಲಿ



ಎಪ್ರಿಲ್ 6, 1957

ದೇಶದಲ್ಲೇ ಮೊದಲ ಬಾರಿಗೆ, ಕೇರಳದಲ್ಲಿ ಕಮ್ಯುನಿಸ್ಟ್ ಸರಕಾರದ ರಚನೆ, ಮುಖ್ಯಮಂತ್ರಿಯಾಗಿ ಇ.ಎಂ.ಎಸ್. ನಂಬೂದಿರಿಪಾಡ್ ಅವರು ಪ್ರತಿಜ್ಞೆ ಸ್ವೀಕರಿಸಿದರು. 1956 ರಲ್ಲಿ ಕೇರಳ ರಾಜ್ಯ ರಚನೆಗೊಂಡ ನಂತರ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಅವಿಭಜಿತ ಭಾರತ ಕಮ್ಯುನಿಸ್ಟ್ ಪಕ್ಷ ಬಹುಮತ ಪಡೆಯಿತು. ಸ್ವತಂತ್ರ ಭಾರತದಲ್ಲಿ ಮೊತ್ತ ಮೊದಲ ಬಾರಿಗೆ ಭೂಸುಧಾರಣೆ ಮತ್ತು ಇತರ ಪ್ರಜಾತಾಂತ್ರಿಕ ಕ್ರಮಗಳನ್ನು ಕೈಗೊಂಡ ಸರಕಾರ ಇದು. ಒಂದು ಚುನಾಯಿತ ರಾಜ್ಯಸರಕಾರವನ್ನು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿ ವಜಾ ಮಾಡಲು ಸಂವಿಧಾನದ ಕಲಮು 356 ಮೊದಲ ಪ್ರಯೋಗ ನಡೆದದ್ದೂ ಇಎಂಎಸ್ ನೇತೃತ್ವದ ಈ ಮೊದಲ ಕಮ್ಯುನಿಸ್ಟ್ ರಾಜ್ಯ ಸರಕಾರದ ವಿರುದ್ಧವೇ.



ಪ್ರಸಕ್ತ

ಕೆ.ಎಸ್. ವಿಮಲಾ

‘ಬಿಗ್ ಚೀಟ್’ಗೆ ‘ಕ್ಲೀನ್ ಚಿಟ್’ ..!!

ಪ್ರೇಮಲತಾ ದಿವಾಕರ್ ಮೇಲೆ ಅತ್ಯಾಚಾರ ಎಸಗಿದ ಆರೋಪ ಎದುರಿಸುತ್ತಿರುವ ರಾಘವೇಶ್ವರ ಭಾರತಿ ಬೆಂಗಳೂರಿನ ಸೆಷನ್ಸ್ ನ್ಯಾಯಾಲಯದಿಂದ ಕ್ಲೀನ್ ಚಿಟ್(!) ಪಡೆದಿದ್ದಾರೆ. ಕ್ಲೀನ್ ಚಿಟ್–ಡಿಸ್ಚಾರ್ಜ ವರದಿಯಲ್ಲಿ ಬಿಡುಗಡೆ ಹೊಂದಲು ಅರ್ಹತೆ ಅಥವಾ ಪ್ರಕರಣ ವಿಚಾರಣೆಗೆ ಯೋಗ್ಯವೇ ಅಲ್ಲ ಎಂದು ಪರಿಗಣಿಸುವಾಗ ಉಲ್ಲೇಖಿಸಿದ ಹಲವು ಅಂಶಗಳು ಮಹಿಳೆಗೆ ನ್ಯಾಯ ಎಂಬುದು ಮರೀಚಿಕೆಯೇ? ಎಂಬ ಪ್ರಶ್ನೆಯನ್ನು ಹುಟ್ಟುಹಾಕುತ್ತದೆ. ‘ನ್ಯಾಯದ ಎದುರು ಎಲ್ಲರೂ ಸಮಾನರು. ಆದರೆ ಕೆಲವರು ಹೆಚ್ಚು ಸಮಾನರು’ ಎಂಬ ನಾಣ್ಣುಡಿಗೆ ಈ ಪ್ರಕರಣವೂ ಒಂದು ಸಾಕ್ಷಿ. ಅದರಲ್ಲೂ ಇಂತಹುದೇ ಅತ್ಯಾಚಾರ ಪ್ರಕರಣಗಳನ್ನು ಎದುರಿಸುತ್ತಿರುವ ಇವರಷ್ಟೇ (ಅಥವಾ ಹೆಚ್ಚು?) ಪ್ರಬಲರೂ (ಹೆಚ್ಚು ಸಮಾನರೂ!) ಆಗಿರುವ ಬಿಡದಿ ನಿತ್ಯಾನಂದ ಸ್ವಾಮಿ ಮತ್ತು ಆಸಾರಾಂ ಬಾಪುಗಳಿಗೂ ಸಹ ಈ ‘ಡಿಸ್ಚಾರ್ಜ್ ಭಾಗ್ಯ’ ಸಿಗಲಿಲ್ಲ. ಇವರಿಬ್ಬರನ್ನೂ ಬಂಧಿಸಲು ಸರಕಾರ ತನ್ನೆಲ್ಲಾ (ಬಾಪು ಪ್ರಕರಣದಲ್ಲಿ ಸಶಸ್ತ್ರ ಕಾಳಗ ನಡೆಸಬೇಕಾಯಿತು) ಬಲ ಬಳಸಬೇಕಾಯಿತು. ಹಾಗಾದರೆ ರಾಘವೇಶ್ವರ ಭಾರತಿಗೆ ಆತನ ಮೇಲ್ಜಾತಿಯಿಂದಾಗಿ ‘ಡಿಸ್ಚಾರ್ಜ್ ಭಾಗ್ಯ’ ಸಿಕ್ಕಿತೇ ಎಂಬ ಸಹಜ ಅನುಮಾನ ಬರುತ್ತದೆ.

ಡಿಸ್ ಚಾರ್ಜ ವರದಿಯ ಪ್ರಮುಖ ಅಂಶಗಳು:

- ಸಂತ್ರಸ್ತೆಯು ತನ್ನ ಮೇಲಾದ ಅತ್ಯಾಚಾರದ ಬಗ್ಗೆ ಮಗಳಿಗೆ ಹೇಳಿದಾಗ ವಿರೋಧಿಸಲಿಲ್ಲವೆಂದರೆ ಕುಟುಂಬದ ಸಮ್ಮತಿಯಿಂದ ನಡೆದ ಅನೈತಿಕ ಸಂಬಂಧವಿದು.
- ಒಂದು ವರ್ಷಕ್ಕಿಂತ ಹೆಚ್ಚು ಕಾಲ ಪರ ಪುರುಷನ ಹಿಡಿತದಲ್ಲಿದ್ದಾಳೆಂದರೆ ಅದು ಒಂದೇ ಸೂರಿನಡಿಯ ವ್ಯಭಿಚಾರವಾಗುತ್ತದೆ.
- ವಯಸ್ಸಿನ ಅಂತರದಲ್ಲಿ ಅವರಿಬ್ಬರೂ ತಾಯಿ ಮಗನ ಸಂಬಂಧ ಹೊಂದುವ ವಯೋಮಾನದವರು ಅಂಥವರ ಮೇಲೆ ದೂರು ಕೊಡುವುದೆಂದರೆ ದೂರುದಾರರ ಮನಃಸ್ಥಿತಿ ಸರಿ ಇಲ್ಲ, ಅಸಹಜ ಮನಃಸ್ಥಿತಿಯ ಅನೈತಿಕ ಸಂಬಂಧ
- ವಯಸ್ಸಿನ ಅಂತರವನ್ನು ವ್ಯಾಖ್ಯಾನಿಸುತ್ತ ದೂರುದಾರರ ಮನಃಸ್ಥಿತಿಯೇ ಸರಿ ಇಲ್ಲ
- ಸಂತ್ರಸ್ತೆ ಕೊಟ್ಟ ದೂರಿನ ಮತ್ತು ದೋಷಾರೋಪಣಾ ಪಟ್ಟಿಯ ಆಧಾರದಲ್ಲಿ ಇದು ಅತ್ಯಾಚಾರವಲ್ಲ. ಬದಲಿಗೆ **ಪರಸ್ಪರ ಒಪ್ಪಿಗೆಯ ಲೈಂಗಿಕ ಸಂಪರ್ಕವೆಂದು ಬೇಕಾದರೆ ಹೇಳಬಹುದು** ಎಂದೂ ಅಭಿಪ್ರಾಯಪಟ್ಟಿದೆ. (ನಮ್ಮ ಕಾನೂನಿನ ಪ್ರಕಾರ ಅಡಲ್ಟ್ರೀ ಕೂಡ ಒಂದು ಶಿಕ್ಷಾರ್ಹ ಅಪರಾದ. ಇನ್ನು ರಾಮಚಂದ್ರಾಪುರ ಮಠದ ಪರಂಪರೆ ಏನೆಂದು ಆ ಮಠದ ಭಕ್ತರೇ ಹೇಳಬೇಕು.)
- ಪ್ರಾಸಿಕ್ಯೂಷನ್ ನ ತನಿಖೆ ಪಾರದರ್ಶಕವಾಗಿಲ್ಲ, ಪೂರ್ವಯೋಜಿತ ರೀತಿಯಿಂದ ನಡೆದಿದೆ
- ಮಹಿಳೆಗೆ 43 ವರ್ಷ ವಯಸ್ಸಾದ ನಂತರ ಕಾಮಾಸಕ್ತಿ ಕಡಿಮೆಯಾಗುತ್ತದೆ ಎಂಬಿತ್ಯಾದಿ ವಿಷಯಗಳನ್ನು ಹೇಳುತ್ತ ಪ್ರಾಸಿಕ್ಯೂಷನ್ ಗೆ ಟನ್‌ಗಟ್ಟಲೆ ವೀರ್ಯವೇನಾದರೂ ದೂರುದಾರರ ಒಳ ಉಡುಪುಗಳಲ್ಲಿ ದೊರೆತಿದೆಯೇ ಎಂದೂ ಪ್ರಶ್ನಿಸುತ್ತದೆ. ಮತ್ತು ಈ ಕಾರಣಗಳಿಂದ ಅತ್ಯಾಚಾರದ ಈ ಪ್ರಕರಣವನ್ನು ವಿಚಾರಣೆಗೇ ಅರ್ಹವಲ್ಲದ ಪ್ರಕರಣವೆಂದು ಕೈ ಬಿಡುತ್ತದೆ!!!!

ಈ ಅಂಶಗಳನ್ನು ನೋಡಿದಾಗ ಯಾರಿಗಾದರೂ ಗಾಬರಿಯಾಗದೇ ಇರದು. ಆದರೆ ಈ ಹಿಂದಿನ ಹಲವು ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯವೂ ಸೇರಿದಂತೆ ಮಹಿಳೆಯರನ್ನೇ ಅನುಮಾನಿಸುವ ಹಲವು ತೀರ್ಪುಗಳು ಬಂದಿವೆ. ಉದಾಹರಣೆಗೆ ರಾಜಸ್ತಾನದ ಸಾಮಾಜಿಕ ಕಾರ್ಯಕರ್ತೆ ಭಾಂವ್ರಿ ದೇವಿ ಸರ್ಕಾರದ ಯೋಜನೆಯಾದ ಬಾಲ್ಯವಿವಾಹ ನಿಷೇಧ ಕಾಯ್ದೆಯ ಜಾರಿಗೆ ಕೆಲಸ ಮಾಡುವಾಗ ಒಳಗಾದ ಸಾಮೂಹಿಕ ಅತ್ಯಾಚಾರದ ಪ್ರಕರಣದಲ್ಲಿಯೂ ಇಂಥಹುದೇ ಮಾತುಗಳನ್ನು ನಾವು ಕೇಳಿ ದಂಗಾಗಿದ್ದೆವು. ಎರಡು ಮೂರು ದಶಕಗಳ ನಂತರವೂ ಸಮಾಜದ ಮನಃಸ್ಥಿತಿಯಲ್ಲಿ ಅಂತಹ ಬದಲಾವಣೆಗಳೇನೂ ಆಗಿಲ್ಲ ಎನ್ನುವುದು ಇನ್ನೊಮ್ಮೆ, ಮತ್ತೊಮ್ಮೆ ದೃಢಪಟ್ಟಿದೆ.

ನ್ಯಾಯಚಕ್ರ ಮತ್ತೆ 1979ರ ಮಥುರಾ ದಿನಗಳಿಗೆ?

ಇತ್ತೀಚಿನ ದಿನಗಳಲ್ಲಿ ಅದರಲ್ಲಿಯೂ ನಿರ್ಭಯಾ ಪ್ರಕರಣದ ನಂತರ ಅದರಲ್ಲಿಯೂ ನಾವು ಸದಾ ಸ್ಮರಿಸಬೇಕಾದ ಜಸ್ಟೀಸ್ ವರ್ಮಾ ಆಯೋಗದ ಶಿಫಾರಸುಗಳ ನಂತರ ಒಂದು ಬದಲಾದ ಮನಃಸ್ಥಿತಿಯನ್ನು ನಾವು ನಿರೀಕ್ಷಿಸಿದರೆ ತಪ್ಪೇ? ಹಾಗೆನಿಸುತ್ತದೆ.

1979 ರ ಮಥುರಾ ಪ್ರಕರಣ ಮತ್ತು ಆ ಬಗ್ಗೆ ಸರ್ವೋಚ್ಚ ನ್ಯಾಯಾಲಯದ ತೀರ್ಪು ನೀಡಿದ ಆಘಾತದಿಂದ ಪ್ರಬಲಗೊಂಡ ಮಹಿಳಾ ಚಳುವಳಿ ಕೇವಲ ಕಾನೂನಿನ ಕ್ಷೇತ್ರವಲ್ಲದೇ ಸಾಮಾಜಿಕವಾಗಿಯೂ ತನ್ನ ಪ್ರಭಾವ ಬೀರುವ ಪ್ರಯತ್ನ ನಡೆಸಿತು. ಮಹಿಳೆಯರ ಸಮಸ್ಯೆಗಳ ಬಗ್ಗೆ ಇಡೀ ಸಮಾಜ ಅದರಲ್ಲಿಯೂ ಪೋಲೀಸರು, ಮತ್ತು ನ್ಯಾಯಾಂಗ ವ್ಯವಸ್ಥೆಯಲ್ಲಿ ಉಂಟಾಗಬೇಕಾದ ಸಂವೇದನಾಶೀಲತೆಯತ್ತ ಎಲ್ಲರ ಗಮನ ಸೆಳೆಯಲಾಯಿತು. ಅಲ್ಲಿಯವರೆಗೆ ಆಗಿರುವ ಅನ್ಯಾಯಗಳನ್ನು ತೊಡೆಯಲೋ ಎಂಬಂತೆ ಆ ನಂತರ ಸರ್ವೋಚ್ಚ ನ್ಯಾಯಾಲಯದ ಅನೇಕ ತೀರ್ಪುಗಳು ಅತ್ಯಾಚಾರದ ಬಗೆಗಿನ ಮೂಲಭೂತ ಕಲ್ಪನೆಯನ್ನೇ ಬದಲಾಯಿಸಿದವು. ಅದರಲ್ಲಿ ಭಾಂವ್ರಿದೇವಿಯ ಪ್ರಕರಣದ ನಂತರ ಬಂದ ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ದೌರ್ಜನ್ಯದ ಕುರಿತು ಸುಪ್ರೀಂ ಕೋರ್ಟ್ ನೀಡಿದ ‘ವಿಶಾಖಾ/ಕೋರ್ಟ್ ಆಫ್ ರಾಜಸ್ತಾನ್’ ಹೆಸರಿನ ಆದೇಶ ಮತ್ತು ಈಗ ಚಾಲ್ತಿಯಲ್ಲಿರುವ ಕಾನೂನು ಸ್ಪಷ್ಟ ಉದಾಹರಣೆ. ಆ ಆದೇಶ ಮತ್ತು ಕಾನೂನು ಲೈಂಗಿಕ ಕಿರುಕುಳದ ವ್ಯಾಖ್ಯಾನವನ್ನೇ ಬದಲಿಸಿತು. ಆದರೆ.. .. ..

ರಾಘವೇಶ್ವರ–ಪ್ರೇಮಲತಾ ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯದ ಆದೇಶ ಈ ಮೇಲಿನ ಯಾವ ಅಂಶಗಳನ್ನೂ ಪರಿಗಣಿಸಿದಂತೆ ತೋರುತ್ತಿಲ್ಲ. ಮತ್ತೊಮ್ಮೆ ಕಾಲದ ಚಕ್ರ ಮುನ್ನಡೆಯುವ ಬದಲು ಹಿಮ್ಮುಖವಾಗಿ ಚಲಿಸಲೆತ್ನಿಸುತ್ತಿದೆ ಎಂದು ನಮಗೆ ಅನಿಸಿದರೆ ಅದನ್ನು ಯಾರಾದರೂ ಅಲ್ಲಗಳೆಯಲು ಸಾಧ್ಯವೇ?

ಈ ಪ್ರಕರಣದ ಡಿಸ್ಚಾರ್ಜ ಆದೇಶದಲ್ಲಿಯೂ ಪ್ರಸ್ತಾಪಿಸಿದಂತೆ **ಸಿ.ಆರ್.ಪಿ.ಸಿ 227 –ಮಹಿಳೆಯ ಅನುಮತಿಯನ್ನು ಬಲವಂತ, ಭಯ, ಅಥವಾ ಹಿಂಸೆಯ ಮೂಲಕ ಪಡೆದುಕೊಂಡಿದ್ದರೆ ಅದೂ ಅತ್ಯಾಚಾರವೇ ಎಂದು ಹೇಳುತ್ತದೆ**. ಈ ಪ್ರಕರಣದ ದೂರುದಾರರಾದ ಪ್ರೇಮಲತಾ, ಆರೋಪಿ ತನ್ನನ್ನು ದೇವರ ಹೆಸರಿನಲ್ಲಿ ಭಯಪಡಿಸುತ್ತಿದ್ದ ಅಂಶಗಳನ್ನು ಹೇಳಿಕೊಂಡಿದ್ದಾರೆ. ಆ ಕಾರಣದಿಂದಲೇ ದೋಷಾರೋಪ ಪಟ್ಟಿಯಲ್ಲಿ ಐ.ಪಿ.ಸಿ 508ನ್ನೂ ಉಲ್ಲೇಖಿಸಲಾಗಿದ್ದು, ಡಿಸ್ಚಾರ್ಜ ವರದಿಯಲ್ಲಿ ಅದರ ಪ್ರಸ್ತಾಪವೇ ಇಲ್ಲ. ಐ.ಪಿ.ಸಿ **508 ದೇವರು ಧರ್ಮ ಮುಂತಾದ ನಂಬಿಕೆಗಳನ್ನು ದುರ್ಬಳಕೆ ಮಾಡುವ ಬಗ್ಗೆ ಹೇಳುವ ಕಲಮು.**

ಇವುಗಳನ್ನು ಗಮನಿಸಿದಾಗ 21 ನೇ ಶತಮಾನದಲ್ಲಿಯೂ ನ್ಯಾಯದ ದಾರಿ ಗಾವುದ ದೂರ ಎಂದು ನಮಗೆ ಅನಿಸಿದರೆ ಅದರ ಹೊಣೆ ಹೊರಬೇಕು ಯಾರು?

ಅತ್ಯಾಚಾರದಂಥಹ ಹೀನ ಕೃತ್ಯಕ್ಕೆ ಒಳಗಾಗುವ ಮಹಿಳೆಯರು ದೂರು ದಾಖಲಿಸಲು ಮುಂದೆ ಬಂದ ಕ್ಷಣದಿಂದ ಅವರು ಅನುಭವಿಸುವ ಯಾತನೆ, ಮೂದಲಿಕೆ, ಕೊಂಕು ನುಡಿ ನೋಟಗಳು ನಮ್ಮ ಸಾಮಾಜಿಕ ಸಂದರ್ಭದಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಗತಿಗಳು. ಇವೆಲ್ಲವನ್ನೂ ಮೀರಿ ತನಗಾದ ಅನ್ಯಾಯಯವನ್ನು ಪ್ರತಿಭಟಿಸಲು ಮಹಿಳೆಯೊಬ್ಬರು ಮುಂದಾದ ಸಂದರ್ಭದಲ್ಲಿ ಅತ್ಯಾಚಾರದಂಥಹ ಪ್ರಕರಣದ ವಿಚಾರಣೆಯನ್ನೇ ನಡೆಸದೇ ಡಿಸ್ಚಾರ್ಜ ಮಾಡಿರುವುದು ಮುಂದೆ ಇಂಥಹ ಅನ್ಯಾಯಗಳ ವಿರುದ್ಧ ಯಾವ ಮಹಿಳೆಯೂ ದೂರು ಸಲ್ಲಿಸಲು ಮುಂದೆ ಬಾರದಂಥಹ ಸ್ಥಿತಿಯನ್ನು ನಿರ್ಮಾಣ ಮಾಡುತ್ತದೆ. 2016 ರಿಂದ ನ್ಯಾಯಚಕ್ರ 1979ಕ್ಕೂ ಹಿಂದಿನ ಕಾಲಕ್ಕೆ ಹೋಗಿ ನಿಲ್ಲುತ್ತಿರುವ ಸಂಕೇತವಿದು.

ಹೈಕೋರ್ಟಿನಲ್ಲಿ ಮರು ಪರಿಶೀಲನೆಗೆ ಅರ್ಜಿ ಹಾಕಿ

ಸಿ.ಓ.ಡಿ ಸಲ್ಲಿಸಿದ ಚಾರ್ಜಶೀಟ್ ಒದಗಿಸುವ ಮಾಹಿತಿಗಳ ಆಧಾರದಲ್ಲಿ ಹಲವು ಸಾಕ್ಷಿಗಳನ್ನು ವಿಚಾರಣೆ ನಡೆಸಿ ನೀಡುವ ಸಮಗ್ರವಾದ ತೀರ್ಪೊಂದನ್ನು, ನೊಂದ ಮಹಿಳೆಯರ ಪರವಾದ ನ್ಯಾಯಕ್ಕಾಗಿ ಕೆಲಸ ಮಾಡುತ್ತಿರುವ ನಾಗರೀಕರಾಗಿ ನಿರೀಕ್ಷೆ ಮಾಡುತ್ತೇವೆ. ಆದರೆ ಕೆಳ ನ್ಯಾಯಾಲಯ ಅಂಥಹ ವಿಚಾರಣೆಯನ್ನು ನಡೆಸದೇ ಡಿಸ್ ಚಾರ್ಜ ಮಾಡಿರುವುದು ನಮಗೆ ಆಘಾತವನ್ನುಂಟುಮಾಡಿದೆ. ಅಲ್ಲದೇ ಅತ್ಯಾಚಾರದಂಥಹ ಪ್ರಕರಣಗಳಲ್ಲಿ ಜಸ್ಟೀಸ್ ವರ್ಮಾ ಆಯೋಗದ ಶಿಫಾರಸುಗಳಲ್ಲಿ ಮತ್ತು ಐ.ಪಿ.ಸಿ. 376ರನ್ವಯ ಸಾಧ್ಯವಾದಷ್ಟೂ ಒಬ್ಬ ಮಹಿಳಾ ನ್ಯಾಯಾಧೀಶರು (in camera) ವಿಚಾರಣೆ ನಡೆಸಬೇಕೆಂದು ಹೇಳಲಾಗಿದೆ. ಬೆಂಗಳೂರಿನಲ್ಲಿ ಈ ರೀತಿಯ ಪ್ರಕರಣಗಳಿಗಾಗಿಯೇ ತ್ವರಿತ ನ್ಯಾಯಾಲಯಗಳನ್ನು ತೆರೆದಿದ್ದೇವೆ ಎಂದು ಮೇಲಿಂದ ಮೇಲೆ ಸರ್ಕಾರದ ವಕ್ತಾರರು ಹೇಳಿರುವುದು ನಮ್ಮ ಗಮನದಲ್ಲಿದೆ. ಹಾಗಿದ್ದಾಗ್ಯೂ ಈ ಪ್ರಕರಣದ ವಿಚಾರಣೆ ಅಲ್ಲಿ ನಡೆಯಲಿಲ್ಲ ಯಾಕೆ ಎಂಬ ಪ್ರಶ್ನೆಯೂ ಇದೆ.

ಪ್ರಕರಣದಿಂದ ಇಂದಿನವರೆಗೂ ನಡೆದ ಹಲವು ರೀತಿಯ ಚರ್ಚೆಗಳ ನಂತರ ಕೇಂದ್ರ, ರಾಜ್ಯ ಸರ್ಕಾರಗಳು, ಜಸ್ಟೀಸ್ ವರ್ಮಾ ಆಯೋಗದ ಶಿಫಾರಸುಗಳು ಮಹಿಳೆಯರ ಮೇಲಿನ ಅತ್ಯಾಚಾರದಂಥಹ ಪ್ರಕರಣಗಳ ಕುರಿತು ಹಲವು ಸಂವೇದನಾಶೀಲ ಕ್ರಮಗಳಿಗೆ ಸಲಹೆ ಮಾಡಿವೆ. ಈ ಪ್ರಕರಣದಲ್ಲಿ ಕೂಡ ಆ ಸಲಹೆಗಳು, ಸೂಚನೆಗಳು ಮಾನದಂಡವಾಗಬೇಕೆಂಥು ಒತ್ತಾಯಿಸುತ್ತ ರಾಜ್ಯ ಸರ್ಕಾರ ಉಚ್ಚನ್ಯಾಯಾಲಯದಲ್ಲಿ ಈ ಪ್ರಕರಣದ ಮರು ಪರಿಶೀಲನೆಗೆ ಅರ್ಜಿ ಹಾಕಿ ಸಮರ್ಪಕವಾಗಿ ಕೇಸನ್ನು ನಡೆಸಬೇಕೆಂಬುದೇ ಈಗಿನ ಜರೂರು.

ಈ ಘಟ್ಟದಲ್ಲಿ ಸರ್ಕಾರ ಅರ್ಥಮಾಡಿಕೊಳ್ಳಬೇಕಾಗಿರುವುದು ತುಟಿಗೂ ತುತ್ತಿಗೂ ಇರುವ ಅಂತರವನ್ನು. ಆಡುವ ಮಾತುಗಳು ಪ್ರಕಟಿಸುವ ಯೋಜನೆಗಳು ಜನಮಾನಸವನ್ನು ತಲುಪುವುದು ಅವುಗಳ ಜಾರಿಯ ಮೂಲಕವಷ್ಟೇ, ಡಿಸ್ಚಾರ್ಜ ವರದಿ ಹೇಳುವಂತೆ ಪ್ರಾಸಿಕ್ಯೂಷನ್ ಸಾಕ್ಷಿ ಆಧಾರಗಳನ್ನು ಸಂಗ್ರಹಿಸಲು ವಿಫಲವಾಗಿದೆ. ಎಂದರೆ ಅದು ಸರ್ಕಾರದ್ದೇ ವೈಫಲ್ಯ. ಇದರ ತನಿಖೆ ನಡೆಸಿ, ವಿಚಾರಾಣಾಧಿಕಾರಿಗಳು ಹಾಗೇಕೆ ನಿರ್ಲಕ್ಷ್ಯ ತೋರಿದರೆಂಬುದನ್ನು ಅಥವಾ ಅವರನ್ನು ಹಾಗೆ ನಿರ್ಬಂದಿಸಿದ ಕಾಣದ ಪಭಾವಶಾಲಿ ಕೈಗಳು ಯಾರವು? ಇವುಗಳನ್ನು ಸರ್ಕಾರ ಪತ್ತೆ ಹಚ್ಚುವುದೆ? ಈ ಪ್ರಕರಣದ ಪ್ರಾರಂಭದಲ್ಲಿ ರಾಜ್ಯ ಸರ್ಕಾರ ತೋರಿದ ಸಡಿಲ ಧೋರಣೆ, ಮತ್ತು ತಮಗೆ ಬೇಕಾದ ಪ್ರಕರಣಗಳನ್ನಷ್ಟೇ ಆಯ್ದುಕೊಂಡು ಹೋರಾಟಕ್ಕೇ ಇಳಿಯುವ ರಾಜ್ಯದ ಪ್ರಮುಖ ವಿರೋಧ ಪಕ್ಷ ಭಾರತೀಯ ಜನತಾ ಪಕ್ಷ ಈ ಪ್ರಕರಣದ ಸಂದರ್ಭದಲ್ಲಿ ಮೌನಕ್ಕೆ ಶರಣಾಗಿದೆ ಯಾಕೆ ಎಂಬ ಪ್ರಶ್ನೆ ಸಹಜವಾಗಿಯೇ ಏಳುವುದಿಲ್ಲವೇ?

ಅತ್ಯಾಚಾರದ ವಿರುದ್ಧ ದೂರು ಕೊಡುವ ಪರಿಸ್ಥಿತಿ ನಿರ್ಮಾಣ ಆಗಬೇಕು

ಸದರಿ ಪ್ರಕರಣದ ಇಬ್ಬರು ದೂರುದಾರರು ಮತ್ತು ಅವರ ಪರವಾಗಿ ನಿಂತವರು ರಾಮಚಂದ್ರಾಪುರ ಮಠದ ಕಡೆಯವರಿಂದ ಎದುರಿಸುತ್ತಿರುವ ಕಿರುಕುಳ, ಎದುರಿಸುತ್ತಿರುವ ಯಾತನೆಗಳು ಅರ್ಥವಾಗಬೇಕಲ್ಲವೇ? ಕೇವಲ ಅತ್ಯಾಚಾರ ದೌರ್ಜನ್ಯಗಳ ವಿರುದ್ಧ ಬಾಹ್ಯೋಪಚಾರದ ಮಾತುಗಳನ್ನಾಡುವ ಬದಲು ಸರ್ಕಾರ ತನ್ನ ನಿಜವಾದ ಮಹಿಳಾ ಪರ ಬದ್ಧತೆಯನ್ನು ನೊಂದ ಮಹಿಳೆಯರಿಗೆ ನ್ಯಾಯ ಕೊಡಿಸಲು ಮುಂದಾಗಬೇಕು. ಜಸ್ಟೀಸ್ ವಿ.ಆರ್.ಕೃಷ್ಣ ಐಯ್ಯರ್ ರವರು “ಕೊಲೆಗಾರರು ದೇಹವನ್ನು ಕೊಂದರೆ ಅತ್ಯಾಚಾರಿಯು ಅವಳ ಆತ್ಮವನ್ನೇ ಕೊಲ್ಲುತ್ತಾನೆ” ಎಂದಿದ್ದಾರೆ.

ಈ ಪ್ರಕರಣದ ಡಿಸ್ಚಾರ್ಜ ಆದೇಶ ಕೂಡ ಸಂತ್ರಸ್ತೆಯನ್ನೇ ಅವಮಾನಿಸುವ ಹಲವು ಅಂಶಗಳನ್ನು ಹೊಂದಿದ್ದು ಜನರಲ್ಲಿ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ. ರಾಜ್ಯದಲ್ಲಿ ಸಂಚಲನ ಹುಟ್ಟಿಸಿದ್ದ, ಬಹು ಚರ್ಚಿತ ಅತ್ಯಾಚಾರದ ಪ್ರಕರಣವೊಂದು ಡಿಸ್ಚಾರ್ಜ ಆದೇಶದ ಮೂಲಕ ಆರೋಪಿಯನ್ನು ಬಿಡುಗಡೆಗೊಳಿಸಿ ಬಿಡುತ್ತದೆ ಎಂದರೆ ಮುಂದಿನ ದಿನಗಳಲ್ಲಿ ಅತ್ಯಾಚಾರಕ್ಕೆ ಒಳಗಾದವರು ಉಸಿರೂ ಬಿಡದೇ ಸುಮ್ಮನಿರುವಂಥಹ ವಾತಾವರಣವನ್ನು ನಿರ್ಮಿಸುತ್ತದೆ. ಇದು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕಾದ ಮತ್ತು ಸಾರ್ವಜನಿಕರು ಧ್ವನಿ ಎತ್ತಲೇ ಬೇಕಾದ ವಿಷಯ. ಇದನ್ನು ಕೇವಲ ಮಹಿಳಾ ವಿಷಯ ಎಂದುಕೊಂಡಲ್ಲಿ ತಪ್ಪಾಗುತ್ತದೆ. ಇದು ಸಮಾಜದ ಮೇಲಾಗುತ್ತಿರುವ ಅನ್ಯಾಯವೆಂದು ಪರಿಗಣಿಸಲೇ ಬೇಕಾದ ಘಳಿಗೆ ಇದು. ಕಾಲಚಕ್ರದ ಗತಿಯನ್ನು ಹಿಮ್ಮುಖದಿಂದ ಮುಂದೆ ಚಲಿಸುವಂತೆ ಮಾಡಲೇ ಬೇಕು. ಯಾಕೆಂಥರೆ ಮಹಿಳಾ ಹಕ್ಕುಗಳ ಪ್ರಶ್ನೆ ಬಂದಾಗೆಲ್ಲ ಸಮಾಜ, ಅಧಿಕಾರ ಇಂಥಹುದೇ ನಿಲುವುಗಳನ್ನು ತೆಗೆದುಕೊಳ್ಳುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಸಂವಿಧಾನ ಕೊಟ್ಟಿರುವ ತಾರತಮ್ಯವಿಲ್ಲದ ಹಕ್ಕುಗಳು ಮಹಿಳೆಯ ವಿಷಯದಲ್ಲಿ ಜಾರಿಯಾಗದೇ ಇದ್ದರೂ, ಜಾರಿ ಮಾಡದೇ ಇದ್ದರೂ ಅದು ನ್ಯಾಯಾಲಯವನ್ನು ಧಿಕ್ಕರಿಸಿದಂತೆ ಎಂದು ಪರಿಭಾವಿಸುವುದೇ ಇಲ್ಲ.

ಜನಶಕ್ತಿ ಕನ್ನಡ ವಾರಪತ್ರಿಕೆ

ವೆಬ್ ಸೈಟಿನಲ್ಲಿ ಏನಿದೆ?

janashakthi.co.in

1. ದೇಶದಲ್ಲಿ ಶೈಕ್ಷಣಿಕ ಅಸಮಾನತೆ ಎದ್ದು ಕಾಣುತ್ತಿದೆ: ಕೆ.ನಾಗರಾಜ್ ಕಳವಳ. ಡಿವೈಎಫ್‌ಐ ಅಧ್ಯಯನ ಶಿಬಿರ, ಉಡುಪಿ
2. ವಿದ್ಯುತ್ ಹಾಗೂ ಪೆಟ್ರೋಲ್ ಬೆಲೆ ಏರಿಕೆಗೆ ಸಿಪಿಐ(ಎಂ) ಖಂಡನೆ, ತುಮಕೂರು.
3. ಯಶಸ್ವಿಯಾಗಿ ನಡೆದ ಸಿಐಟಿಯು ತಾಲ್ಲೂಕು ಸಮ್ಮೇಳನ –ಬೆಳ್ತಂಗಡಿ, ದ.ಕ.
4. ಮಾಹಿತಿ ಹಕ್ಕು ಅರ್ಜಿ ಸಲ್ಲಿಸಿದ ಅಂಧ ವ್ಯಕ್ತಿಗೆ ಬೆದರಿಕೆ: ಅಂಗವಿಕಲರ ಒಕ್ಕೂಟ ಖಂಡನೆ, ಉಡುಪಿ
5. ಎಸ್.ಎಫ್.ಐ. ವತಿಯಿಂದ ಅಂಬೇಡ್ಕರ್ ಜಯಂತಿ ಕಾರ್ಯಕ್ರಮ – ಗಜೇಂದ್ರಗಢ, ಗದಗ
6. ಅತಿಥಿ ಉಪನ್ಯಾಸಕರು ಬೇಡಿಕೆ ಈಡೇರಿಸಲು ಒತ್ತಾಯ, ಹೋರಾಟದ ಎಚ್ಚರಿಕೆ
7. ದೇಶಭಕ್ತಿಯನ್ನು ಪುಟಿದೇಳಿಸುವ ಕೃತಿ – ‘ಜೆಎನ್‌ಯು ಮೇಲೆ ದಾಳಿ–ಭಾರತ ಮೇಲೆ ದಾಳಿ’ ಪುಸ್ತಕದ ವಿಮರ್ಶೆ
8. ಪರ್ಯಾಯ ಉದ್ಯೋಗ ನೀಡಲು ಆಗ್ರಹಿಸಿ ಬೀಡಿ ಕಾರ್ಮಿಕರಿಂದ ಪ್ರತಿಭಟನೆ, ತುಮಕೂರು.

ಇತ್ತೀಚಿನ ವರ್ಷಗಳಲ್ಲಿ ಎಡಪಂಥೀಯ ಚಿಂತನೆಯು ಅಂಬೇಡ್ಕರ್ ಅವರನ್ನು ಗಂಭೀರವಾಗಿ ವಿಶ್ಲೇಷಿಸುತ್ತಿದೆ. ಈ ಪ್ರಯತ್ನವು ಒಂದು trategy ಮಾತ್ರವಲ್ಲ, ಪ್ರಾಮಾಣಿಕವಾದ, ಚಿಂತನೆಯಲ್ಲಾದ ಪಲ್ಲಟವೆಂದು ವಿಶ್ವಾಸ ಹುಟ್ಟಿಸಬೇಕಾಗಿದೆ. ಮುಖ್ಯವಾಗಿ ಬಹುಸ್ತರೀಯವಾದ ಹಾಗೂ ಬಹುವಿಸ್ತಾರವಾದ ಅಂಬೇಡ್ಕರ್ ಚಿಂತನೆಯಲ್ಲಿ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟಗಳನ್ನು ರೂಪಿಸುವ ಅನೇಕ ಕ್ರಮಗಳ ಮಂಡನೆಯಿದೆ. ಅವರ ಹೋರಾಟಗಳನ್ನು ದಲಿತ ವರ್ಗಗಳ ಹೋರಾಟವೆಂದು ತಪ್ಪಾಗಿ ಗ್ರಹಿಸಿದ್ದರಿಂದಾಗಿ ಭಾರತೀಯ ರಾಜಕೀಯ ಚಿಂತನೆಯು ಅಂಬೇಡ್ಕರ್ ಅವರ ಮಹತ್ವವನ್ನು ಅರಿಯಲೇ ಇಲ್ಲ. ಅವರ ಹೋರಾಟವು ವೈದಿಕ ಬ್ರಾಹ್ಮಣಶಾಹಿ ಚಿಂತನೆ ಹಾಗೂ ಅದರ ಮೂರ್ತರೂಪವಾಗಿದ್ದ ಜಾತಿವ್ಯವಸ್ಥೆಯ ಫ್ಯಾಸಿಸ್ಟ್ ಸ್ವರೂಪದ ವಿರುದ್ಧವಾಗಿತ್ತು ಎನ್ನುವುದನ್ನು ಖಚಿತವಾಗಿ ಗ್ರಹಿಸಿದರೆ ಇಂದಿನ ನಮ್ಮ ಅವಶ್ಯಕತೆಯಾದ ಫ್ಯಾಸಿಜಮ್ ವಿರುದ್ಧದ ಪ್ರಜಾಸತ್ತಾತ್ಮಕ ಹೋರಾಟಕ್ಕೆ ಅಂಬೇಡ್ಕರ್ ಚಿಂತನೆಯು ಮಾರ್ಗದರ್ಶಿಯಾಗುತ್ತದೆ. ಈ ಶಕ್ತಿಗಳ ವಿರುದ್ಧದ ಹೋರಾಟವೆಂದರೆ ಅಂಬೇಡ್ಕರ್ ಹೋರಾಟಗಳ ಮರುಚೇತರಿಕೆಯೇ ಆಗಿದೆ. ಇಂಥ ತಾತ್ವಿಕತೆಯನ್ನು ಎಡಪಂಥೀಯ ಚಿಂತನೆಯು ರೂಪಿಸಿಕೊಳ್ಳದಿದ್ದರೆ ಈಗ ದೇಶದ ಉದ್ದಕ್ಕೂ ಚದುರಿದಂತೆ ಕೇಳಬರುತ್ತಿರುವ ಪ್ರತಿರೋಧದ ಎಳೆಗಳು ಒಂದುಗೂಡದೇ ಹೋಗಿ ಫ್ಯಾಸಿಜಮ್ ವಿರುದ್ಧ ಸೋತುಹೋಗುತ್ತವೆ.

ಅತಿಥಿ ಅಂಕಣ



ರಾಜೇಂದ್ರ ಚೆನ್ನಿ

ಫ್ಯಾಸಿಜಮ್ ವಿರುದ್ಧದ ಹೋರಾಟಕ್ಕೆ ಅಂಬೇಡ್ಕರ್ ಚಿಂತನೆ ಹೋರಾಟಗಳ ಮರುಚೇತರಿಕೆ ಅಗತ್ಯ

ಸ್ವಾತಂತ್ರ್ಯದ ನಂತರ ಅನೇಕ ದಶಕಗಳು ಕಳೆದು ಹೋದ ಮೇಲೆ ಈಗ ಭಾರತವು ಅಂಬೇಡ್ಕರ್ ಅವರನ್ನು ಮತ್ತೆ ಕಂಡುಕೊಳ್ಳುವ ಪ್ರಯತ್ನದಲ್ಲಿದೆ. ಈ ಪ್ರಯತ್ನದ ಹಲವು ಮುಖಗಳು ನಕಲಿಯಾಗಿದ್ದರೆ ಇನ್ನು ಕೆಲವು ಸಾಚಾ ಆಗಿವೆ. ನಕಲಿ ಪ್ರಯತ್ನಗಳಲ್ಲಿ ಮುಖ್ಯವಾದದ್ದೆಂದರೆ ಬಲಪಂಥೀಯ ರಾಜಕೀಯ ಪಕ್ಷಗಳು ಹಾಗೂ ಸಂಸ್ಥೆಗಳು ಅಂಬೇಡ್ಕರ್ ಅವರನ್ನು ಒಂದು ಲಾಂಛನವಾಗಿ ಬಳಸಿಕೊಳ್ಳುವ ಪ್ರಯತ್ನ. ದಲಿತ ಹಾಗೂ ಹಿಂದುಳಿದ ಜಾತಿ ವರ್ಗಗಳ ಬೆಂಬಲವಿಲ್ಲದೆ ಚುನಾವಣಾ ರಾಜಕೀಯದಲ್ಲಿ ಗೆಲುವು ಸಾಧ್ಯವಿಲ್ಲವೆನ್ನುವುದು ಖಚಿತವಾಗಿರುವುದರಿಂದ ಅಂಬೇಡ್ಕರ್ ಅವರನ್ನು ಒಂದು ಪ್ರತಿಮೆಯಾಗಿ ಬಳಸಿಕೊಳ್ಳುವ ಪ್ರಯತ್ನವನ್ನು ಅವು ಮಾಡುತ್ತಿವೆ. ತಾತ್ವಿಕವಾಗಿ ಇದಕ್ಕಿಂತ ಒಂದು ದೊಡ್ಡ ವಿರೋಧಾಭಾಸವು ಇರಲಿಕ್ಕೆ ಸಾಧ್ಯವಿಲ್ಲ. ಏಕೆಂದರೆ ಅಂಬೇಡ್ಕರ್ ಚಿಂತನೆಯ ಮೂಲ ಆಧಾರವೆಂದರೆ ತರತಮಗಳಿಂದ ಕೂಡಿದ ಅಸಮಾನತೆಯೇ ಲಕ್ಷಣವಾದ ಹಿಂದೂ ಸಮಾಜದ ಅತ್ಯಂತ ಕಟುವಾದ ವಿರೋಧವಾಗಿದೆ. ಅವರ ಪ್ರಧಾನ ಕೃತಿಯಾದ 'ಜಾತಿವಿನಾಶ'ದಲ್ಲಿ ಅವರ ನೇರವಾದ ಮಾತುಗಳು ಹೀಗಿವೆ:

"ಚಾತುರ್ವರ್ಣ ವ್ಯವಸ್ಥೆಗಿಂತ ಅವಮಾನಕಾರವಾದ ಬೇರೊಂದು ಸಾಮಾಜಿಕ ವ್ಯವಸ್ಥೆ ಇರಲು ಸಾಧ್ಯವಿಲ್ಲ. ಅದು ಜನರನ್ನು ಪ್ರಯೋಜನಕಾರಿ ಚಟುವಟಿಕೆಯಿಂದ ವಿಮುಖಗೊಳಿಸಿ ಅವರನ್ನು ನಿಶ್ಚೇಷ್ಟಿತರಾಗಿಸುವ ಅಂಗವಿಕರಂತಾಗಿಸುವ ಜಡ್ಡುಗಟ್ಟಿಸುವ ವ್ಯವಸ್ಥೆ. .. .. ಚಾತುರ್ವರ್ಣ ಹಾನಿಕಾರಕ. ಏಕೆಂದರೆ ಅದು ವರ್ಣವ್ಯವಸ್ಥೆಯ ಮುಖಾಂತರ ಜನರನ್ನು ಜ್ಞಾನ ವಂಚಿತರನ್ನಾಗಿಸಿ ಮತ್ತು ಶಸ್ತ್ರಗಳನ್ನು ಪಡೆಯುವ ಹಕ್ಕಿನಿಂದ ವಂಚಿಸಿ ಕೈಲಾಗದಂತೆ ಮಾಡಿ ಹೀನಾಯ ಸ್ಥಿತಿಗೆ ಇಳಿಸುವುದು"

ಸಂವಿಧಾನದ ವಿರುದ್ಧ ಬಲಪಂಥಿಯರ ಜೆಹಾದ್

ಈ ನಿಲುವನ್ನು ಅವರು ತಮ್ಮ ಜೀವಮಾನದಲ್ಲಿ ಬದಲಾಯಿಸಲೇ ಇಲ್ಲ. ಅಲ್ಲದೇ ಭೀಕರ ಅಸಮಾನತೆಗಳ ಈ ಸಮಾಜಕ್ಕೆ ಪ್ರತಿಯಾಗಿ ಎಲ್ಲಾ ಬಗೆಯ ಮೂಲ ಸಮಾನತೆಗಳನ್ನು ಹಾಗೂ ಸ್ವಾತಂತ್ರ್ಯಗಳನ್ನು ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಅನುಷ್ಠಾನಕ್ಕೆ ತರುವ ಸಂವಿಧಾನವನ್ನು ರಚಿಸಿಕೊಟ್ಟರು. ಸಂವಿಧಾನದ ಕೊರತೆಗಳು ಏನೇ ಇರಲಿ ನನ್ನ ದೃಷ್ಟಿಯಲ್ಲಿ ವರ್ಣ, ಜಾತಿ ಹಾಗೂ ಲಿಂಗ ಅಸಮಾನತೆಯನ್ನೇ ಪಾಲಿಸಿಕೊಂಡು ಬಂದಿರುವ ಭಾರತೀಯ ಸಮಾಜ ವ್ಯವಸ್ಥೆಯ ವಿರುದ್ಧ ಭಕ್ತಿ ಚಳುವಳಿಯನ್ನು ಬಿಟ್ಟರೆ ಸಂವಿಧಾನವೇ ಅತ್ಯಂತ ಪ್ರಬಲ ಪ್ರತಿರೋಧವಾಗಿದೆ. ಇದನ್ನು ಅರ್ಥಮಾಡಿಕೊಂಡಿರುವವರು ಬಲಪಂಥೀಯರೆ. ಆದ್ದರಿಂದಲೇ ಅಧಿಕಾರಕ್ಕೆ ಬಂದ ಕೂಡಲೇ ಅವರು ಸಂವಿಧಾನದ ತಿರುಳಾಗಿರುವ ಸಮಾನತೆ ಹಾಗೂ ಸ್ವಾತಂತ್ರ್ಯಗಳ ವಿರುದ್ಧ ತಮ್ಮ ಜೆಹಾದಿ ಯುದ್ಧವನ್ನೇ ಹೂಡುತ್ತಾರೆ. ಇಂದು ಭಾರತದಲ್ಲಿ ನಡೆಯುತ್ತಿರುವ ಅಸಹಿಷ್ಣುತೆಯ ಘಟನೆಗಳ ಹಿಂದಿರುವ ಮುಖ್ಯ ಉದ್ದೇಶವೆಂದರೆ,



ಸಂವಿಧಾನದ ಮೌಲ್ಯಗಳನ್ನು ಹಿಂಸೆಯ ಮೂಲಕ ನಾಶಪಡಿಸುವುದಾಗಿದೆ. ಹೀಗಾಗಿ ಬಲಪಂಥೀಯರ ನಿಜವಾದ ಗುರಿ ಕಾಂಗ್ರೆಸ್ ಅಲ್ಲ; ಅದು ಅಂಬೇಡ್ಕರ್ ಹಾಗೂ ಅವರು ರಚಿಸಿದ ಸಂವಿಧಾನವಾಗಿದೆ. ಇದು ವಾಸ್ತವವಾಗಿರುವಾಗ ಬಲಪಂಥೀಯ ರಾಜಕೀಯವು ಅಂಬೇಡ್ಕರ್ ಅವರನ್ನು ಪ್ರತಿಮೆಯಾಗಿ ಬಳಸಿಕೊಳ್ಳಲು ಮಾಡುವ ಪ್ರಯತ್ನಗಳು ಅತ್ಯಂತ ಸಿನಿಕತನದ ರಾಜಕೀಯ ಲೆಕ್ಕಾಚಾರದ ಪ್ರಯತ್ನಗಳಾಗಿವೆ.

ಇತ್ತೀಚಿನ ವರ್ಷಗಳಲ್ಲಿ ಎಡಪಂಥೀಯ ಚಿಂತನೆಯು ಅಂಬೇಡ್ಕರ್ ಅವರನ್ನು ಗಂಭೀರವಾಗಿ ವಿಶ್ಲೇಷಿಸುತ್ತಿದೆ. ಇದು ಸ್ವಾಗತಾರ್ಹವಾದರೂ ಇಷ್ಟು ಕಾಲದವರೆಗೆ ಅಂಬೇಡ್ಕರ್ ಅವರನ್ನು ಸಂಪೂರ್ಣವಾಗಿ ಅಲಕ್ಷ್ಯ ಮಾಡಿದ ವೈಚಾರಿಕ ಮಹಾ ದುರಂತದಿಂದ ಹೊರಬರಲು ದೊಡ್ಡ ಪ್ರಯತ್ನವೇ ಆಗಬೇಕಿದೆ. ಈ ಪ್ರಯತ್ನವು ಒಂದು strategy ಮಾತ್ರವಲ್ಲ, ಪ್ರಾಮಾಣಿಕವಾದ, ಚಿಂತನೆಯಲ್ಲಾದ ಪಲ್ಲಟವೆಂದು ವಿಶ್ವಾಸ ಹುಟ್ಟಿಸಬೇಕಾಗಿದೆ. ಮುಖ್ಯವಾಗಿ ಬಹುಸ್ತರೀಯವಾದ ಹಾಗೂ ಬಹುವಿಸ್ತಾರವಾದ ಅಂಬೇಡ್ಕರ್ ಚಿಂತನೆಯಲ್ಲಿ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಪ್ರಜಾಸತ್ತಾತ್ಮಕ ಹೋರಾಟಗಳನ್ನು ರೂಪಿಸುವ ಅನೇಕ ಕ್ರಮಗಳ ಮಂಡನೆಯಿದೆ. ಮಹಾಡ್ ಕೆರೆಯ ಸತ್ಯಾಗ್ರಹದಿಂದ ಆರಂಭವಾಗಿ ಅವರ ಜೀವಮಾನದ ಬಹುಭಾಗದಲ್ಲಿ ಅಂಬೇಡ್ಕರ್ ಅತ್ಯಂತ ಪ್ರಬಲವಾದ ಜನಹೋರಾಟಗಳನ್ನು ರೂಪಿಸುತ್ತ, ಈ ಹೋರಾಟಗಳಿಗೆ ಜೀವ ಕೊಡುವ ತಾತ್ವಿಕತೆಯನ್ನು ನಿರ್ಮಿಸುತ್ತ ಬಂದರು. ಅವರು ಮೂಲಭೂತವಾಗಿ ಒಪ್ಪಿಕೊಂಡಿದ್ದ ಪ್ರಜಾಪ್ರಭುತ್ವ, ಚುನಾವಣಾ ಆಧಾರಿತ ರಾಜಕೀಯದ ಚೌಕಟ್ಟಿನ ಒಳಗೇ ಈ ಹೋರಾಟಗಳನ್ನು ರೂಪಿಸಿದರು. ಆ ಹೋರಾಟಗಳನ್ನು ದಲಿತ ವರ್ಗಗಳ ಹೋರಾಟವೆಂದು ತಪ್ಪಾಗಿ ಗ್ರಹಿಸಿದ್ದರಿಂದಾಗಿ ಭಾರತೀಯ ರಾಜಕೀಯ ಚಿಂತನೆಯು ಅಂಬೇಡ್ಕರ್ ಅವರ ಮಹತ್ವವನ್ನು ಅರಿಯಲೇ ಇಲ್ಲ. ಅವರ ಹೋರಾಟವು ವೈದಿಕ ಬ್ರಾಹ್ಮಣಶಾಹಿ ಚಿಂತನೆ ಹಾಗೂ ಅದರ ಮೂರ್ತರೂಪವಾಗಿದ್ದ ಜಾತಿವ್ಯವಸ್ಥೆಯ ಫ್ಯಾಸಿಸ್ಟ್ ಸ್ವರೂಪದ ವಿರುದ್ಧವಾಗಿತ್ತು ಎನ್ನುವುದನ್ನು ಖಚಿತವಾಗಿ ಗ್ರಹಿಸಿದರೆ ಇಂದಿನ ನಮ್ಮ ಅವಶ್ಯಕತೆಯಾದ ಫ್ಯಾಸಿಜಮ್ ವಿರುದ್ಧದ ಪ್ರಜಾಸತ್ತಾತ್ಮಕ ಹೋರಾಟಕ್ಕೆ ಅಂಬೇಡ್ಕರ್ ಚಿಂತನೆಯು ಮಾರ್ಗದರ್ಶಿಯಾಗುತ್ತದೆ. ಇಷ್ಟೇ ಖಚಿತವಾಗಿ ಗೃಹಿಸಬೇಕಾದ ವಿಷಯವೆಂದರೆ ಭಾರತೀಯ ಸಮಾಜದೊಳಗೇ ಅಂತರ್ಗತವಾಗಿರುವ ಮೂಲ ಫ್ಯಾಸಿಸ್ಟ್ ಶಕ್ತಿಗಳನ್ನು ಅಂಬೇಡ್ಕರ್ ವಿರೋಧಿಸಿದರೋ ಆ ಶಕ್ತಿಗಳ ಮೂರ್ತರೂಪವಾಗಿ, ರಾಜಕೀಯ ಅಧಿಕಾರ ಪಡೆದಿರುವುದು ಇಂದಿನ ರಾಜಕೀಯ ವ್ಯವಸ್ಥೆಯಾಗಿದೆ. ಹೀಗಾಗಿ ಈ ಶಕ್ತಿಗಳ ವಿರುದ್ಧದ ಹೋರಾಟವೆಂದರೆ ಅಂಬೇಡ್ಕರ್ ಹೋರಾಟಗಳ ಮರುಚೇತರಿಕೆಯೇ ಆಗಿದೆ. ಇಂಥ ತಾತ್ವಿಕತೆಯನ್ನು ಎಡಪಂಥೀಯ ಚಿಂತನೆಯು ರೂಪಿಸಿಕೊಳ್ಳದಿದ್ದರೆ ಈಗ ದೇಶದ ಉದ್ದಕ್ಕೂ ಚದುರಿದಂತೆ ಕೇಳಿಬರುತ್ತಿರುವ ಪ್ರತಿರೋಧದ ಎಳೆಗಳು ಒಂದುಗೂಡದೇ ಹೋಗಿ ಫ್ಯಾಸಿಜಮ್ ವಿರುದ್ಧ ಸೋತುಹೋಗುತ್ತವೆ.

'ರೋಹಿತ'ರನ್ನು ಬೇಟೆಯಾಡಲು ಫತ್ವಾ


ಅಂಬೇಡ್ಕರ್ ಅವರು ಅತ್ಯಂತ ಕರಾರುವಾಕ್ಕಾಗಿ ಭವಿಷ್ಯ ನುಡಿದಂತೆ ಪ್ರಬಲ ಜಾತಿಗಳ ಆಳುವ ವರ್ಗಗಳು ಚುನಾವಣಾ ರಾಜಕೀಯದಲ್ಲಿ ದಲಿತ ನಾಯಕರನ್ನು ಕೋಡಂಗಿಗಳಾಗಿ ಬಳಸಿಕೊಳ್ಳುತ್ತಾ ಬಂದಿವೆ. ಕಾಂಗ್ರೆಸ್ ರಾಜಕೀಯವು ಅಂಬೇಡ್ಕರ್ ಮಾದರಿಯ ಪ್ರತಿಭಟನಾತ್ಮಕ ವ್ಯಕ್ತಿತ್ವವುಳ್ಳ ದಲಿತ ನಾಯಕರುಗಳನ್ನು ಅಧಿಕಾರ ರಾಜಕೀಯದಲ್ಲಿ ಪಳಗಿಸಿ, ಕಬಳಿಸಿ ಪ್ಯಾದೆಗಳನ್ನಾಗಿ ಪರಿವರ್ತಿಸುತ್ತ ಬಂದಿದೆ. ದುರಂತವೆಂದರೆ, ಅಂಬೇಡ್ಕರ್ ಅವರ ಕೊಡುಗೆಯಾದ ಮೀಸಲಾತಿಯ ಮೂಲಕ ಶಿಕ್ಷಣ, ಉದ್ಯೋಗ ಹಾಗೂ ಗುರುತನ್ನು ಪಡೆದುಕೊಂಡಿರುವ ಶಿಕ್ಷಿತ ದಲಿತವರ್ಗವು ಅಂಬೇಡ್ಕರ್ ಚಿಂತನೆಯನ್ನು ಮೀಸಲಾತಿಗೆ ಇಳಿಸಿಬಿಟ್ಟಿದೆ. ಹೀಗಾಗಿ ಈ ವರ್ಗದಲ್ಲಿ ಎಡ–ಬಲ ಮೀಸಲಾತಿಯ ಹೋರಾಟವನ್ನು ಬಿಟ್ಟರೆ ಇನ್ನಾವ ಹೋರಾಟದ ಬಗ್ಗೆ ಆಸಕ್ತಿ ಇದ್ದಂತೆ ತೋರುವುದಿಲ್ಲ. ಇಂಥ ನಿರಾಶೆಯ ವಾತಾವರಣದಲ್ಲಿ ವಿಶ್ವಾಸ ಹುಟ್ಟಿಸುವ ಎರಡು ಸಂಗತಿಗಳು ನಮ್ಮೆದುರಿಗಿವೆ. ಒಂದು ರೋಹಿತ್ ವೇಮುಲರಂಥ ಪ್ರಬಲ ಅಂಬೇಡ್ಕರ್‌ವಾದಿ ಯುವ ಚಿಂತಕರು ಹಾಗೂ ಹೋರಾಟಗಾರರು. ಇವರು ಪ್ರತಿಭಟನಾತ್ಮಕ ಅಂಬೇಡ್ಕರ್ ವ್ಯಕ್ತಿತ್ವದ ಎರಕದಲ್ಲಿ ರೂಪುಗೊಂಡಿದ್ದಾರೆ. ಅವರಂತೆಯೇ ಚಿಂತನಶೀಲತೆ ಹಾಗೂ ಕ್ರಿಯಾಶೀಲತೆಯನ್ನು ಒಂದುಗೂಡಿಸುವ ಶಕ್ತಿಹೊಂದಿದ್ದಾರೆ. ಈ ವಿದ್ಯಮಾನವನ್ನು ಅರ್ಥಮಾಡಿಕೊಂಡು ಗಾಬರಿಗೊಂಡಿರುವ ಬಲಪಂಥೀಯ ಸಂಸ್ಥೆಗಳು ತಮ್ಮ ವಿದ್ಯಾರ್ಥಿ ಸಂಘಟನೆಯ ಕೈಗೆ ರಾಷ್ಟ್ರವಾದವೆನ್ನುವ ಅಸ್ತ್ರವನ್ನು ಕೊಟ್ಟು ಈ ಯುವಶಕ್ತಿಗಳನ್ನು ಬೇಟೆಯಾಡುವ ಫತ್ವಾ ಹೊರಡಿಸಿವೆ. ಆದ್ದರಿಂದಲೇ ಇಂದು ವಿಶ್ವವಿದ್ಯಾನಿಲಯಗಳು ಪ್ರಕ್ಷುಬ್ಧವಾಗಿವೆ. ನನ್ನ ಗೃಹಿಕೆಯ ಪ್ರಕಾರ ಅಂಬೇಡ್ಕರ್ ಚಿಂತನೆಯನ್ನೂ ಒಳಗೊಂಡಿರುವ ಹೊಸ ವೈಚಾರಿಕತೆಯನ್ನು ದಮನ ಮಾಡುವ ಉದ್ದೇಶದಿಂದಾಗಿ ವಿಶ್ವವಿದ್ಯಾನಿಲಯಗಳು ಹಾಗೂ ಶಿಕ್ಷಣ ಸಂಸ್ಥೆಗಳ ಮೇಲೆ ಹಿಂಸಾತ್ಮಕವಾದ ದಾಳಿಗಳು ಹೀಗೆಯೇ ಮುಂದುವರೆಯುತ್ತವೆ. ಏಕೆಂದರೆ ಇದು ಬಲಪಂಥೀಯ ಜೆಹಾದ್.

ಇನ್ನೊಂದು ಸಂಗತಿಯೆಂದರೆ ಹುಸಿ ರಾಷ್ಟ್ರವಾದದ ಅಪಾಯಗಳನ್ನು ದೇಶವು ಇವತ್ತು ಮನಗಾಣುತ್ತಿದೆ. ಇತಿಹಾಸದ ಪಾಠವೆಂದರೆ ಆರ್ಥಿಕವಾಗಿ ದುರ್ಬಲಗೊಂಡು ತತ್ತರಿಸುವ ದೇಶಗಳಲ್ಲಿ ನೈಜವಾದ ಪ್ರತಿಭಟನೆಯ ಬದಲಾಗಿ ಹುಸಿ ರಾಷ್ಟ್ರೀಯತೆಯ ಅಬ್ಬರವೇ ಹೆಚ್ಚಾಗುತ್ತದೆ. ಇಂದು ಈ ವಿದ್ಯಮಾನವನ್ನು ಜಗತ್ತಿನ ಅಸಂಖ್ಯ ರಾಷ್ಟ್ರಗಳಲ್ಲಿ ಕಾಣುತ್ತಿದ್ದೇವೆ. ಜಾಗತೀಕರಣದ ಹೆಸರಿನಲ್ಲಿ ಅನುಷ್ಠಾನಕ್ಕೆ ತಂದಿರುವ ಆರ್ಥಿಕ ಉದಾರ ವಾದವು ಒಂದು ಅಲ್ಪಸಂಖ್ಯಾತ ವರ್ಗಕ್ಕೆ ಅಪಾರವಾದ ಸಂಪತ್ತನ್ನು ಹಾಗೂ ಬಹುಸಂಖ್ಯಾತರಿಗೆ ತೀವ್ರ ಬಡತನವನ್ನೂ ತಂದಿದೆ. ಈ ವೈರುಧ್ಯದಿಂದಾಗಿ ವಾಸ್ತವವಾಗಿ ವರ್ಗಹೋರಾಟವು ಆರಂಭವಾಗಬೇಕಿತ್ತು. ಆದರೆ ಅದರ ಬದಲಾಗಿ ಹುಸಿರಾಷ್ಟ್ರವಾದ, ಅಲ್ಪಸಂಖ್ಯಾತರ ವಿರೋಧಿ ರಾಜಕೀಯ, ಜನಾಂಗೀಯ ದ್ವೇಷ, ವಲಸೆ ಬಂದಿರುವವರ ವಿರುದ್ಧ ಆಕ್ಷೇಪ ಇವುಗಳನ್ನು ಧಾರಾಳವಾಗಿ ಬಳಸಿಕೊಳ್ಳುವ ಬಲಪಂಥೀಯ ರಾಜಕೀಯವು ಇಂದು ಜಗತ್ತಿನ ಬಹುಪಾಲು ರಾಷ್ಟ್ರಗಳಲ್ಲಿ ರಾಜಕೀಯ ಅಧಿಕಾರ ಪಡೆದುಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ಅಂಬೇಡ್ಕರ್ ಚಿಂತನೆಯ ಮೂಲಕ ಹುಸಿರಾಷ್ಟ್ರವಾದದ ವಿರುದ್ಧ ಪ್ರಬಲವಾದ ಕ್ರಿಯಾಶೀಲತೆಯನ್ನು ರೂಪಿಸುವುದು ಇಂದಿನ ಅವಶ್ಯಕತೆಯಾಗಿದೆ.

PÉÃ½ZÀÄÄÝ

ರಾಂದೇವ್ ಮತ್ತು
ಪಾಲುದಾರ ಬಾಲಕೃಷ್ಣ
ಆಹಾರವಸ್ತುಗಳು, ಪಾನೀಯಗಳು,
ಆಯುರ್ವೇದ ಔಷಧಿಗಳು ಇತ್ಯಾದಿಗಳಲ್ಲಿ 5000
ಕೋಟಿ ರೂ.ಗಳಿಗೂ ಮೀರಿದ ವ್ಯವಹಾರ
ನಡೆಸುತ್ತಿದ್ದಾರೆ. ಇದಕ್ಕೆಲ್ಲ ಅಧಿಕಾರಸ್ಥರೊಂದಿಗೆ
ನಿಕಟ ಸಂಬಂಧ ಬೇಕು. ಚಮಚಾ
ಬಂಡವಾಳಶಾಹಿಗಳು ಹೆಚ್ಚಿನ ಬಂಡವಾಳಶಾಹಿ
ಆರ್ಥಿಕಗಳ ಒಂದು ಲಕ್ಷಣ. ಆದರೆ ಚಮಚಾ
ಸ್ವಾಮಿಗಳು ಬಹುಶಃ ವಿಶಿಷ್ಟವಾಗಿ 'ಮೇಡ್
ಇನ್ ಇಂಡಿಯಾ'. ಈತ ಕಟ್ಟಿದ ಬಹಳಷ್ಟು
ಉದ್ದಿಮೆಗಳು ವಿವಿಧ ಸರಕಾರಗಳಿಂದ ಭಾರಿ
ಕಡಿಮೆ ದರಗಳಲ್ಲಿ ದಾನವಾಗಿ ಪಡೆದವುಗಳೇ.

–ಬೃಂದಾ ಕಾರಟ್



ಅಂಬೇಡ್ಕರ್ ನೀಡಿದ ಬಂಡಾಯದ ಅಂಶಗಳನ್ನು ದುಡಿಯುವ ವರ್ಗದ ಪಕ್ಷ ಮುಂದುವರಿಸಬೇಕು

"ಜಾತಿಗಳ ಭೌತಿಕ ತಳಹದಿಯು ಈಗ ಮಾಯವಾಗುತ್ತಿದೆಯಾದರೂ ಅದು ಸಾಮಾಜಿಕ ಹೊರರಚನೆಗೆ ಪಟ್ಟಾಗಿ ಅಂಟಿಕೊಂಡಿದೆ. ಅಲ್ಲಿ ಅದಕ್ಕೆ ಶೋಷಕ ವರ್ಗಗಳಿಂದ ಮತ್ತು ಅವುಗಳ ರಾಜಕೀಯ ನಿರ್ವಾಹಕರಿಂದ ಪೋಷಣೆ ಸಿಗುತ್ತಾ ಬಂದಿದೆ. ಸಾಮಾಜಿಕ ಸುಧಾರಣೆಗಾಗಿ ರಾಜಾರಾಮ್ ಮೋಹನ್‌ರಾಯ್ ಮೊದಲಾದವರಿಂದ ಪ್ರಾರಂಭವಾದ, ಫುಲೆ ಮತ್ತು ಅಂಬೇಡ್ಕರ್ ಜಾತಿ ಪದ್ಧತಿಯ ನಿರ್ಮೂಲನದ ಬಂಡಾಯದ ಅಂಶಗಳನ್ನು ನೀಡಿದ ಸಾಮಾಜಿಕ ಸುಧಾರಣೆಯ ಆಂದೋಲನವನ್ನು ದುಡಿಯುವ ವರ್ಗದ ಪಕ್ಷ ಮುಂದುವರಿಸಬೇಕು, ಈ ಮೂಲಕ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಭಾಗವಾದ ಊಳಿಗಮಾನ್ಯ-ವಿರೋಧಿ ಕೆಲಸಗಳನ್ನು ಪೂರ್ಣಗೊಳಿಸಬೇಕು."

ಇದು 25 ವರ್ಷಗಳ ಹಿಂದೆ, ಡಾ.ಅಂಬೇಡ್ಕರ್ ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಮಹಾರಾಷ್ಟ್ರದ ಹಿರಿಯ ಕಾರ್ಮಿಕ ಮುಂದಾಳು ಮತ್ತು ಸಿಪಿಐ(ಎಂ) ಮುಖಂಡ ಪ್ರಭಾಕರ ಸಂಝುಗಿರಿಯವರು ಅವರ ಜೀವನ ಮತ್ತು ಹೋರಾಟದ ಒಂದು ವಸ್ತುನಿಷ್ಟ ಪರಾಮರ್ಶೆಯ ಕೊನೆಯಲ್ಲಿ ಹೇಳಿದ್ದ ಮಾತು. ಅವರ ಈ ಅಧ್ಯಯನದ ಅಂತಿಮ ಭಾಗವನ್ನು ನಮ್ಮ ಓದುಗರಿಗಾಗಿ ಇಲ್ಲಿ ಪ್ರಕಟಿಸುತ್ತಿದ್ದೇವೆ.

(ಕೃಪೆ: ಪ್ರಭಾಕರ ಸಂಝುಗಿರಿಯವರ 'ಡಾ. ಬಿ.ಆರ್.ಅಂಬೇಡ್ಕರ್-ಜೀವನ ಮತ್ತು ಹೋರಾಟ: ಒಂದು ಅಧ್ಯಯನ', ಅನುವಾದ: ಸಬಿತಾ ಶರ್ಮ, ಮೊದಲ ಪ್ರಕಟಣೆ: ಚಿಂತನ-ಉತ್ತರ ಕನ್ನಡ, ಮರು ಪ್ರಕಟಣೆ: ಕ್ರಿಯಾ ಪ್ರಕಾಶನ)

-ಪ್ರಭಾಕರ ಸಂಝುಗಿರಿ

"ರೈಲ್ವೆ ವ್ಯವಸ್ಥೆಯ ಪರಿಣಾಮವಾಗಿ ಬರುವ ಆಧುನಿಕ ಉದ್ದಿಮೆ ಭಾರತೀಯ ಪ್ರಗತಿ ಮತ್ತು ಅಧಿಕಾರಕ್ಕೆ ನಿರ್ಣಾಯಕ ಅಡ್ಡಿಯಾಗಿರುವ ವಂಶಾನುಗತ ಶ್ರಮ ವಿಭಜನೆಯನ್ನು, ಯಾವುದರ ಮೇಲೆ ಭಾರತೀಯ ಜಾತಿಗಳು ನಿಂತಿವೆಯೋ ಅದನ್ನು ವಿಸರ್ಜಿಸುತ್ತದೆ." ಇದು ನ್ಯೂಯಾರ್ಕ್ ಡೈಲಿ ಟ್ರಿಬ್ಯೂನ್‌ನಲ್ಲಿ 1853 ರಲ್ಲಿ ಬರೆದ ಲೇಖನದಲ್ಲಿಯ ಮಾರ್ಕ್ಸ್‌ನ ಸುಪ್ರಸಿದ್ಧ ಹೇಳಿಕೆ.

ಟೀಕಾಕಾರರು ಮಾರ್ಕ್ಸ್‌ನ ಈ ಭವಿಷ್ಯವಾಣಿ ಈಡೇರಿಲ್ಲ, ಆಧುನಿಕ ಕೈಗಾರಿಕೆಗಳು ಮುನ್ನಡೆ ಸಾಧಿಸಿದರೂ ಅದರಿಂದ ಜಾತಿ ವ್ಯವಸ್ಥೆಯೇನೂ ನಾಶವಾಗಿಲ್ಲ ಎಂದು ತಕ್ಷಣವೇ ಹೇಳುತ್ತಾರೆ. ಆದ್ದರಿಂದ ಭಾರತೀಯ ಸಮಾಜದ ವಿಶಿಷ್ಟ ಲಕ್ಷಣಗಳನ್ನು ಕೇವಲ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ಮಾತ್ರ ವಿವರಿಸಲು ಮತ್ತು ಎದುರಿಸಲು ಸಾಧ್ಯವಿಲ್ಲ ಎಂದು ಆಗ್ರಹಪೂರ್ವಕವಾಗಿ ಹೇಳಲಾಗುತ್ತದೆ.

ಆದರೆ ಆಧುನಿಕ ಕೈಗಾರಿಕೆಗಳ ಮುನ್ನಡೆಯೊಂದಿಗೆ ತನ್ನಿಂದ ತಾನೇ ಜಾತಿ ಪದ್ಧತಿಯು ಕೊನೆಗೊಳ್ಳುತ್ತದೆ ಎಂದೇನೂ ಮಾರ್ಕ್ಸ್ ಹೇಳಿರಲಿಲ್ಲ. ಆತ ಹೇಳಿದ್ದು ಜಾತಿ ಪದ್ಧತಿ ಪಾರಂಪರಿಕವಾಗಿ ಬಂದಿರುವ ಶ್ರಮವಿಭಜನೆಯ ಆಧಾರದ ಮೇಲೆ ನಿಂತಿದೆ, ಆಧುನಿಕ ಕೈಗಾರಿಕೆಗಳ ಬೆಳವಣಿಗೆ ಈ ಭೌತಿಕ ಆಧಾರವನ್ನು ವಿಸರ್ಜಿಸುತ್ತದೆ ಎಂದು.

ಇದು ಸಂಭವಿಸಿದೆ ಎನ್ನುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ತನ್ನ ಪೂರ್ವಜರ ವೃತ್ತಿಯನ್ನೇ ಮುಂದುವರಿಸಬೇಕೆಂಬ ನಿಯಮ ಈ ಪದ್ಧತಿಯ ಒಂದು ಪುರಾತನ ಲಕ್ಷಣವಾಗಿದ್ದು ಅದು ಈಗ ಮಾಯವಾಗಿದೆ. ನೀರು, ಅನ್ನವನ್ನು ಮುಟ್ಟಿದರೆ ಮೈಲಿಗೆ ಆಗುತ್ತದೆ ಎಂಬ ಭಾವನೆ ಬಹಳಷ್ಟು ಕ್ಷೀಣವಾಗಿದೆ, ವಿಶೇಷವಾಗಿ ಆಧುನಿಕ ಕೈಗಾರಿಕೆಯ ಅಸ್ತಿತ್ವ ಅನುಭವಕ್ಕೆ ಬರುವ ಸ್ಥಳಗಳಲ್ಲಿ.

ಎಲ್ಲಕ್ಕೂ ಮಿಗಿಲಾಗಿ ಸಂಬಂಧಪಟ್ಟ ಭೌತಿಕ ಸ್ಥಿತಿಗತಿಗಳಿಂದಲೇ ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಗಳ ವಿರುದ್ಧ ಬಂಡಾಯ ಆರಂಭವಾಗುವಂತಾಗಿ ಫುಲೆ ಮತ್ತು ಅಂಬೇಡ್ಕರ್‌ರಂತಹ ನಾಯಕರು ಹುಟ್ಟಿ ಬಂದರು. ಜಾತೀಯ ಅಸಮಾನತೆಗಳನ್ನು ಆಕ್ಷೇಪಿಸಿದ ಧಾರ್ಮಿಕ ಚಿಂತಕರು ಈ ಹಿಂದೆಯೇ ಭಾರತದಲ್ಲಿ ಬಂದು ಹೋದರು. ಇಂತಹ ಧರ್ಮಗಳೂ ಇದ್ದವು, ಭಾರತದಾದ್ಯಂತ ಪಸರಿಸಿದ್ದ ಬೌದ್ಧ ಮತ್ತು ಜೈನ ಧರ್ಮದ ಮೂಲ ಬೋಧನೆಗಳಲ್ಲಿ ಜಾತಿಗೆ ಯಾವುದೇ ಸ್ಥಾನವಿರಲಿಲ್ಲ. ಭಾರತವನ್ನು ಶತಮಾನಗಳ ಕಾಲ ಆಳಿದ ಮುಸ್ಲಿಮರಿಗೆ ಜಾತಿ ಸಂಪೂರ್ಣವಾಗಿ ಅಪರಿಚಿತವಾಗಿತ್ತು. ಆದರೆ ಇಷ್ಟೆಲ್ಲಾ ಆಗಿಯೂ ಜಾತಿಯು ಉಳಿದು ಬೆಳೆದುಕೊಂಡು ಬಂದಿತು. ಹೀಗಾಗಲು ಕಾರಣ, ಅದರ ಭೌತಿಕ ತಳಹದಿಯು ಯಾವುದೇ ಬದಲಾವಣೆಗಳಿಲ್ಲದೆ ಸುಮಾರಾಗಿ ಹಾಗೇ ಉಳಿದುಕೊಂಡು ಬಂದಿತ್ತು. ಯಾವಾಗ ಹೊಸ ಭೌತಿಕ ಸ್ಥಿತಿಗತಿಗಳು ಪ್ರವೇಶಗೊಂಡು ಅಸ್ತಿತ್ವಕ್ಕೆ ಬಂದವೋ ಆಗ ಒಂದು ಹೊಸ ಪ್ರಜ್ಞೆಯ ಮತ್ತು ಬಂಡಾಯದ ಉದಯಕ್ಕೆ ಅವಕಾಶವಾಯಿತು. ಅದೀಗ ಜಾತಿ ಪದ್ಧತಿಗೆ ಬೆದರಿಕೆಯೊಡ್ಡಿದೆ.

ಈ ರೀತಿಯ ಪ್ರಜ್ಞೆ ಮತ್ತು ಬಂಡಾಯ ಬೆಳೆಯುತ್ತಿದೆ. ಭೂಮಾಲಕರ ಅತ್ಯಾಚಾರಗಳಿಗೆ ಪ್ರತಿರೋಧ ಮತ್ತು ಮಂಡಲ್ ವರದಿಯ ಶಿಫಾರಸುಗಳನ್ನು ಜಾರಿಗೆ ತರುವಂತೆ ಹೆಚ್ಚುತ್ತಿರುವ ಬೇಡಿಕೆಗಳು ಇದನ್ನು ತೋರಿಸುತ್ತವೆ.

ಮತ್ತೊಮ್ಮೆ ಮಾರ್ಕ್ಸ್ ಮಾತುಗಳನ್ನು ಉದ್ಧರಿಸುವುದಾದರೆ "ಇಂಗ್ಲೆಂಡಿನ ಬೂರ್ಜ್ವಾ ವರ್ಗ ಏನೆಲ್ಲಾ ಮಾಡಬೇಕಾಗಿ ಬಂದರೂ ಅದರಿಂದ ಜನಸಮೂಹಗಳ ಉದ್ಧಾರವಾಗಲೀ, ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಸರಿಪಡಿಸುವುದಾಗಲೀ ಸಾಧ್ಯವಿಲ್ಲ. ಯಾಕೆಂದರೆ ಅದು ಜನತೆಯ ಉತ್ಪಾದನಾ ಶಕ್ತಿಗಳ ಬೆಳವಣಿಗೆಯನ್ನು ಅವಲಂಬಿಸಿರುವುದು ಮಾತ್ರವಲ್ಲದೆ, ಜನತೆ ಅವುಗಳನ್ನು ದಕ್ಕಿಸಿಕೊಳ್ಳುವುದನ್ನು ಕೂಡಾ ಅವಲಂಬಿಸಿದೆ."

ಇಂಗ್ಲೆಂಡಿನ ಬೂರ್ಜ್ವಾ ವರ್ಗದಿಂದ ಅಧಿಕಾರದ ಚುಕ್ಕಾಣಿಯನ್ನು ಭಾರತೀಯ ಬೂರ್ಜ್ವಾ ವರ್ಗ ವಹಿಸಿಕೊಂಡಿತು. ಅವರು ಊಳಿಗಮಾನ್ಯ ಶಕ್ತಿಗಳನ್ನು ತಮ್ಮ ಮಿತ್ರರಾಗಿ ಆರಿಸಿಕೊಂಡರು. ಇವರು ಭಾರತದ ಉತ್ಪಾದನಾ ಶಕ್ತಿಗಳನ್ನು ಬೆಳೆಸಲು ಆರಿಸಿಕೊಂಡ ಮಾರ್ಗ, ತಮ್ಮ ಸಂಕುಚಿತ ವರ್ಗ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲೆಂದು ರೂಪಿಸಿದ ಮಾರ್ಗವಾಗಿತ್ತು. ಇದು ಬೆಳವಣಿಗೆಯನ್ನು ಕುಂಠಿತಗೊಳಿಸಿದ್ದೇ ಅಲ್ಲದೇ ಜನಸಮೂಹಗಳ ಮೇಲೆ ಸಂಕಷ್ಟಗಳನ್ನು ಹೇರಿತು ಹಾಗೂ ಜಾತಿ ಮತ್ತು ಕೋಮು ವಿಭಜನೆಯ ಶಕ್ತಿಗಳು ಮತ್ತಷ್ಟು ಬಲಗೊಳ್ಳುವಂತೆ ಮಾಡಿತು. ಕೇವಲ "ಬೆಳೆಯುತ್ತಿರುವ ಉತ್ಪಾದನಾ ಶಕ್ತಿಗಳನ್ನು ಜನತೆ ದಕ್ಕಿಸಿಕೊಳ್ಳುವ" ಒಂದು ಬೆಳವಣಿಗೆಯ ಮಾರ್ಗದಿಂದ ಮಾತ್ರವೇ "ಜನಸಮೂಹಗಳ ಉದ್ಧಾರವಾಗಲೀ, ಅವರ ಸಾಮಾಜಿಕ ಸ್ಥಿತಿಗತಿಗಳನ್ನು ಸರಿಪಡಿಸುವುದಾಗಲಿ" ಸಾಧ್ಯ. ಜಾತಿ ದಮನಕ್ಕೆ ಸಂಬಂಧಿಸಿದಂತೆಯೂ ಈ ಮಾತು ಅನ್ವಯಿಸುತ್ತದೆ.

ಅಂಬೇಡ್ಕರ್ ಪ್ರತಿಪಾದಿಸಿದಂತೆ ಭಾರತೀಯ ಸಮಾಜದ ಒಂದು ತೀವ್ರಗಾಮೀ ಪುನರ್ನಿರ್ಮಾಣ ವರ್ಗಸಂಘರ್ಷವನ್ನು ತೀವ್ರಗೊಳಿಸದೆ ಮತ್ತು ಬಲಪಡಿಸದೆ ಸಾಧ್ಯವಿಲ್ಲ. ಗಾಂಧೀಜಿಯವರಿಗಂತೂ ವರ್ಗಸಂಘರ್ಷ ಒಂದು ಶಾಪವೆನಿಸಿತ್ತು. ಅಂಬೇಡ್ಕರ್ ಜಾತಿ-ವಿರೋಧಿ ಸಂಘರ್ಷವೇ ಮೊದಲು ಎಂದು ಕಂಡರು ಮತ್ತು ಅವರು ಇದನ್ನು ವರ್ಗ ಸಂಘರ್ಷದಿಂದ ಬೇರ್ಪಡಿಸಿದರು. ಹೀಗಾಗಿ ಇವರಿಬ್ಬರ ಪ್ರಯತ್ನಗಳೂ ತಮ್ಮ ಗುರಿಯನ್ನು ತಲುಪುವಲ್ಲಿ ವಿಫಲವಾದವು.

ಶೋಷಣೆಯ ವಿರುದ್ಧದ ಸರ್ವಸಾಮಾನ್ಯ ಹೋರಾಟಗಳು ಜಾತಿ ಮತ್ತು ಧರ್ಮಗಳ ಗೋಡೆಗಳನ್ನು ಮೀರಿ ಎಲ್ಲಾ ದುಡಿಯುವ ಜನಗಳನ್ನು ಒಗ್ಗೂಡಿಸುತ್ತವೆ. ಭಾರತೀಯ ಸಂದರ್ಭದಲ್ಲಿ ಅವರನ್ನು ಸಾಮಾಜಿಕ ನ್ಯಾಯಕ್ಕಾಗಿ ಸರ್ವ ಸಾಮಾನ್ಯ ಹೋರಾಟಗಳಿಗೆ ಸೆಳೆಯುವ ಮೂಲಕ ಈ ಐಕ್ಯತೆಯನ್ನು ಭದ್ರಪಡಿಸಬೇಕಾಗಿದೆ. ಸಾಮಾಜಿಕ ನ್ಯಾಯವೆಂದರೆ ಅದರ ಗುರಿ ಜಾತಿ ಪದ್ಧತಿಯ ನಿರ್ಮೂಲನ ಎಂದಾಗ ಬೇಕಾದರೆ, ಜಾತಿ ದಮನಕ್ಕೆ ಒಳಗಾದವರಿಗೆ ಕೇವಲ ಹುದ್ದೆಗಳ ಮೀಸಲಾತಿಯಲ್ಲ, ಇದಕ್ಕಿಂತ ಬಹಳ ಹೆಚ್ಚಿನದು ಬೇಕಾಗುತ್ತದೆ. ಇಂತಹ ಮೀಸಲಾತಿಯು ಪರಿಶಿಷ್ಟ ಜಾತಿ, ವರ್ಗದ ಜನರಿಗೆ 40 ವರ್ಷಗಳಿಂದಲೂ ಹೆಚ್ಚು ಸಮಯದಿಂದ ಸಿಗುತ್ತಿದೆ. ಆದರೆ ಈ ಮೀಸಲಾತಿಯು ಅವರ ಸಾಮಾಜಿಕ ಪರಿಸ್ಥಿತಿಯನ್ನು ಭೌತಿಕವಾಗಿ ಸರಿಪಡಿಸಿಲ್ಲ. ನಿರ್ಣಾಯಕ ಹೊಡೆತ ಅವರ ವಂಚಿತ ಪರಿಸ್ಥಿತಿಯ ಮೇಲೆ, ಬಳಕೆಯ ಸಾಧನ ಮತ್ತು ಉತ್ಪಾದನೆಯ ಸಾಧನ ಎರಡರಿಂದಲೂ ವಂಚಿತರಾಗಿರುವ ಪರಿಸ್ಥಿತಿಯ ಮೇಲೆ ಬೀಳುವಂತಾಗಬೇಕು. ಆದ್ದರಿಂದಲೇ ಭೂಸುಧಾರಣೆಗಳು ಮತ್ತು ಭೂಮಿಯ ಮರು ಹಂಚಿಕೆ ವರ್ಗ ಮತ್ತು ಜಾತಿ ದಮನದ ವಿರುದ್ಧ ಹೋರಾಟವನ್ನು ಬೆಸೆಯುವ ಸಾಮಾಜಿಕ ನ್ಯಾಯದ ಹೋರಾಟದಲ್ಲಿ ಅತೀ ಮುಖ್ಯ ಸ್ಥಾನ ಪಡೆಯುತ್ತವೆ.

ಆದರೆ, ಇದರಲ್ಲಿ ಭಾಗವಹಿಸುವವರಲ್ಲಿ ಒಂದು ಹೊಸ ಪ್ರಜ್ಞೆಯನ್ನು ರೂಪಿಸಲು ಏಕಕಾಲದಲ್ಲಿ ಅವಿರತ ಪ್ರಯತ್ನ ಮಾಡದಿದ್ದಲ್ಲಿ ಈ ಸರ್ವಸಾಮಾನ್ಯ ಹೋರಾಟಗಳೂ ಗುರಿ ತಲುಪುವಲ್ಲಿ ವಿಫಲವಾಗಬಹುದು. ಇದೇ ಬಹುಶ: ಚಳುವಳಿಯ ಮುಖ್ಯ ದೌರ್ಬಲ್ಯವಾಗಿದೆ.

ಜಾತಿಗಳ ಭೌತಿಕ ತಳಹದಿಯು ಈಗ ಮಾಯವಾಗುತ್ತಿದೆಯಾದರೂ ಅದು ಸಾಮಾಜಿಕ ಹೊರರಚನೆಗೆ ಪಟ್ಟಾಗಿ ಅಂಟಿಕೊಂಡಿದೆ. ಅಲ್ಲಿ ಅದಕ್ಕೆ ಶೋಷಕ ವರ್ಗಗಳಿಂದ ಮತ್ತು ಅವುಗಳ ರಾಜಕೀಯ ನಿರ್ವಾಹಕರಿಂದ ಪೋಷಣೆ ಸಿಗುತ್ತಾ ಬಂದಿದೆ. ಸಾಮಾಜಿಕ ಸುಧಾರಣೆಗಾಗಿ ರಾಜಾರಾಮ್ ಮೋಹನ್‌ರಾಯ್ ಮೊದಲಾದವರಿಂದ ಪ್ರಾರಂಭವಾದ, ಫುಲೆ ಮತ್ತು ಅಂಬೇಡ್ಕರ್ ಜಾತಿ ಪದ್ಧತಿಯ ನಿರ್ಮೂಲನದ ಬಂಡಾಯದ ಅಂಶಗಳನ್ನು ನೀಡಿದ ಸಾಮಾಜಿಕ ಸುಧಾರಣೆಯ ಆಂದೋಲನವನ್ನು ದುಡಿಯುವ ವರ್ಗದ ಪಕ್ಷ ಮುಂದುವರಿಸಬೇಕು, ಈ ಮೂಲಕ ಜನತಾ ಪ್ರಜಾಪ್ರಭುತ್ವ ಕ್ರಾಂತಿಯ ಭಾಗವಾದ ಊಳಿಗಮಾನ್ಯ-ವಿರೋಧಿ ಕೆಲಸಗಳನ್ನು ಪೂರ್ಣಗೊಳಿಸಬೇಕು. ○



125ನೇ ಜನ್ಮ ದಿನಾಚರಣೆ: ಮೋದಿ ಸರಕಾರಕ್ಕೆ ಇನ್ನೊಂದು ಇವೆಂಟ್ ಅಷ್ಟೇ

ಏಪ್ರಿಲ್ 14ರಿಂದ 19ರ ವರೆಗೆ ವಿಜಯವಾಡಾದಲ್ಲಿ ನಡೆದ ಸಿಪಿಐ(ಎಂ) ನ 21ನೇ ಮಹಾಧಿವೇಶನ ಡಾ.ಬಿ.ಆರ್. ಅಂಬೇಡ್ಕರ್ ಅವರ 125ನೇ ಜನ್ಮದಿನಾಚರಣೆಯ ಸಂದರ್ಭದಲ್ಲಿ ಒಂದು ವಿಶೇಷ ಸಂಸತ್ ಅಧಿವೇಶನವನ್ನು ಕರೆದು ಭಾರತದಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳ ಪ್ರಸಕ್ತ ಸ್ಥಾನಮಾನಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಚರ್ಚಿಸಬೇಕು ಎಂದು ಕರೆ ನೀಡುವ ಒಂದು ಠರಾವನ್ನು ಅಂಗೀಕರಿಸಿತು.

ಇದನ್ನನುಸರಿಸಿ ಮೇ 6 ರ, 2015ರಂದು ಸಂಸದೀಯ ವ್ಯವಹಾರಗಳ ಮಂತ್ರಿ ವೆಂಕಯ್ಯ ನಾಯ್ಡು ಅವರಿಗೆ ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿಯವರು ಪತ್ರ ಸಲ್ಲಿಸಿದರು. ಇದರಲ್ಲಿ ದಲಿತ ಸಮುದಾಯಗಳು ಎದುರಿಸುತ್ತಿರುವ ಪ್ರಸಕ್ತ ಸಮಸ್ಯೆಗಳನ್ನು ಸರಕಾರಕ್ಕೆ ನೆನಪಿಸಲಾಯಿತು.

ಕಳೆದ ಎರಡು ದಶಕಗಳಲ್ಲಿ ದಲಿರ ಪರಿಸ್ಥಿತಿ ಹದಗೆಟ್ಟಿದೆ. ಅಸ್ಪೃಶ್ಯತೆಯ ಆಚರಣೆಗಳು ಮತ್ತು ಪರಿಶಿಷ್ಟ ಜಾತಿಗಳ ಜನರ ಮೇಲೆ ಹಿಂಸಾಚಾರಗಳು ವಿವಿಧ ಸ್ವರೂಪಗಳಲ್ಲಿ ಹೆಚ್ಚುತ್ತಲೇ ಇವೆ, ಆದರೆ ಇಂತಹ ಕೇಸುಗಳಲ್ಲಿ ಶಿಕ್ಷೆಗೊಳಪಡುವವರ ಪ್ರಮಾಣ ಈಗಲೂ ಕಡಿಮೆಯೇ ಇದೆ. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ಅತ್ಯಾಚಾರ ತಡೆ) ಕಾಯ್ದೆಯಂತಹ ಕಾನೂನುಗಳನ್ನು ಬಲಪಡಿಸುವ ಮತ್ತು ಪೂರ್ಣವಾಗಿ ಜಾರಿಗೊಳಿಸುವ ಅಗತ್ಯವಿದೆ.

ದೈಹಿಕ ಜಾಡಮಾಲಿ ಕಾಯ್ದೆಯನ್ನೂ ಇದುವರೆಗೆ ಜಾರಿ ಮಾಡಿಲ್ಲ. ಗ್ರಾಮೀಣ ಭಾರತದಲ್ಲಿ ಬುಪಾಲು ದಲಿತರು ಯಾವುದೇ ಆಸ್ತಿಯಿಲ್ಲದ ಭೂಹೀನ ಕಾರ್ಮಿಕರು. ಬಹಳಷ್ಟು ಮೀಸಲಾತಿ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಅಭಿವೃದ್ಧಿ ಂಸ್ಕೀಮುಗಳು ಜಾರಿಯಾಗುತ್ತಿಲ್ಲ. ದಿಲಿತ ಕ್ರೈಸ್ತರು ಮತ್ತು ಮುಸ್ಲಿಮರು ಪರಿಶಿಷ್ಟರೆಂದು ಗುರುತಿಸಲ್ಪಡುತ್ತಿಲ್ಲವಾದ್ದರಿಂದ ಸೌಲಭ್ಯಗಳಿಂದ ವಂಚಿರಾಗಿದ್ದಾರೆ.

ಈ ಎಲ್ಲ ಮತ್ತು ಇತರ ಪ್ರಶ್ನೆಗಳ ಬಗ್ಗೆ ಪ್ರತ್ಯೇಕ ಚರ್ಚೆಗಳು ಮತ್ತು ಪರಿಹಾರಗಳನ್ನು ರೂಪಿಸಬೇಕಾಗಿದೆ. ಒಂದು ವಿಶೇಷ ಅಧಿವೇಶನ ಹುಟ್ಟಿನ ಆಧಾರದಲ್ಲಿ ಅಸಮಾನತೆಯ ನಮ್ಮ ಸಮಾಜದ ಈ ಅತ್ಯಂತ ನಾಚಿಕೆಗೇಡಿ ಪಿಡುಗಿನ ಮೇಲೆ, ಈ ಪಿಡುಗನ್ನು ನಿವಾರಿಸಲು ಒಂದು ಸಮಗ್ರ ಮತ್ತು ಬಲಿಷ್ಟ ಕ್ರಮಗಳನ್ನು ಕೈಗೊಳ್ಳಬೇಕಾದ ತುರ್ತು ಅಗತ್ಯದ ಮೇಲೆ ಸಮಸ್ತ ದೇಶದ ಗಮನ ಕೇಂದ್ರೀಕರಿಸುವಂತೆ, ಮಾಡಬಲ್ಲದು ಎಂದು ಹೇಳಿದ್ದ ಈ ಪತ್ರ ಮೋದಿ ಸರಕಾರ ಇದನ್ನು ಗಂಭೀರವಾಗಿ ಪರಿಗಣಿಸುತ್ತದೆ, ನಮ್ಮ ಸಂವಿಧಾನದ ಪ್ರಮುಖ ಶಿಲ್ಪಿ ಎಂದು ಸಾರ್ವತ್ರಿಕವಾಗಿ ಮಾನ್ಯರಾಗಿರುವ ಡಾ.ಅಂಬೇಡ್ಕರ್ ಅವರ 125ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ಒಂದು ವಿಶೇಷ ಸಂಸತ್ ಅಧಿವೇಶನವನ್ನು ಏರ್ಪಡಿಸುತ್ತದೆ ಎಂದು ಆಶಿಸಿತ್ತು.

ಡಾ. ಅಂಬೇಡ್ಕರ್ ಬಗ್ಗೆ ಬಹಳಷ್ಟು ಮಾತಾಡುವ ಮೋದಿ ಸರಕಾರ ಈ ಬೇಡಿಕೆಗೆ ಸ್ಪಂದಿಸಲಿಲ್ಲ.

ನವಂಬರ್ ಮೊದಲ ವಾರದಲ್ಲಿ ಮಾಧ್ಯಮಗಳಲ್ಲಿ ಸರಕಾರ ಸಂಸತ್ತಿನ ಚಳಿಗಾಲದ ಅಧಿವೇಶನದಲ್ಲಿ ಡಾ.ಅಂಬೇಡ್ಕರ್ ಅವರ 125ನೇ ಜನ್ಮ ದಿನಾಚರಣೆಗೆ ನವಂಬರ್ 26 ಮತ್ತು 27ರಂದು ಎರಡು ದಿನಗಳ ವಿಶೇಷ ಕಲಾಪ ನಡೆಸಲು ನಿರ್ಧರಿಸಿರುವುದಾಗಿ ಸುದ್ದಿ ಪ್ರಕಟವಾಯಿತು.

ಇದಕ್ಕೆ ಪ್ರತಿಕ್ರಿಯಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಿಪಿಐ(ಎಂ) ಕೋರಿಕೆಯ ವಿಶೇಷ ಅಧಿವೇಶನ ಅಲ್ಲದಿದ್ದರೂ, ಈ ಎರಡು ದಿನಗಳನ್ನಾದರೂ ಸಾಮಾಜಿಕ ನ್ಯಾಯದ ಮೇಲೆ ಡಾ.ಅಂಬೇಡ್ಕರ್

ಅಸಮಾನತೆಯ ಬಂಡವಾಳಶಾಹಿ ವ್ಯವಸ್ಥೆಯೊಳಗೇ ಜಾತಿ ದಬ್ಬಾಳಿಕೆಯನ್ನು ಕೊನೆಗೊಳಿಸಬಹುದೇ?

ಮಾರ್ಕ್ಸ್‌ವಾದವು ವರ್ಗಹೋರಾಟಕ್ಕೆ ಪ್ರಾಶಸ್ತ್ಯ ನೀಡಿ ಜಾತಿ ದಬ್ಬಾಳಿಕೆಯ ಪ್ರಶ್ನೆಯನ್ನು ನಿರ್ಲಕ್ಷಿಸಿದೆ ಎಂಬ ದಲಿತ ಬುದ್ಧಿಜೀವಿಗಳ ಆರೋಪದ ಬಗ್ಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ

ಪ್ರೊ. ಪ್ರಭಾತ್ ಪಟ್ನಾಯಕ್

ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಸೃಜನಶೀಲತೆಯ ಮೇಲೆ ಹಿಂದುತ್ವವಾದಿಗಳು ಮಾಡುತ್ತಿರುವ ದಾಳಿಯ ಹಿನ್ನೆಲೆಯಲ್ಲಿ, ಜಾತಿ ದಬ್ಬಾಳಿಕೆ ಕುರಿತು ದೇಶದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಬಿರುಸಿನ ಚರ್ಚೆಗಳು ನಡೆಯುತ್ತಿವೆ. ಜಾತಿ ಪದ್ಧತಿ ಕುರಿತು ಹಾಗೂ ಮಾರ್ಕ್ಸ್‌ವಾದಿಗಳು ಜಾತಿ ದಬ್ಬಾಳಿಕೆಯ ಬಗ್ಗೆ ಹೊಂದಿರುವ ಅಭಿಪ್ರಾಯಗಳು ಮತ್ತು ಪ್ರಸ್ತಾಪಗಳನ್ನೊಳಗೊಂಡ ಒಂದು ಹೊಸ ರೀತಿಯ ಚರ್ಚೆ ಆರಂಭವಾಗಿದೆ.

ಮೂರು ನಿಲುವುಗಳು

ಭಾರತದ ಸಮಾಜ ವ್ಯವಸ್ಥೆಯ ವಿಶ್ಲೇಷಣೆ ಮಾಡುವಲ್ಲಿ ಮಾರ್ಕ್ಸ್‌ವಾದವು ‘ಜಾತಿ’ವಿಭಜನೆಗಿಂತ ‘ವರ್ಗ’ವಿಭಜನೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದೆ. ಹಾಗಾಗಿ, ಮಾರ್ಕ್ಸ್‌ವಾದವು ಜಾತಿಯ ಪಾತ್ರವನ್ನು ನಿರ್ಲಕ್ಷಿಸಿದೆ ಎಂಬ ದಲಿತ ಬುದ್ಧಿಜೀವಿಗಳ ಆರೋಪದ ಬಗ್ಗೆ ಬಹಳ ಕಾಲದಿಂದಲೂ ವಾಗ್ವಾದಗಳು ನಡೆಯುತ್ತಿವೆ. ಇಂತಹ ಚರ್ಚೆಗಳ ಸಂದರ್ಭದಲ್ಲಿ, ಈ ಸಮಸ್ಯೆಯ ಬಗ್ಗೆ ಬುದ್ಧಿಜೀವಿಗಳು ತಳೆದಿರುವ ಮೂರು ಸ್ಪಷ್ಟವಾದ ನಿಲುವುಗಳನ್ನು ಗಮನಿಸಬಹುದು.

ಮೊದಲನೆಯ ನಿಲುವಿನ ಪ್ರಕಾರ, ‘ಜಾತಿ’ ಮತ್ತು ‘ವರ್ಗ’ ದಬ್ಬಾಳಿಕೆಗಳು ಒಟ್ಟೊಟ್ಟಿಗೇ ಇರುತ್ತವೆ. ದಮನಕ್ಕೊಳಗಾದ ಜಾತಿಗಳು, ಸಾಮಾನ್ಯವಾಗಿ, ದಮನಕ್ಕೊಳಗಾದ ವರ್ಗಗಳ ಒಂದು ದೊಡ್ಡ ಭಾಗ. ಅದಕ್ಕಿಂತಲೂ ಹೆಚ್ಚಾಗಿ, ದಮನಿತ ವರ್ಗವನ್ನೇ ಇಡಿಯಾಗಿ ಆವರಿಸಿಕೊಂಡಷ್ಟು ದೊಡ್ಡ ಭಾಗ. ಹಾಗಾಗಿ, ಈ ನಿಲುವನ್ನು ಪ್ರತಿಪಾದಿಸುವ ಅನೇಕ ಮಂದಿ ಲೇಖಕರು ಶೋಷಣೆಯ ಪ್ರಕ್ರಿಯೆಯನ್ನು ವಿವರಿಸುವಾಗ ಜಾತಿ ಮತ್ತು ವರ್ಗ, ಈ ಎರಡೂ ಪದಗಳನ್ನು ಒಂದು ಕೂಡುಗೆರೆಯ ಮೂಲಕ ಸೇರಿಸಿ ‘ಜಾತಿ-ವರ್ಗ’ ಎಂಬ ಸಂಯುಕ್ತ ಪದ ಬಳಸುತ್ತಾರೆ.

ಎರಡನೆಯ ನಿಲುವಿನ ಪ್ರಕಾರ, ಜಾತಿ ಮತ್ತು ವರ್ಗಗಳ ನಡುವೆ ಭಿನ್ನತೆ ಇರುತ್ತದೆಯಾದರೂ, ಸಮಾಜ ಬದಲಾವಣೆಯ ಪ್ರಕ್ರಿಯೆಯಲ್ಲಿ ತೊಡಗಿರುವವರಿಗೆ ಜಾತಿ ಅಥವಾ ವರ್ಗ ಈ ಎರಡರಲ್ಲಿ ಒಂದು ಅತಿ ಮುಖ್ಯವಾದ ಅಂಶವಾಗಿ ತೋರುತ್ತದೆ. ಹಾಗಾಗಿ, ಕೆಲವರು ವರ್ಗದ ಆಧಾರದ ಮೇಲೆ ಹೋರಾಟ ಸಂಘಟಿಸಿದರೆ, ಮತ್ತೆ ಕೆಲವರು ಜಾತಿ ದಬ್ಬಾಳಿಕೆಯ ವಿರುದ್ಧ ಹೋರಾಟ ಸಂಘಟಿಸುತ್ತಾರೆ.

ಮೂರನೆಯ ನಿಲುವಿನ ಪ್ರಕಾರ, ಸಮಾಜದಲ್ಲಿರುವ ಅನೇಕಾನೇಕ ವೈರುಧ್ಯಗಳು ಒಟ್ಟೊಟ್ಟಿಗೇ ಪ್ರಕಟಗೊಳ್ಳುತ್ತವೆ. ಅವುಗಳಲ್ಲಿ ಯಾವುದೇ ಒಂದನ್ನು ಇನ್ನೊಂದಕ್ಕಿಂತ ಮುಖ್ಯವೆಂದು ಭಾವಿಸಲಾಗದು. ಅನೇಕ ವೈರುಧ್ಯಗಳ ಪೈಕಿ ಯಾವುದೋ ಒಂದು ವೈರುಧ್ಯ, ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ ಮುಖ್ಯ ಪಾತ್ರ ವಹಿಸಬಹುದು. ಆಗ, ಅಂತಹ ಅಂಶದತ್ತ ಪ್ರಗತಿಪರ ಶಕ್ತಿಗಳು ತಮ್ಮ ಗಮನವನ್ನು ಕೇಂದ್ರೀಕರಿಸಿ ಅದನ್ನು ಪರಿಹರಿಸಲು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕು. ಅವರು ಅಂತಹ ಕಾಯಕದಲ್ಲಿ ತೊಡಗಿರುವಾಗ, ಸಮಾಜ ರಚನೆಯನ್ನು ರೂಪಾಂತರ ಗೊಳಿಸುವ ಹೊಸದೊಂದು ಪರಿಕಲ್ಪನೆ ಹೊರಹೊಮ್ಮುವ ಸಾಧ್ಯತೆ ಅವರಿಗೆ ಗೋಚರವಾಗಬಹುದು.

ಈ ಕೊನೆಯ ವಾದಸರಣಿ, ಭಾರತದ ಸಂದರ್ಭದಲ್ಲಿ, ಏನನ್ನು ಅರ್ಥೈಸುತ್ತದೆ ಎಂದರೆ, ಜಾತಿ, ವರ್ಗ ಮತ್ತು ಲಿಂಗ ಸಮಸ್ಯೆಗಳು ಬೇರೆ ಬೇರೆ ಕಾಲ ಘಟ್ಟಗಳಲ್ಲಿ, ಕದನ ಕ್ಷೇತ್ರದ ಆದ್ಯತೆಯ ಅಂಶಗಳಾಗುತ್ತವೆ. ಯಾವ ಸಮಸ್ಯೆ ಮೊದಲು ತೀವ್ರ ರೂಪದಲ್ಲಿ ಪ್ರಕಟಗೊಳ್ಳುತ್ತದೊ ಆ ಸಮಸ್ಯೆ ಪ್ರಗತಿಪರ ಶಕ್ತಿಗಳ ಹೋರಾಟದ ವಸ್ತುವಾಗುತ್ತದೆ. ಆದ್ದರಿಂದ, ಜಾತಿ ವೈರುಧ್ಯಗಳನ್ನು ಕಡೆಗಣಿಸಿ ವರ್ಗ ವೈರುಧ್ಯಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಸಮಾಜದ ಸ್ಥಬ್ಧ ಚಿತ್ರ

ಈ ಮೂರೂ ಬೌದ್ಧಿಕ ನೆಲೆಗಳೂ ಮೂಲದಲ್ಲಿ ಸಮಾನವಾಗಿರುವ ಒಂದು ಅಂಶವನ್ನು ಹೊಂದಿವೆ. ಅವು(ಮೂರು ನೆಲೆಗಳು) ಸಮಾಜದ ಒಂದು ಸ್ಥಬ್ಧ ಚಿತ್ರವನ್ನು(ಕ್ಯಾಮೆರಾದಲ್ಲಿ ಚಿಟಿಕೆ ಹೊಡೆಯುವುದರಲ್ಲಿ ತೆಗೆದ ಒಂದು ಚಿತ್ರ-ಅನು.) ಆಧರಿಸಿ, ಯಾವ ವೈರುಧ್ಯ ಹೆಚ್ಚಿನ ಪ್ರಾಧಾನ್ಯತೆ ಪಡೆಯಬೇಕು ಎಂಬುದನ್ನು ನಿರ್ಧರಿಸುತ್ತವೆ. ಆದ್ದರಿಂದ, ಅಂತಹ ಪರಿಸ್ಥಿತಿಯನ್ನೇ ಪರಿಗಣಿಸಿ, ಮಾರ್ಕ್ಸ್‌ವಾದವು ‘ಜಾತಿ’ಗಿಂತ ‘ವರ್ಗ’ದ ಮೇಲೆ ಹೆಚ್ಚಿನ ಒತ್ತು ಕೊಟ್ಟಿರುವುದರಿಂದ ಜಾತಿ ದಬ್ಬಾಳಿಕೆಯನ್ನು ನಿರ್ಲಕ್ಷಿಸಿದೆ ಎಂಬುದಾಗಿ ಹೇಳುವ ಬುದ್ಧಿಜೀವಿಗಳ ಆರೋಪ ತಪ್ಪಾಗಿದೆ. ಏಕೆಂದರೆ, ಯಾವುದೇ ಒಂದು ನಿರ್ದಿಷ್ಟ ಕಾಲಘಟ್ಟದಲ್ಲಿ, ವರ್ಗ, ಜಾತಿ, ಲಿಂಗ ಮತ್ತು ಇತರ ಅಂಶಗಳು ಮೇಳವಿಸಿ ಒಂದು ಒಟ್ಟು ಪರಿಸ್ಥಿತಿ ನಿರ್ಮಾಣವಾಗುತ್ತದೆ. ಜಾತಿ-ವರ್ಗಗಳ ಮೇಳೈಕೆಯು ಕಾಲ ಕ್ರಮದಲ್ಲಿ ಬದಲಾಗುತ್ತದೆ. ಅದು ಯಾಕೆ ಬದಲಾಗುತ್ತದೆ ಮತ್ತು ಅದನ್ನು ಮುನ್ನುಗ್ಗಿಸುವ ಪ್ರೇರಕ ಶಕ್ತಿ ಯಾವುದು ಎನ್ನುವ ಪ್ರಶ್ನೆಗೆ ಮಾರ್ಕ್ಸ್‌ವಾದವು ಕೊಡುವ ಉತ್ತರವನ್ನು ಭೌತವಾದಿ ವಿಧಾನದಲ್ಲಿ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವ ಮೂಲಕ ಕಂಡುಕೊಳ್ಳಬಹುದು. ಈ ಹಿನ್ನೆಲೆಯಲ್ಲಿ, ಈ ಎಲ್ಲ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಜಾತಿ ಪ್ರಶ್ನೆಗೆ ಸಂಬಂಧಿಸಿದ ವಿದ್ಯಮಾನಗಳು ನಮ್ಮ ಕಾಲದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹೇಗೆ ನಿರೂಪಣೆಯಾಗಿವೆ ಎಂಬುದನ್ನು ಸಂಕ್ಷಿಪ್ತವಾಗಿ ವಿಚಾರ ಮಾಡಬಹುದು.

ಮಾರ್ಕ್ಸ್‌ನ ಅಧ್ಯಯನ ಮುಖ್ಯವಾಗಿ ಬಂಡವಾಳಶಾಹಿಯ ಮೇಲೇ ಕೇಂದ್ರೀಕೃತವಾಗಿತ್ತು. ಬಂಡವಾಳಶಾಹಿಯ ಸ್ವಯಂಸ್ಫೂರ್ತತೆಯ ಮೇಲೆ ಆತ ಒತ್ತು ನೀಡಿದ್ದರು. ಅದು ವ್ಯವಸ್ಥೆಯಲ್ಲೇ ಅಂತರ್ಗತವಾಗಿರುವ ಕೆಲವು ಪ್ರವೃತ್ತಿಗಳಿಗೆ ಅಧೀನವಾದ ಸ್ವಯಂಚಾಲಿತ ವ್ಯವಸ್ಥೆ. ಈ ಪ್ರವೃತ್ತಿಗಳು ಮನುಷ್ಯನ ಇಚ್ಛೆ ಮತ್ತು ಪ್ರಜ್ಞೆಯಿಂದ ಸ್ವತಂತ್ರವಾಗಿವೆ (ಉದಾ: 1930ರ ಮಹಾ ಕುಸಿತ ಯಾರೂ ಬಯಸಿ ಆದದ್ದಲ್ಲ, ಅಥವಾ, ಇಂದಿನ ಜಾಗತಿಕ ಬಂಡವಾಳಶಾಹಿ ಬಿಕ್ಕಟ್ಟನ್ನು ಪರಿಹರಿಸಲು ಮಾಡಿದ ಎಲ್ಲಾ ಪ್ರಜ್ಞಾಪೂರ್ವಕ ಪ್ರಯತ್ನಗಳ ಬಳಿಕವೂ ಅದು ಮುಂದುವರೆಯುತ್ತಿದೆ). ಬಂಡವಾಳಶಾಹಿಯ ಬೆಳವಣಿಗೆ ಆದಂತೆಲ್ಲಾ, ಜಾತಿ-ವರ್ಗಗಳ ಮೇಳವಿಕೆಯ ಗುಣ ಲಕ್ಷಣಗಳೂ ಬದಲಾಗುತ್ತಿರುತ್ತವೆ. ಬಂಡವಾಳಶಾಹಿಯ ಸ್ವಯಂಸ್ಫೂರ್ತತೆಯನ್ನು ಮೀರದ ಹೊರತು, ಅಂದರೆ, ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರದ ಹೊರತು ಮನುಷ್ಯನ ಸ್ವಾತಂತ್ರ್ಯ ಅಸಾಧ್ಯವಾಗುತ್ತದೆ. ಆ ರೀತಿಯ ಮೀರುವಿಕೆಯೇ ಹೇಗೆ ವರ್ಗ ಶೋಷಣೆಯನ್ನು ಕೊನೆಗೊಳಿಸಲು ನೆರವಾಗುವ ಒಂದು ಅಂಶವಾಗುತ್ತದೋ ಅದೇ ರೀತಿಯಲ್ಲಿ ಜಾತಿ ದಬ್ಬಾಳಿಕೆಯನ್ನು ಕೊನೆಗೊಳಿಸಲು ನೆರವಾಗುವ ಅಂಶವೂ ಆಗುತ್ತದೆ. ಅಂತಲ್ಲದೆ, ದಮನಕ್ಕೊಳಗಾದ ಜಾತಿಗೆ ಸೇರಿದ ಕೆಲವು ವ್ಯಕ್ತಿಗಳು, ಒಂದು ವೇಳೆ, ಬಂಡವಾಳಗಾರರಾಗಿ ಮಾರ್ಪಟ್ಟರೂ, ಉಳಿದವರು ಜಾತಿ ದಬ್ಬಾಳಿಕೆ ಮತ್ತು ವರ್ಗಶೋಷಣೆಗಳಿಂದ ನರಳುವುದು ತಪ್ಪುವುದಿಲ್ಲ.

ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರುವುದರ ಮಹತ್ವ

ಈ ಕಾಲದಲ್ಲೂ ಒಂದು ವಿದ್ಯಮಾನವಾಗಿಯೇ ಉಳಿದಿರುವ ಜಾತಿ ದಬ್ಬಾಳಿಕೆಯ ವಾಸ್ತವವನ್ನು ಈಗಿರುವ ವ್ಯವಸ್ಥೆಯೊಳಗೇ ಬದಲಿಸಿ, ಅದರ ಜಾಗದಲ್ಲಿ ಜಾತಿ ದಬ್ಬಾಳಿಕೆ ಸಂಪೂರ್ಣವಾಗಿ ಮಾಯವಾಗಿರುವ ಮತ್ತು ವರ್ಗಶೋಷಣೆ ಒಂದು ಮೂಲಸ್ವರೂಪದಲ್ಲೇ ಚಾಲ್ತಿಯಲ್ಲಿರುವ ಪರ್ಯಾಯ ವಾಸ್ತವವನ್ನು ತರುವುದು ದುಸ್ಸಾಧ್ಯ ಎನ್ನಬಹುದು. ಆದ್ದರಿಂದ, ಜಾತಿ ದಬ್ಬಾಳಿಕೆಯನ್ನು ಕೊನೆಗೊಳಿಸಲು ಹೋರಾಡುವವರಿಗೆ, ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರದ ಹೊರತು, ಜಯ ಲಭ್ಯವಾಗದು. ಅಂದರೆ, ಜಾತಿ ವಿನಾಶ ಮಾಡಲು ಬಂಡವಾಳಶಾಹಿ ವ್ಯವಸ್ಥೆಯನ್ನು ಮೀರಿ ಹೋಗಬೇಕಾಗುತ್ತದೆ. ಆದರೆ ಹಾಗೆ ಮೀರುವುದರಿಂದಲೇ ಜಾತಿ ದಬ್ಬಾಳಿಕೆ ಕೊನೆಗಾಣುವುದಿಲ್ಲವಾದರೂ, ಹಾಗೆ ಕೊನೆಗಾಣಲು ಈ ರೀತಿ ಬಂಡವಾಳಶಾಹಿಯನ್ನು ಕೊನೆಗಾಣಿಸುವುದು ಅಗತ್ಯವಾಗುತ್ತದೆ. ಇದು ಮಾರ್ಕ್ಸವಾದದ ಪ್ರಾಥಮಿಕ ನಿರ್ಣಯ.

ಜಾತಿ ಮತ್ತು ವರ್ಗಗಳಲ್ಲಿ ಯಾವುದಕ್ಕೆ ಆದ್ಯತೆ ಎಂಬ ಪ್ರಶ್ನೆಯನ್ನು ಈ ಕಣ್ಣೋಟದಿಂದ ನೋಡಬೇಕೇ ಹೊರತು ಸಮಾಜದ ಒಂದು ಸ್ಥಬ್ಧ ನೋಟದ ಆಧಾರದಲ್ಲಿ ಅದಕ್ಕೆ ಅರ್ಥವಿರುವುದಿಲ್ಲ. ಬಂಡವಾಳಶಾಹಿಯನ್ನು ಮೀರಿ ಹೋಗಬೇಕು ಎನ್ನುವುದಂತೂ ಒಂದು ಜಾತಿ ಬೇಡಿಕೆಯಾಗದು. ಬಂಡವಾಳಶಾಹಿಯನ್ನು ದಾಟಿ ಹೋಗಬೇಕಾಗಿದೆ ಎಂಬ ಅರಿವು, ಅದರ ಜಾಗದಲ್ಲಿ ಯಾವ ಪರ್ಯಾಯ ಬರಬೇಕು ಎಂಬ ಪರಿಕಲ್ಪನೆ, ಇವೆಲ್ಲ ಜಾತಿ ಎಂಬ ಪರಿಧಿಯ ಆಚೆಗೆ ಹೋಗುವ ಪ್ರಶ್ನೆಗಳು. ನಿಜವಾಗಿ ಹೇಳಬೇಕೆಂದರೆ, ಯಾರಾದರೂ ಜಾತಿವಿನಾಶದ ಗುರಿಯನ್ನು ಪ್ರಾಮಾಣಿಕತೆಯಿಂದ ಅನುಸರಿಸಿದರೆ ಕೊನೆಗೆ ಈ ಪ್ರಶ್ನೆಗಳ ಹತ್ತಿರವೇ ಬರಬೇಕಾಗುತ್ತದೆ. ಹಾಗೆ ಬರುವಾಗ ಆತ ಜಾತಿ ಕಣ್ಣೋಟವನ್ನೂ ದಾಟಿ ಬಂದಿರುತ್ತಾನೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಜಾತಿ ಕಣ್ಣೋಟದ ಒಳಗೇ ಉಳಿದುಕೊಂಡರೆ, ಜಾತಿ ದಮನವನ್ನು ಕೊನೆಗಾಣಿಸುವುದು ಎಂದೂ ಸಾಧ್ಯವಿಲ್ಲ.

ನಮ್ಮ ಸಮಾಜದಲ್ಲಿ ಎಷ್ಟೊಂದು ಆಳವಾಗಿ ಜಾತಿ ದಬ್ಬಾಳಿಕೆ ಬೇರು ಬಿಟ್ಟಿದೆಯೆಂದರೆ, ಬಂಡವಾಳಶಾಹಿ ವ್ಯವಸ್ಥೆಯೊಳಗಂತೂ ಅದನ್ನು ಅಳಿಸಿಹಾಕುವ ಮಾತಿರಲಿ, ಸ್ವಲ್ಪ ಮಟ್ಟಿಗೆ ಸಡಿಲಗೊಳಿಸಲೂ ಅವಿರತ ಹೋರಾಟ ನಡೆಸಬೇಕಾಗುತ್ತದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಕೊನೆಗೊಳಿಸಿದ ನಂತರವೂ ಜಾತಿ ದಬ್ಬಾಳಿಕೆ ಪೂರ್ಣವಾಗಿ ಅಳಿಯುವುದಿಲ್ಲ ಎಂಬ ಮಾತಿನ ಅರ್ಥ, ವರ್ಗ ಶೋಷಣೆಯನ್ನು ಪರಿಭಾವಿಸುವ ರೀತಿಯಲ್ಲಿ ಜಾತಿ ದಬ್ಬಾಳಿಕೆಯನ್ನು ನೋಡಲಾಗದು ಎಂಬುದು.

ಜಾತಿ ದಬ್ಬಾಳಿಕೆಯೂ ಸೇರಿದಂತೆ ಎಲ್ಲ ಪ್ರಕಾರದ ದಬ್ಬಾಳಿಕೆಗಳನ್ನು ಕೊನೆಗೊಳಿಸಲು ಬಂಡವಾಳಶಾಹಿ ವ್ಯವಸ್ಥೆಯನ್ನೇ ಕೊನೆಗೊಳಿಸಬೇಕಾಗುತ್ತದೆ. ಆದ್ದರಿಂದ, ಮಾರ್ಕ್ಸವಾದವು ವರ್ಗ ವೈರುಧ್ಯ ಮತ್ತು ವರ್ಗ ಹೋರಾಟಗಳಿಗೆ ಪ್ರಾಮುಖ್ಯತೆ ಕೊಡುತ್ತದೆ. ಬಂಡವಾಳಶಾಹಿ ವಿರುದ್ಧದ ಹೋರಾಟಕ್ಕೆ ಪ್ರಾಮುಖ್ಯತೆ ಕೊಡುವುದರ ಅರ್ಥ ಜಾತಿ ದಬ್ಬಾಳಿಕೆಯನ್ನು ಕಡೆಗಣಿಸಿದಂತೆಯೂ ಅಲ್ಲ ಅಥವಾ ಆ ಸಮಸ್ಯೆಗೆ ವರ್ಗದ ನಂತರದ ಸ್ಥಾನ ಕೊಟ್ಟಂತೆಯೂ ಅಲ್ಲ. ಏಕೆಂದರೆ, ಜಾತಿ ದಬ್ಬಾಳಿಕೆಯನ್ನು ಕಡೆಗಣಿಸಿದರೆ, ವರ್ಗ ಹೋರಾಟವನ್ನೇ ಶಿಥಿಲಗೊಳಿಸಿದಂತಾಗುತ್ತದೆ. ಮಾರ್ಕ್ಸವಾದದಲ್ಲಿ “ವರ್ಗ” ಪ್ರಾಮುಖ್ಯತೆ ಪಡೆಯುವುದರ ಅರ್ಥ, ವರ್ಗಶೋಷಣೆಯನ್ನು ಕೊನೆಗೊಳಿಸುವುದು ಮಾತ್ರವಲ್ಲ, ಜಾತಿ ದಬ್ಬಾಳಿಕೆಯೂ ಸೇರಿದಂತೆ ಎಲ್ಲ ರೀತಿಯ ದಬ್ಬಾಳಿಕೆಗಳ ವಿರುದ್ಧದ ಹೋರಾಟಗಳು ಬಂಡವಾಳಶಾಹಿಯನ್ನು ಕಿತ್ತೊಗೆಯುವ ಹೋರಾಟದಲ್ಲಿ ಐಕ್ಯವಾಗಿರುತ್ತವೆ ಎಂಬುದು.

ಭಾವಾನುವಾದ: ಕೆ.ಎಂ.ನಾಗರಾಜ್

ಸರಕಾರಕ್ಕೆ ಬೇಕಿರುವುದು ಅಂಬೇಡ್ಕರ್ ಕಣ್ಣೋಟವನ್ನು ಮುಂದೊಯ್ಯುವುದಲ್ಲ, ಅವರ ಅಪೂರ್ಣವಾಗಿರುವ ಅಜೆಂಡಾವನ್ನು ಪೂರ್ಣಗೊಳಿಸುವತ್ತ ಸಾಗುವುದಲ್ಲ

ಅವರ ಅಪೂರ್ಣವಾಗಿ ಉಳಿದಿರುವ ಅಜೆಂಡಾವನ್ನು ಮತ್ತು ಕಣ್ಣೋಟವನ್ನು ಮುಂದೊಯ್ಯಲು ಬಳಸಬೇಕು ಎಂದು ಕರೆ ನೀಡುತ್ತ, ನಮ್ಮ ಸಮಾಜದ ಈ ಅತ್ಯಂತ ನಾಚಿಕೆಗೇಡಿ ಪಿಡುಗಿನತ್ತ ಸಮಸ್ತ ದೇಶದ ಗಮನ ಕೇಂದ್ರೀಕರಿಸುವಂತೆ ಮಾಡಬೇಕು ಎಂದು ಮತ್ತೊಮ್ಮೆ ನೆನಪಿಸಿತು.

ಈ ಎರಡು ದಿನಗಳಲ್ಲಿ ನಿರ್ದಿಷ್ಟವಾಗಿ ಮೂರು ಕ್ರಮಗಳನ್ನು ಕೈಗೊಳ್ಳಲು ಸರಕಾರ ಸಿದ್ಧವಾಗಿ ಬರಬೇಕು ಎಂದು ಪೊಲಿಟ್‌ಬ್ಯುರೊ ಆಗ್ರಹಿಸಿತು. ಅವೆಂದರೆ,


1. ಈಗಿನ ಮೀಸಲಾತಿಯ ಸಂವಿಧಾನಿಕ ಅಂಶವನ್ನು ಖಾಸಗೀ ವಲಯಕ್ಕೂ ವಿಸ್ತರಿಸಲು ಒಂದು ಕಾನೂನು ತರುವುದು. 2. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳು (ಅತ್ಯಾಚಾರ ತಡೆ) ಮಸೂದೆ, 2015 ಲೋಕಸಭೆಯ ಅಂಗೀಕಾರದ ನಂತರ ರಾಜ್ಯಸಭೆಯಲ್ಲಿ ಅಂಗೀಕಾರವಾಗಬೇಕಿದೆ. ಅದನ್ನು ಶಾಸನವಾಗಿ ಮಾಡಬೇಕು. 3. ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಬುಡಕಟ್ಟುಗಳು ಉಪಯೋಜನೆಗೆ ಶಾಸನಬದ್ಧ ಸ್ಥಾನಮಾನ ಒದಗಿಸುವ ಕಾನೂನುಗಳನ್ನು ತರಬೇಕು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನಸಂಖ್ಯೆಯ ಆಧಾರದಲ್ಲಿ ಇವಕ್ಕೆ ಹಣಕಾಸು ಒದಗಿಸುವಂತೆ ಮಾಡಬೇಕು.

ಇದು ಡಾ.ಅಂಬೇಡ್ಕರ್ ಅವರ ಕಣ್ಣೋಟವನ್ನು ಮುಂದೊಯ್ಯಲು ಭಾರತೀಯ ಸಂಸತ್ತು ಮಾಡಬಹುದಾದ ಕನಿಷ್ಟ ಕೆಲಸ, ಮತ್ತು ಅವರ ಜನ್ಮ ದಿನಾಚರಣೆಯ ಅತ್ಯುತ್ತಮ ವಿಧಾನ ಎಂದು ಸಿಪಿಐ (ಎಂ) ಹೇಳಿತ್ತು.

ಆದರೆ ಮೋದಿ ಸರಕಾರಕ್ಕೆ ಬೇಕಿದ್ದದ್ದು ಅಂಬೇಡ್ಕರ್ ಕಣ್ಣೋಟವನ್ನು ಮುಂದೊಯ್ಯುವುದಲ್ಲ, ಅವರ ಅಪೂರ್ಣವಾಗಿರುವ ಅಜೆಂಡಾವನ್ನು ಪೂರ್ಣಗೊಳಿಸುವತ್ತ ಸಾಗುವುದಲ್ಲ, ಬದಲು ಇನ್ನೊಂದು ಇವೆಂಟ್ ಮ್ಯಾನೇಜ್‌ಮೆಂಟ್ ಅಷ್ಟೇ. ಇನ್ನು ಮುಂದೆ ನವಂಬರ್26ನನು ಸಂವಿಧಾನ ದಿನ ಎಂದು ಆಚರಿಸಲಾಗುವುದು ಎಂಬುದಷ್ಟೇ ಈ ಎರಡು ದಿನಗಳ ವಿಶೇಷ ಕಲಾಪದ ಫಲಶ್ರುತಿ,.

ನವಂಬರ್ 27, 2015ರಂದು ಈ ವಿಶೇಷ ಕಲಾಪದಲ್ಲಿ ಮಧ್ಯಪ್ರವೇಶಿಸಿ ಮಾತನಾಡುತ್ತ ಸೀತಾರಾಮ್ ಯೆಚೂರಿಯವರು ಮೋದಿ ಸರಕಾರದ ಈ ಗೋಸುಂಬೆತನವನ್ನು ಬಯಲಿಗೆಳೆದರು. “ಇದೊಂದು ಹೊಸ ಐಟಂ ಏನಿದು?...... ಅಂತೂ ಒಂದು ಪ್ರಸಂಗ(ಇವೆಂಟ್)ದ ನಂತರ ಇನ್ನೊಂದು ಪ್ರಸಂಗ, ..ಏನಿದು ಪ್ರಸಂಗದಿಂದ ಪ್ರಸಂಗದಿಂದ ಪ್ರಸಂಗಕ್ಕೆ? ನಾವೇನು ಆಚರಿಸುತ್ತಿದ್ದೇವೆ, ಸ್ವಾಮಿ? ..ಈಗ, ಏಕೆ ಈ ಸಂವಿಧಾನ ದಿನ? ಇದು ರಾಷ್ಟ್ರೀಯ ಆಂದೋಲನದಲ್ಲಿ ಯಾವ ಪಾತ್ರವೂ ಇಲ್ಲದವರು ಅದರೊಳಕ್ಕೆ ಉಪಾಯವಾಗಿ ಹುಳುವಿನಂತೆ ಹೊಸೆದುಕೊಳ್ಳಲು ಮಾಡುತ್ತಿರುವ ಪ್ರಯತ್ನ ಎಂಬ ತೀರ್ಮಾನಕ್ಕಷ್ಟೇ ನಾನು ಬರಲು ಸಾಧ್ಯ” ಎಂದು ತೀಕ್ಷ್ಣವಾಗಿ ವಿಶ್ಲೇಷಿಸಿದರು.

ನವಂಬರ್25, 1949ರಂದು ಡಾ.ಅಂಬೇಡ್ಕರ್ ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದ ಅಂಶಗಳನ್ನು ಎಳೆಎಳೆಯಾಗಿ ನೆನಪಿಸುತ್ತ ಕೊನೆಯದಾಗಿ “ಡಾ.ಅಂಬೇಡ್ಕರ್ ಅವರಿಗೆ ನಮ್ಮ ಶ್ರದ್ಧಾಂಜಲಿ ಅರ್ಪಿಸಬೇಕಾದರೆ ಅವರು ತಮ್ಮ ಭಾಷಣದಲ್ಲಿ ಅಂತಿಮವಾಗಿ ಹೇಳಿದ್ದನ್ನು ದಯವಿಟ್ಟು ನೆನಪಿಸಿಕೊಳ್ಳಿ. “ಸಮಾನತೆ ಇಲ್ಲದೆ ನೀವು ಸ್ವಾತಂತ್ರ್ಯ ಹೊಂದಲು ಸಾಧ್ಯವಿಲ್ಲ. ಸೋದರತ್ವ ಇಲ್ಲದೆ ನೀವು ಸಮಾನತೆ ಮತ್ತು ಸ್ವಾತಂತ್ರ್ಯವನ್ನು ಹೊಂದಲಾರಿರಿ. ಸಮಾನತೆ ಮತ್ತು ಸೋದರತ್ವ ಇಲ್ಲದೆ ನೀವು ಸ್ವಾತಂತ್ರ್ಯವನ್ನು ಹೊಂದಲಾರಿರಿ.” ನೀವು ಭಾರತದ ಸ್ವಾತಂತ್ರ್ಯವನ್ನು ಕೊಂಡಾಡುವುದಾದರೆ ಸಮಾನತೆ ಮತ್ತು ಸೋದರತ್ವ ಈ ಎರಡರ ವಿಷಯದಲ್ಲಿ ಯಾವುದೇ ರಾಜಿ ಸಾಧ್ಯವಿಲ್ಲ. ಆದರೆ ಅಸಹಿಷ್ಣುತೆಯ ವಾತಾವರಣಕ್ಕಾಗಿ ಅದೇ ಆಗಿದೆ.” ಎಂದರು.



ಹೈದ್ರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಪ್ರತಿಭಾವಂತ ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲಾ ಅನ್ಯಾಯದ ಸಾವು ಹಾಗೂ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯಕುಮಾರ್ ಮೇಲೆ 'ರಾಜದ್ರೋಹ'ದ ಬಂಧನದ ಬಳಿಕ ದೇಶದೆಲ್ಲೆಡೆ ಕೆಂಪು ಮತ್ತು ನೀಲಿಯ ಬಣ್ಣದ ಶ್ರಮಿಕರನ್ನು ಪ್ರತಿನಿಧಿಸುವ ಎರಡೂ ಚಳವಳಿಗಳು ಒಂದಾಗಿ ಈ ಮನುವಾದ ಹಾಗೂ ಬಂಡವಾಳವಾದದಿಂದ ಆಜಾದಿ ಪಡೆಯಲು ಒಂದಾಗುವುದು ಅನಿವಾರ್ಯ ಎಂಬ ಚರ್ಚೆಗಳು ನಡೆಯುತ್ತಿರುವ ಈ ಸನ್ನಿವೇಶದಲ್ಲೇ ಸುಮಾರು 89 ವರ್ಷಗಳ ಹಿಂದೆಯೇ ಕೆಂಪು ಮತ್ತು ನೀಲಿ ಎಂಬ ಎರಡೂ ಶೋಷಿತ ಮನಸ್ಸುಗಳೆರಡು ಒಂದುಗೂಡಿ ಅಮಾನವೀಯ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯ ಹಾಗೂ ಶೋಷಣಾ ವ್ಯವಸ್ಥೆಗಳ ವಿರುದ್ಧ ನಡೆಸಿದ ಮಹಾಡ್ ಸತ್ಯಾಗ್ರಹ'ದ ನೆನಪು ಮತ್ತು ಸ್ಪೂರ್ತಿಯೊಂದಿಗೆ ಹೊಸ ಸಮಾಜವನ್ನು ನಿರ್ಮಿಸುವತ್ತ ಹೆಜ್ಜೆ ಹಾಕಬೇಕಿದೆ.

ಮಹಾಡ್ ಸತ್ಯಾಗ್ರಹದ ನೆನಪು : ಅಸ್ಪೃಶ್ಯತೆಯ ಬೇರುಗಳನ್ನು ಸಡಿಲಿಸಿದ ಬಂಡಾಯ

• ಕೆ. ಮಹಾಂತೇಶ

ಅದು 1945 ನೇ ಇಸ್ವಿಯ ಒಂದು ಸಂಜೆ. ಮುಂಬೈನಲ್ಲಿ ಅಂಬೇಡ್ಕರ್ ಅವರು ಒಂದು ಬಹಿರಂಗ ಸಭೆಯಲ್ಲಿ ಭಾಷಣ ಮಾಡುವ ಕಾರ್ಯಕ್ರಮವನ್ನು ಅಯೋಜಿಸಲಾಗಿತ್ತು. ಆಗ ಡಾ.ಬಾಬಾ ಸಾಹೇಬ ಅವರು 'ವೈಸ್‌ರಾಯ್ ಎಕ್ಸಿಕ್ಯೂಟಿವ್ ಕೌನ್ಸಿಲ್' (ಅಂದರೆ ಈಗಿನ ಕೇಂದ್ರ ಸಂಪುಟದ ರೀತಿ) ಸದಸ್ಯರಾಗಿ ಬ್ರಿಟಿಷ್ ಸರಕಾರದಿಂದ ನೇಮಕವಾಗಿದ್ದರು. ವೇದಿಕೆ ಮುಂಭಾಗದಲ್ಲಿ ಅಂಬೇಡ್ಕರ ಅವರ ಮಾತುಗಳನ್ನು ಆಲಿಸಲು ದೊಡ್ಡ ಸಂಖ್ಯೆಯಲ್ಲಿ ಅಭಿಮಾನಿಗಳು, ಸಾರ್ವಜನಿಕರು ಸೇರಿದ್ದರು. ಆ ಜನರ ನಡುವೆ ದೂರದ ಮೂಲೆಯೊಂದರಲ್ಲಿ ನಿಂತಿದ್ದ ಒಬ್ಬ ವ್ಯಕ್ತಿ ಅಂಬೇಡ್ಕರ್ ಕಣ್ಣಿಗೆ ಬಿದ್ದರು. ಕೂಡಲೇ ಅವರ ಹೆಸರನ್ನು ಹಿಡಿದು ಕರೆದು ವೇದಿಕೆ ಮೇಲೆ ಬರುವಂತೆ ಸ್ವತಃ ಅಂಬೇಡ್ಕರ್ ಅವರನ್ನು ಕೇಳಿಕೊಂಡರು. ಆದರೆ ಅದಕ್ಕೊಪ್ಪದ ಆ ವ್ಯಕ್ತಿ ಮತ್ತಷ್ಟು ಜನರ ಮಧ್ಯ ಹಿಂದಕ್ಕೆ ಸರಿಯತೊಡಗಿದರು. ಇದನ್ನು ವೇದಿಕೆಯಿಂದಲೇ ಗಮನಿಸಿದ ಬಾಬಾ ಸಾಹೇಬರು ಅವರನ್ನು ದೈಹಿಕವಾಗಿಯಾದರೂ ಸರಿಯೇ ಎತ್ತಿಕೊಂಡು ತನ್ನ ಬಳಿ ಕರೆತರುವಂತೆ ತಮ್ಮ ಅನುಯಾಯಿಗಳಿಗೆ ಆದೇಶವನ್ನು ನೀಡಿಯೇ ಬಿಟ್ಟರು.! ಇಷ್ಟಾದ ಮೇಲೆ ಪಾಪ ಆ ವ್ಯಕ್ತಿಗೆ ವೇದಿಕೆ ಹತ್ತಿ ಅಂಬೇಡ್ಕರ್ ಬಳಿ ಬರದೇ ಬೇರೆ ಮಾರ್ಗವೇ ಇರಲಿಲ್ಲ. ಹೀಗೆ ವೇದಿಕೆ ಹತ್ತಿ ತಮ್ಮ ಬಳಿ ಬಂದ ಆ ವ್ಯಕ್ತಿಯನ್ನು ನೆರೆದ ಸಭೆಗೆ ಡಾ: ಅಂಬೇಡ್ಕರರು ಪರಿಚಯಿಸುತ್ತಾ **'ಇವರೊಬ್ಬ ಮಹಾನ್ ವ್ಯಕ್ತಿ. ನಾನು ರಾಜಕೀಯ ಜೀವನಕ್ಕೆ ಪಾದಾರ್ಪಣೆ ಮಾಡಲು ಪ್ರೇರೇಪಣೆ ನೀಡಿದ ಕೇಲವೇ ಕೆಲವು ಜನರಲ್ಲಿ ಇವರು ಒಬ್ಬರು'** ಎಂದು ಸಭೆಗೆ ತಿಳಿಸುತ್ತಾ ಅವರ ಬಗ್ಗೆ ಇನ್ನೂ ಕೆಲ ಗೌರವದ ಮಾತುಗಳನ್ನಾಡಿದರು.

ಹೀಗೆ ಡಾ: ಬಾಬಾ ಸಾಹೇಬ ಅಂಬೇಡ್ಕರ ಅವರಿಂದ ಆ ರೀತಿಯ ಗೌರವಕ್ಕೆ ಪಾತ್ರರಾದವರು ಮತ್ತು ಅವರ ಕೊನೆಗಾಲದವರೆಗೂ ಅವರ ಆತ್ಮೀಯ ಬಳಗದ ಸದಸ್ಯರಾಗಿ ಅವರೊಂದಿಗಿದ್ದವರು ಬೇರೆ ಯಾರು ಅಲ್ಲ ಅವರೇ ಮಹಾರಾಷ್ಟ್ರದ ಕಮ್ಯುನಿಸ್ಟ್ ಚಳವಳಿಯ ಹಿರಿಯ ನೇತಾರನಾಗಿದ್ದ ಕಾಮ್ರೇಡ್ ಆರ್.ಬಿ. ಮೋರೆ. ಮಹಾರಾಷ್ಟ್ರದಲ್ಲಿ ಅಂಬೇಡ್ಕರ ಅವರ ನೇತೃತ್ವದಲ್ಲಿ ನಡೆದ ಐತಿಹಾಸಿಕ 'ಮಹಾಡ್‌ನ ಚವ್ದಾರ್ ಕೆರೆ ನೀರು ಕುಡಿಯುವ ಸತ್ಯಾಗ್ರಹ' ಮತ್ತು ನಂತರದಲ್ಲಿ ನಡೆದ ಬಹಿರಂಗವಾಗಿ 'ಮನುಸ್ಮೃತಿ'ಯನ್ನು ಸುಡುವ ಎರಡೂ ಕಾರ್ಯಕ್ರಮಗಳನ್ನು ಸಂಘಟಿಸುವಲ್ಲಿ ಮೋರೆಯವರೇ ಪ್ರಮುಖ ಸೂತ್ರದಾರಿ. ಆಗಷ್ಟೇ ಭಾರತಕ್ಕೆ ಹಿಂತಿರುಗಿದ್ದ ಅಂಬೇಡ್ಕರ್ ಅವರನ್ನು 'ಮಹಾಡ್' ಎನ್ನುವ ನಗರಕ್ಕೆ ಕರೆದೊಯ್ದು ಅಲ್ಲಿ 'ಚವ್ದಾರ್ ಕೆರೆ ನೀರನ್ನು ಮುಟ್ಟುವ' ಚಳವಳಿಯನ್ನು ಸಂಘಟಿಸಿ ದೇಶಕ್ಕೆ ಪರಿಚಯಿಸಿದ್ದು ಕೂಡ ಇದೇ ಆರ್.ಬಿ. ಮೋರೆಯೇ ಎಂಬ ಸಂಗತಿಯನ್ನು ಖ್ಯಾತ ಲೇಖಕ ಆನಂದ ತೇಲ್‌ತುಂಬ್ಡೆ ಇತ್ತೀಚಿಗಷ್ಟೇ ಪ್ರಕಟಿಸಿರುವ 'MAHAD-The Making of the First Dalith Revolt ಎನ್ನುವ ಕೃತಿಯಲ್ಲಿ ಸ್ಮರಿಸಿಕೊಂಡಿದ್ದಾರೆ. ಬಹುಶಃ ಈ ಸಂಗತಿ ಮಹಾರಾಷ್ಟ್ರದಾಚೆಯ ದಲಿತ ಮತ್ತು ಕಮ್ಯುನಿಸ್ಟ್ ಚಳವಳಿಯಲ್ಲಿ ಸಕ್ರಿಯವಾಗಿರುವ ಬಹುಪಾಲು ಜನರಿಗೆ ತಿಳಿದಂತಿಲ್ಲ.

ಹೈದ್ರಾಬಾದ್‌ನ ಪ್ರತಿಭಾವಂತ ದಲಿತ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೇಮುಲಾ ಅನ್ಯಾಯದ ಸಾವು ಹಾಗೂ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯಕುಮಾರ್ ಅವರ 'ದೇಶದ್ರೋಹ'ದ ಬಂಧನದ ಬಳಿಕ ದೇಶದೆಲ್ಲಡೆ ಕೆಂಪು ಮತ್ತು ನೀಲಿಯ ಬಣ್ಣದ ಶ್ರಮಿಕರನ್ನು ಪ್ರತಿನಿಧಿಸುವ ಎರಡೂ ಚಳವಳಿಗಳು ಒಂದಾಗಿ ಈ ಮನುವಾದ ಹಾಗೂ ಬಂಡವಾಳವಾದದಿಂದ ಆಜಾದಿ ಪಡೆಯಲು ಒಂದಾಗುವುದು ಅನಿವಾರ್ಯ ಎಂಬ ಚರ್ಚೆಗಳು ನಡೆಯುತ್ತಿರುವ ಈ ಸನ್ನಿವೇಶದಲ್ಲೇ ಸುಮಾರು 89 ವರ್ಷಗಳ ಹಿಂದೆಯೇ ಕೆಂಪು ಮತ್ತು ನೀಲಿ ಎಂಬ ಎರಡೂ ಶೋಷಿತ ಮನಸ್ಸುಗಳೆರಡು ಒಂದುಗೂಡಿ ಅಮಾನವೀಯ ಅಸ್ಪೃಶ್ಯತೆ ಮತ್ತು ಜಾತಿ ತಾರತಮ್ಯ ಹಾಗೂ ಶೋಷಣಾ ವ್ಯವಸ್ಥೆಗಳ ವಿರುದ್ಧ ನಡೆಸಿದ 'ಮಹಾಡ್ ಸತ್ಯಾಗ್ರಹ'ದ ನೆನಪು ಮತ್ತು ಸ್ಪೂರ್ತಿಯೊಂದಿಗೆ ಒಂದು ಹೊಸ ಸಮಾಜವನ್ನು ನಿರ್ಮಿಸುವತ್ತ ಹೆಜ್ಜೆ ಹಾಕಬೇಕಿದೆ.

ಮಹಾಡ್ ಸತ್ಯಾಗ್ರಹದ ಮುನ್ನುಡಿ ಕಥನ...

ಅದು 1923 ಇಸ್ವಿ, ಮಹಾರಾಷ್ಟ್ರದ ಅಂದಿನ ಸಾಮಾಜಿಕ ಸುಧಾರಕ ಸಿ.ಕೆ. ಭೋಸ್ಲೇ ನಡೆಸಿದ ನಿರಂತರ ಹೋರಾಟದ ಪರಿಣಾಮ ಮುಂಬೈ ಶಾಸನ ಸಭೆಯು ಪ್ರಥಮ ಬಾರಿಗೆ ಎಲ್ಲಾ ದಲಿತರಿಗೂ ಬಾವಿ, ಧರ್ಮಶಾಲಾ ಮತ್ತಿತರೆ ಸಾರ್ವಜನಿಕ ಸ್ಥಳಗಳಲ್ಲಿ ಮುಕ್ತ ಪ್ರವೇಶಕ್ಕೆ ಅವಕಾಶ ಮಾಡಿಕೊಡುವ ಕುರಿತು ನಿರ್ಣಯ ಮಾಡಿತ್ತು. ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಮಹಾಡ್ ತಹಸೀಲ್ ವ್ಯಾಪ್ತಿಯ ದೇಸಗಾಂವ್‌ನ ಎನ್ನುವ ತನ್ನ ಸ್ವಂತ ಗ್ರಾಮದಲ್ಲಿ ಶಾಸನ ಸಭೆಯ ಈ ನಿರ್ಣಯವನ್ನು ಜಾರಿಗೊಳಿಸಲು ಆರ್.ಬಿ. ಮೋರೆ ಎನ್ನುವ ಯುವಕ ನಿರ್ಧರಿಸಿ ಸುತ್ತಮುತ್ತಲಿನ ಮಹಾರ್ ಜನಾಂಗದ ನೂರಾರು ಜನರೊಂದಿಗೆ ಸೇರಿ ತನ್ನೂರಿನ ಕ್ರಾಪೊರ್ಡ ಎನ್ನುವ ಸ್ಥಳದಲ್ಲಿದ್ದ ಸಾರ್ವಜನಿಕ ಕೆರೆಯ ನೀರನ್ನು ಸಾಮೂಹಿಕವಾಗಿ ಕುಡಿಯುವ ಮೂಲಕ ಹೋರಾಟ ನಡೆಸಿ ಯಶಸ್ವಿಯಾದ. ಈ ಚಳವಳಿಯು ಆ ಭಾಗದ ಹತ್ತಾರು ಹಳ್ಳಿಗಳ ದಲಿತರಲ್ಲಿ ಸ್ವಾಭಿಮಾನದ ಕಿಚ್ಚನ್ನು ಹೊತ್ತಿಸಿತು. ಇದ್ದುದ್ದರಲ್ಲೇ ಆರ್ಥಿಕವಾಗಿ ಉತ್ತಮ ಮನೆತನದಲ್ಲಿ ಹುಟ್ಟಿದ್ದರೂ ಆಸ್ಪೃಶ್ಯತೆ ಎಂಬ ಭೂತ ಮಾತ್ರ ಅವರ ಮನೆಯನ್ನು ಬಿಟ್ಟಿರಲಿಲ್ಲ. ಅವರ ಅಜ್ಜ ಸ್ವಂತದ್ದೊಂದು ಮನೆ ಕಟ್ಟಿಸಿದಾಗ ಅದನ್ನು ಸಹಿಸದ ಪುರೋಹಿತಶಾಹಿಗಳು ಕಾಡಿನಿಂದ ಮರಕದ್ದ ಆರೋಪ ಹೊರಿಸಿ ಮೋರೆ ತಂದೆಯನ್ನೇ ಜೈಲಿಗೆ ಕಳಿಸುವಲ್ಲಿ ಯಶಸ್ವಿಯಾಗುತ್ತಾರೆ. ಹುಟ್ಟೂರು ದೇಸಗಾಂವ್‌ನಲ್ಲೇ ಬ್ರಿಟಿಷ್ ಸೈನ್ಯದಲ್ಲಿ ಸೇವೆ ಸಲ್ಲಿಸುತ್ತಿದ್ದ ದಲಿತ ಕುಟುಂಬದ ಮಕ್ಕಳಿಗಾಗಿ ಬ್ರಿಟಿಷರು ಪ್ರತ್ಯೇಕ 'ದಲಿತ ಶಾಲೆ' ತೆರೆದಿದ್ದರು. ಆ ಶಾಲೆಯಲ್ಲಿ ಬ್ರಿಟಿಷ ಸರಕಾರ ಪ್ರತಿಭಾವಂತರಿಗೆ ನೀಡುತ್ತಿದ್ದ ವಿದ್ಯಾರ್ಥಿವೇತನ ಪುರಸ್ಕಾರ ಪಡೆದು ತನ್ನ ಪ್ರಾಥಮಿಕ ಶಿಕ್ಷಣ ಪೂರೈಸಿದ ಮೋರೆಗೆ ನಂತರ ದಲಿತನೆಂಬ ಕಾರಣದಿಂದಾಗಿಯೇ ಮಹಾಡ್ ಹೈಸ್ಕೂಲ್‌ನಲ್ಲಿ ಪ್ರವೇಶ ನಿರಾಕರಿಸಲಾಗುತ್ತದೆ. ಇದರಿಂದ ತೀರ ಅವಮಾನಿತನಾದ 11 ವರ್ಷದ ಬಾಲಕ

ಪುಟ 12 ಕ್ಕೆ

'ರೋಹಿತ್ ಕಾಯ್ದೆ' ತರಬೇಕೆಂಬ ಆಗ್ರಹ ಮತ್ತು ಥೋರಟ್ ಸಮಿತಿಯ ಶಿಫಾರಸುಗಳು





ಡಿಸೆಂಬರ್ 2012ರಲ್ಲಿ ದೇಶದ ರಾಜಧಾನಿಯಲ್ಲಿ ನಡೆದ ನಿರ್ಭಯ ಅತ್ಯಾಚಾರ ಪ್ರಕರಣದಿಂದ ಎದ್ದುಬಂದ ಆಕ್ರೋಶಕ್ಕೆ ತಲೆಬಾಗಿದ ಆಗಿನ ಕೇಂದ್ರ ಸರಕಾರ(ಯುಪಿಎ-2 ಸರಕಾರ) 'ನಿರ್ಭಯ ಕಾಯ್ದೆ' ತಂದಿತು. ಇಂದು ಪ್ರತಿಭಾವಂತ ದಲಿತ ವಿದ್ಯಾರ್ಥಿ ರೋಹಿತ್‌ನ ದಾರುಣ ಅಂತ್ಯದಿಂದ ತಲ್ಲಣಗೊಂಡಿರುವ ವಿದ್ಯಾರ್ಥಿಗಳು ಮತ್ತು ದೇಶದ ಪ್ರಜಾಪ್ರಭುತ್ವ ತಳಪಾಯದ ಬಗ್ಗೆ ಆತಂಕಿತರಾಗಿರುವ ಎಲ್ಲರೂ 'ರೋಹಿತ್ ಕಾಯ್ದೆ'ಗೆ ಒತ್ತಾಯಿಸುತ್ತಿದ್ದಾರೆ. ಪ್ರತಿತಿಂಗಳು ಮನದ ಮಾತು ಹೇಳುವ ಪ್ರಧಾನಿಗಳು ದೇಶದ ವಿದ್ಯಾರ್ಥಿಗಳ ಮನದಾಳದ ಈ ಮಾತನ್ನು ಕೇಳುತ್ತಾರೆಯೇ?

ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲಾ ಅವರ ಸಾಂಸ್ಥಿಕ ಕೊಲೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ, ಬುಡಕಟ್ಟು ಮತ್ತು ಇತರ ಸಮಾಜದ ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಿಂದ ಬರುವ ವಿದ್ಯಾರ್ಥಿಗಳ ಸಂಕಟಗಳತ್ತ ಮತ್ತೊಮ್ಮೆ ಗಮನ ಸೆಳೆದಿದೆ. ಈ ಹಿನ್ನೆಲೆಯಲ್ಲಿ ಭುಗಿಲೆದ್ದಿರುವ ವಿದ್ಯಾರ್ಥಿಗಳ ಸಾಮಾಜಿಕ ನ್ಯಾಯದ ಚಳುವಳಿ ಇಂತಹ ದಾರುಣ ಘಟನೆಗಳು ನಮ್ಮ ಗಣತಂತ್ರದಲ್ಲಿ ಮತ್ತೆ-ಮತ್ತೆ ನಡೆಯದಂತೆ ತಡೆಯಲು 'ರೋಹಿತ್ ಕಾನೂನು' ತರಬೇಕು ಎಂಬ ಪ್ರಮುಖ ಬೇಡಿಕೆಯನ್ನು ದೇಶದ ಆಳರಸರ ಮುಂದಿಟ್ಟಿದೆ.

ಡಾ.ಅಂಬೇಡ್ಕರ್ ಆತಂಕಪಟ್ಟಂತೆ, ನಮ್ಮ ರಾಜಕೀಯ ಪ್ರಜಾಪ್ರಭುತ್ವವನ್ನು ಸಾಮಾಜಿಕ ಪ್ರಜಾಪ್ರಭುತ್ವವಾಗಿ ಮಾಡುವಲ್ಲಿ ವಿಫಲರಾಗಿರುವುದರಿಂದಾಗಿ ಹುಟ್ಟಿಕೊಂಡಿರುವ ಈ ಸಮಸ್ಯೆ ಈ ಮೊದಲೇ ಹಲವರನ್ನು ಬಲಿ ತೆಗೆದುಕೊಂಡಿದೆ. ತೊಂಭತ್ತರ ದಶಕದಲ್ಲಿ ಆರಂಭವಾದ ಮೀಸಲಾತಿ-ವಿರೋಧಿ ಚಳುವಳಿಯ ಹಿನ್ನೆಲೆಯಲ್ಲಿ ಇದು ತೀವ್ರಗೊಂಡಿತು. ದೇಶದ ಒಂದು ಪ್ರಮುಖ ಉನ್ನತ ಶಿಕ್ಷಣ ಸಂಸ್ಥೆಯಾದ ನವದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ(ಎಐಐಎಂಎಸ್ ಅಥವ ಏಮ್ಸ್)) ಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಬುಡಕಟ್ಟು(ಎಸ್/ ಎಸ್‌ಟಿ) ವಿದ್ಯಾರ್ಥಿಗಳಿಗೆ ಕಿರುಕುಳ ನೀಡಲಾಗುತ್ತಿದೆ, ನಿಂದಿಸಲಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ಬಹಳಷ್ಟು ವರದಿಗಳು ಪ್ರಕಟವಾದವು. ಇದರಿಂದ ಕೊನೆಗೂ ಎಚ್ಚೆತ್ತುಕೊಂಡಂತೆ ಕಂಡ ಕೇಂದ್ರ ಸರಕಾರ ಇದಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳ ತನಿಖೆಗೆಂದು ಸಪ್ಟಂಬರ್ 2006ರಲ್ಲಿ ಆಗ ವಿಶ್ವವಿದ್ಯಾಲಯ ಅನುದಾನ ಆಯೋಗ(ಯುಜಿಸಿ)ದ ಅಧ್ಯಕ್ಷರಾಗಿದ್ದ ಪ್ರೊಫೆಸರ್ ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ಒಂದು ತನಿಖಾ ಸಮಿತಿಯನ್ನು ನೇಮಿಸಿತ್ತು. ಡಾ. ಕೆ.ಎಂ. ಶ್ಯಾಮಪ್ರಸಾದ್ ಮತ್ತು ಡಾ. ಆರ್.ಕೆ. ಶ್ರೀವಾಸ್ತವ ಸಮಿತಿಯ ಸದಸ್ಯರಾಗಿದ್ದರು.

ಈ ವರದಿಗಳಲ್ಲಿ ಬಹಳಷ್ಟು ಸತ್ಯಾಂಶಗಳು ಇರುವುದು ಈ ಸಮಿತಿಯ ಗಮನಕ್ಕೆ ಬಂತು. ಅದು ಮೇ2007ರಲ್ಲಿ ತನ್ನ ವರದಿಯನ್ನು ಮತ್ತು ಶಿಫಾರಸುಗಳನ್ನು ಸಲ್ಲಿಸಿತು. ಆದರೆ ಏಮ್ಸ್‌ನ ಆಡಳಿತ ಈ ವರದಿಯನ್ನು ತಿರಸ್ಕರಿಸಿತು. ಕಿರುಕುಳಗಳು ಮುಂದುವರೆದು ಎಂತಹ ಹಂತ ತಲುಪಿದವೆಂದರೆ 2010ರಲ್ಲಿ ಇದೇ ಸಂಸ್ಥೆಯ ಅಂತಿಮ ಎಂಬಿಬಿಎಸ್ ವಿದ್ಯಾರ್ಥಿ ಬಾಲಮುಕುಂದ ಭಾರತಿ ಆತ್ಮಹತ್ಯೆ ಮಾಡಿಕೊಂಡ. ಈ ನಡುವೆ ದೇಶದ ಇತರ ಹಲವು ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ವಿದ್ಯಾರ್ಥಿಗಳ ಆತ್ಮಹತ್ಯೆಯ ವರದಿಗಳು ಬಂದವು. ಬಾಲಮುಕುಂದನ ಆತ್ಮಹತ್ಯೆಯ ಕುರಿತು 'ಡೆತ್ ಆಫ್ ಮೆರಿಟ್' (ಪ್ರತಿಭೆಯ ಸಾವು) ಎಂಬ ಡಾಕ್ಯುಮೆಂಟರಿಯನ್ನು ತಯಾರಿಸಿದ ಇನ್‌ಸಯಟ್ ಫಂಡೇಶನ್ ಎಂಬ ಸಂಸ್ಥೆ ಇಂತಹ 18 ಪ್ರಕರಣಗಳ ಮಾಹಿತಿಗಳನ್ನು ಸಂಗ್ರಹಿಸಿದೆ.

ಹಲವೆಡೆಗಳಿಂದ ಬಂದ ಒತ್ತಡಗಳಿಂದಾಗಿ ಯುಪಿಎ-2 ಸರಕಾರ 2011ರಲ್ಲಿ ಇದನ್ನು ಸಂಸತ್ತಿನಲ್ಲಿ ಮಂಡಿಸಿತು. ಅದಾಗಿ ಈಗ ಐದು ವರ್ಷಗಳಾಗಿವೆ. ಮುಂದೇನೂ ಆಗಿಲ್ಲ. ಕನಿಷ್ಟ ಸರಕಾರ, ಗರಿಷ್ಟ ಆಳ್ವಿಕೆ'ಯ ಭರವಸೆಗೆ ಎರಡು ವರ್ಷಗಳಾಗುತ್ತ ಬರುತ್ತಿದ್ದರೂ ಹೈದರಾಬಾದಿನ ಎಂಪಿ/ಕೇಂದ್ರ ಮಂತ್ರಿಯ ಪತ್ರದ ಮೇಲೆ ಕ್ರಮ ಕೈಗೊಳ್ಳಲು ಮೂರು ತಿಂಗಳಲ್ಲೇ ಐದು ಬಾರಿ ನೆನಪಿಸಿ ರೋಹಿತ್‌ನ ಕೊಲೆಗೆ ಹಾದಿ ಮಾಡಿಕೊಟ್ಟ 'ಗರಿಷ್ಟ ಆಳ್ವಿಕೆ' ಈ ಶಿಫಾರಸುಗಳ ಮಟ್ಟಿಗೆ 'ಕನಿಷ್ಟ ಸರಕಾರ' ಮಾತ್ರವೇ ಆಗಿ ಉಳಿದಿದೆ.


ಈಗ ಮೋದಿ ಸರಕಾರದ ಸಕಲ ಪ್ರಯತ್ನಗಳ ಹೊರತಾಗಿಯೂ 'ರೋಹಿತ್ ವೆಮುಲಾಗೆ ನ್ಯಾಯ'ದ ಚಳುವಳಿ ಬಲಗೊಳ್ಳುತ್ತಿರುವ ಸಂದರ್ಭದಲ್ಲಿ ಥೋರಟ್ ಸಮಿತಿ ಕಂಡುಕೊಂಡ ಸಂಗತಿಗಳು ಮತ್ತು ನೀಡಿರುವ ಶಿಫಾರಸುಗಳು ಇನ್ನಷ್ಟು ಪ್ರಸ್ತುತವಾಗಿವೆ.

ಥೋರಟ್ ಸಮಿತಿ ಕಂಡುಕೊಂಡ ಸಂಗತಿಗಳು

ಸರಕಾರದಿಂದ ಶೇಕಡಾ ನೂರರಷ್ಟು ಅನುದಾನ ಪಡೆಯುವ ಶೈಕ್ಷಣಿಕ ಸಂಸ್ಥೆಗಳು ಎಸ್‌ಸಿ/ ಎಸ್‌ಟಿ ವಿದ್ಯಾರ್ಥಿಗಳಿಗೆ ಭಾಷಾಕೌಶಲಗಳನ್ನು ಉತ್ತಮಪಡಿಸಲು ಮತ್ತು ಇತರ ಬೇಸಿಕ್ ಕೋರ್ಸ್‌ಗಳಲ್ಲಿ ಕುಂದು-ಕೊರತೆಗಳು ಏನಾದರೂ ಇದ್ದಲ್ಲಿ ಅವನ್ನು ನಿವಾರಿಸಿ ನಿಯಮಿತ ಕೋರ್ಸ್‌ಗಳನ್ನು ಅನುಸರಿಸಲು ಸಾಧ್ಯವಾಗುವಂತೆ ಸರಿಪಡಿಕೆ ತರಗತಿ (ರೆಮಿಡಿಯಲ್ ಕೋಚಿಂಗ್)ಗಳನ್ನು ನಡೆಸಬೇಕಾಗಿದೆ. ಏಮ್ಸ್ ಈ ಬಗ್ಗೆ ಮುತುವರ್ಜಿ ವಹಿಸಿಲ್ಲ ಎಂದು ಕಂಡು ಬಂದಿರುವುದರಿಂದ ಅಧಿಕಾರ ಮಂಡಳಿ ಈ ಕಾರ್ಯಕ್ರಮಗಳನ್ನು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ನಿಕಟ ಸಮಾಲೋಚನೆಯೊಂದಿಗೆ ನಡೆಸಲು ಒಂದು ಸಮಿತಿಯನ್ನು ನೇಮಿಸಬೇಕು ಎಂದು ಕೂಡ ಸಮಿತಿ ಶಿಫಾರಸು ಮಾಡಿದೆ.

ಮೂರನೇ ಎರಡರಷ್ಟು ಎಸ್‌ಸಿ/ ಎಸ್‌ಟಿ ವಿದ್ಯಾರ್ಥಿಗಳು ತಮಗೆ ಶಿಕ್ಷಕರಿಂದ ಇತರ ವಿದ್ಯಾರ್ಥಿಗಳಿಗೆ ಸಿಗುವಷ್ಟು ಬೆಂಬಲ ಸಿಗುತ್ತಿಲ್ಲ ಎಂದು ವರದಿ ಮಾಡಿರುವುದನ್ನು ಸಮಿತಿ ವೀಕ್ಷಿಸಿದೆ. ಶಿಕ್ಷಕರು ತಮ್ಮಿಂದ ದೂರವಿರುವುದಕ್ಕೂ ಮತ್ತು ಉಪೇಕ್ಷೆ ತೋರುವುದಕ್ಕೂ ಅವರ ಜಾತಿ ಹಿನ್ನೆಲೆಗೂ ಸಂಬಂಧವಿದೆ ಎಂದು ಎಸ್‌ಸಿ/ ಎಸ್‌ಟಿ ವಿದ್ಯಾರ್ಥಿಗಳು ಭಾವಿಸುತ್ತಾರೆ. ಇದ-

ಬ್ಯಾರಿಸ್ಟರ್ ಆದ ಮೇಲೂ......



"ಅಸ್ಪೃಶ್ಯರನ್ನು ಮೇಲ್ಜಾತಿಯ ಹಿಂದೂಗಳೂ, ಅವರನ್ನು ಅನುಸರಿಸಿ ಭಾರತದ ಮುಸಲ್ಮಾನರೂ ಹಾಗೂ ಕ್ರಿಶ್ಚಿಯನ್ ಮತಕ್ಕೆ ಸೇರಿದ ಸಾಮಾನ್ಯ ಜನ ನಿತ್ಯ ಜೀವನದಲ್ಲಿ ಹೇಗೆ ನಡೆಸಿಕೊಳ್ಳುತ್ತಾರೆ ಎಂಬ ವಾಸ್ತವವನ್ನು ಸೋದಾಹರಣವಾಗಿ ನಿರೂಪಿಸಲು ಅಂಬೇಡ್ಕರ್, ತಾವು ಸ್ವಂತಕ್ಕೆ ಅನುಭವಿಸಿದ ಘಟನೆಗಳನ್ನು ಆಧರಿಸಿದ ಆರು ಬರಹಗಳನ್ನು ಪ್ರಕಟಿಸಿದರು. ಈ ಬರಹಗಳ ಗುಚ್ಛವು 'ವೇಟಿಂಗ್ ಫಾರ್ ವೀಸಾ' ಎಂಬ ಶಿರೋನಾಮೆಯಡಿ ಪ್ರಕಟವಾಗಿವೆ. ಯಾವುದೇ ವ್ಯಕ್ತಿ ತಾನು ಪ್ರಜೆಯಲ್ಲದ ಅನ್ಯ ರಾಷ್ಟ್ರವನ್ನು ಅಧಿಕೃತವಾಗಿ ಪ್ರವೇಶಿಸಿ, ವ್ಯವಹರಿಸಲು ಆಯಾ ದೇಶಗಳ ಪ್ರಭುತ್ವ ಕಾನೂನು ಬದ್ಧವಾಗಿ 'ಕರುಣಿಸುವ' 'ವೀಸಾ' ವನ್ನು ಪಡೆಯುವುದು ಅನಿವಾರ್ಯ. ಅಸ್ಪೃಶ್ಯರು ಮಾನವಂತವಾಗಿ ಸಾರ್ವಜನಿಕ ವಲಯವನ್ನು ಪ್ರವೇಶಿಸಿ, ವ್ಯವಹರಿಸಲು ದುಸ್ಸಾಧ್ಯವಾದ ಭಾರತದ ಜಾತಿ ಸಮಾಜದ ವೈಪರೀತ್ಯವನ್ನು ತೋರಿಸುವ ಸಲುವಾಗಿಯೇ, ಅಂಬೇಡ್ಕರ್ **'ವೀಸಾಕ್ಕಾಗಿ ಕಾಯುವ ಜನ'** ಎಂಬ ವ್ಯಂಗ್ಯದ ರೂಪಕವನ್ನು ಚಾಟಿಯಂತೆ ಬಳಸಿದ್ದಾರೆ." ಎನ್ನುವ ಪ್ರೊ. ಫಣಿರಾಜ ಅವರ ಮಾತು ಈ ಬರಹದ ಮಹತ್ವವನ್ನು ತಿಳಿಸುತ್ತದೆ. ಶಾಲಾ ವಿದ್ಯಾರ್ಥಿಯಾಗಿದ್ದಾಗ ತನ್ನ ಸಮುದಾಯದ ವಿದ್ಯಾರ್ಥಿಗಳೊಂದಿಗೆ ತರಗತಿಯ ಹೊರಗೆ ಕೂರುವ, ನಲ್ಲಿ ಮುಟ್ಟಲು ನಿಷೇಧವಿದ್ದುದರಿಂದ ಎಷ್ಟೇ ನೀರಡಿಕೆಯಾದರೂ, ಹಿಂದೂ ಜವಾನ ನಲ್ಲಿ ತಿರುಗಿಸುವ ವರೆಗೆ ಕಾಯಬೇಕಾದ, ಆತ ಗೈರು ಹಾಜರಾಗಿದ್ದರೆ, ಮನೆಗೆ ಬಂದೇ ನೀರು ಕುಡಿಯಬೇಕಾಗಿದ್ದ ಸಂದರ್ಭಗಳು ಸರ್ವೇಸಾಮಾನ್ಯವಾಗಿದ್ದವು. ಐದು ವರ್ಷ ವಿದೇಶದಲ್ಲಿ ಉಚ್ಚ ಶಿಕ್ಷಣ ಪಡೆದು ಬ್ಯಾರಿಸ್ಟರ್ ಆಗಿ ಬಂದ ಮೇಲೂ ಅಸ್ಪೃಶ್ಯತೆಯಿಂದ ಮುಕ್ತಿ ಸಿಗಲಿಲ್ಲ. ಅವರೇ ಸ್ವತಃ ಹೇಳಿದ್ದ ಅಂತಹ ಒಂದು ಘಟನೆ ಇಲ್ಲಿದೆ. ಇದನ್ನು ಚಿಂತನ ರಂಗ ಅಧ್ಯಯನ ಕೇಂದ್ರ, ಉತ್ತರ ಕನ್ನಡ ಪ್ರಕಟಿಸಿರುವ 'ವೀಸಾಕ್ಕಾಗಿ ಕಾಯುವ ಜನ'ದಿಂದ ಆರಿಸಿಕೊಂಡಿದ್ದೇವೆ.

1929, ಮುಂಬಯಿ ಸರ್ಕಾರ ಅಸ್ಪೃಶ್ಯರ ಕಷ್ಟಕೋಟಲೆಗಳ ಕುರಿತು ತನಿಖೆ ನಡೆಸಲು ಒಂದು ಸಮಿತಿಯನ್ನು ನೇಮಿಸಿತ್ತು. ನಾನು ಆ ಸಮಿತಿಯ ಸದಸ್ಯನಾಗಿದ್ದೆ. ಮುಂಬಯಿ ಪ್ರಾಂತದ ಉದ್ದಗಲಕ್ಕೂ ಪಯಣಿಸಿ ಅಸ್ಪೃಶ್ಯರಿಗೆ ಆಗಿದ್ದವೆನ್ನಲಾದ ಅನ್ಯಾಯಗಳು, ಅವರ ಮೇಲೆ ನಡೆದ ದೌರ್ಜನ್ಯ ದಬ್ಬಾಳಿಕೆಗಳು ಇತ್ಯಾದಿಗಳನ್ನು ತನಿಖಿಸುವುದು ಆ ಸಮಿತಿಯ ಕಾರ್ಯಭಾರವಾಗಿತ್ತು. ಆ ಸಮಿತಿಯನ್ನು ಒಡೆದು ಪ್ರತಿಯೊಬ್ಬ ಸದಸ್ಯರಿಗೂ ಬೇರೆ ಬೇರೆ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡು ಮಾಹಿತಿ ಸಂಗ್ರಹಿಸುವ ಜವಾಬ್ದಾರಿ ವಹಿಸಿಕೊಡಲಾಯಿತು. ನಾನು ಇನ್ನೊಬ್ಬ ಸದಸ್ಯರೊಡಗೂಡಿ ಖಾಂದೇಶದ ಎರಡು ಜಿಲ್ಲೆಗಳಲ್ಲಿ ಓಡಾಡಿ ತನಿಖೆ ನಡೆಸುವ, ಮಾಹಿತಿ ಸಂಗ್ರಹಿಸುವ ಹೊಣೆ ಹೊತ್ತುಕೊಂಡೆ. ನಮ್ಮ ಅಧಿಕೃತ ಕೆಲಸವನ್ನು ಮುಗಿಸಿದ ನಂತರ ಅಲ್ಲಿಯವರೆಗೂ ನನ್ನ ಜೊತೆಗಿದ್ದ ಸಹೋದ್ಯೋಗಿ ತಾವು ಒಬ್ಬ ಹಿಂದೂ ಸಂತನನ್ನು ಕಾಣಲು ಹೋಗುವುದಾಗಿ ಹೇಳಿ ನನ್ನನ್ನು ಬೀಳ್ಕೊಟ್ಟರು. ನಾನು ಟ್ರೇನ್ ಹಿಡಿದು ಮುಂಬಯಿಗೆ ಹೊರಟೆ. ದಾರಿಯಲ್ಲಿ ಚಾಳಿಸ್‌ಗಾಂವ್‌ನಲ್ಲಿ ಇಳಿದೆ. ಯಾಕೆಂದರೆ, ಧುಳಿಯಾ ಮಾರ್ಗದಲ್ಲಿದ್ದ, ಒಂದು ಊರಿನಲ್ಲಿ ಅಲ್ಲಿಯ ಹಿಂದೂಗಳು ಅಸ್ಪೃಶ್ಯರ ವಿರುದ್ಧ ಬಹಿಷ್ಕಾರ ಘೋಷಿಸಿದ್ದರು. ಸವರ್ಣೀಯರಿಂದ ಸಾಮಾಜಿಕ ಬಹಿಷ್ಕಾರಕ್ಕೊಳಗಾಗಿದ್ದ ಅಸ್ಪೃಶ್ಯರ ಸ್ಥಿತಿಗತಿಯ ಕುರಿತು ತನಿಖೆ ಮಾಡಿ ಮಾಹಿತಿ ಸಂಗ್ರಹಿಸಬೇಕಾಗಿತ್ತು. ನನ್ನನ್ನು ಬರಮಾಡಿಕೊಳ್ಳಲು ಸ್ಟೇಶನ್‌ಗೆ ಬಂದಿದ್ದ ಚಾಳಿಸ್‌ಗಾಂವ್‌ನ ಅಸ್ಪೃಶ್ಯರು, ನಾನು ಅಂದು ರಾತ್ರಿ ಅವರೊಂದಿಗೆ ಉಳಿದುಕೊಳ್ಳಬೇಕೆಂದು ವಿನಂತಿಸಿದರು. ನನ್ನ ಮೂಲ ಯೋಜನೆ ಪ್ರಕಾರ ನಾನು ಸಾಮಾಜಿಕ ಬಹಿಷ್ಕಾರದ ಆ ಪ್ರಕರಣವನ್ನು ತನಿಖಿಸಿದ ನಂತರ ನೇರವಾಗಿ ಮುಂಬಯಿಗೆ ಹೋಗಬೇಕಾಗಿತ್ತು. ಆದರೆ, ಅವರ ಒತ್ತಾಸೆಯ ತೀವ್ರತೆಗೆ ಮಣಿದು ಅವರೊಂದಿಗೆ ಉಳಿಯಲು ಒಪ್ಪಿಕೊಂಡೆ. ನಾನು ಧುಳಿಯಾ ಟ್ರೇನ್ ಹತ್ತಿ ಸದರಿ ಗ್ರಾಮಕ್ಕೆ ಹೋಗಿ ಅಲ್ಲಿಯ ವಸ್ತುಸ್ಥಿತಿಯನ್ನು ಅಧ್ಯಯನಿಸಿ, ಬೇಕಾಗಿದ್ದ ಮಾಹಿತಿಗಳನ್ನೆಲ್ಲ ಸಂಗ್ರಹಿಸಿಕೊಂಡು ಹಿಂತಿರುಗಿ ಟ್ರೇನ್ ಹಿಡಿದು ಚಾಳಿಸ್‌ಗಾಂವ್ ತಲುಪಿದೆ.

ಅಂದು ರಾತ್ರಿ ನಾನು ಅವರೊಂದಿಗೆ ಕಳೆಯುವುದಾಗಿ ಮಾತುಕೊಟ್ಟಿದ್ದರಿಂದ ಚಾಳಿಸ್‌ಗಾಂವ್‌ನ ಅಸ್ಪೃಶ್ಯರು, ನಾನು ಹಿಂತಿರುಗಿ ಬರುವವರೆಗೂ ನನ್ನ ದಾರಿ ಕಾಯುತ್ತ ಸ್ಟೇಶನ್‌ನಲ್ಲಿಯೇ ಕುಳಿತಿದ್ದರು. ನಾನು ಇಳಿದೊಡನೆಯೇ ನನಗೆ ಮಾಲಾರ್ಪಣೆ ಮಾಡಿ ಸ್ವಾಗತಿಸಿದರು. ಅಲ್ಲಿಯ ಅಸ್ಪೃಶ್ಯರು ವಾಸಿಸುತ್ತಿದ್ದ ಮಹಾರ್‌ವಾಡಾ ರೈಲ್ವೆ ಸ್ಟೇಶನ್‌ನಿಂದ ಸುಮಾರು ಎರಡು ಮೈಲುಗಳಷ್ಟು ದೂರದಲ್ಲಿತ್ತು. ಅಲ್ಲಿಗೆ ತಲುಪಲು ಒಂದು ನದಿಯನ್ನು ದಾಟಿ ಹೋಗಬೇಕಾಗಿತ್ತು. ಆ ನದಿಗೆ ಅಡ್ಡಲಾಗಿ ಒಂದು ಕಮಾನು ಕಟ್ಟಲಾಗಿತ್ತು. ಸ್ಟೇಶನ್‌ವರೆಗೆ ಹೋಗಿ ಬರುತ್ತಿದ್ದ ಅನೇಕ ಟಾಂಗಾಗಳು ನದಿಯ ಮೇಲಿನ ಆ ಕಮಾನಿನ ಮೇಲೆ ಹಾಯ್ದು ಹೋಗುತ್ತಿದ್ದವು. ಮಹಾರ್‌ವಾಡಾ ಬಹಳ ದೂರವೇನೂ ಇರಲಿಲ್ಲವಾದ್ದರಿಂದ ನನ್ನನ್ನು ಕೂಡಲೇ ಅಲ್ಲಿಗೆ ಕರೆದುಕೊಂಡು ಹೋಗಬಹುದೆಂದು ನಿರೀಕ್ಷಿಸಿದ್ದೆ. ಆದರೆ ಬಹಳ ಹೊತ್ತಿನವರೆಗೂ ಆ ದಿಕ್ಕಿನಲ್ಲಿ ಯಾವುದೇ ಚಲನವಲನಗಳು ಕಂಡುಬರಲಿಲ್ಲ. ಕಾರಣ ಅರ್ಥವಾಗದೆ, ನಾನು ಸುಮ್ಮನೆ ಕಾಯುತ್ತ ಕುಳಿತೆ. ಒಂದು ಗಂಟೆಯಷ್ಟು ಸಮಯ ಸಂದ ನಂತರ ಒಂದು ಟಾಂಗಾವನ್ನು ಪ್ಲಾಟ್‌ಫಾರ್ಮನ ಬಳಿ ತರಲಾಯಿತು. ನಾನು ಅದನ್ನು ಹತ್ತಿ ಕುಳಿತೆ. ಟಾಂಗಾದಲ್ಲಿ ನಾನು ಮತ್ತು ಟಾಂಗಾವಾಲಾ ಇಬ್ಬರೇ ಇಬ್ಬರು. ಉಳಿದೆಲ್ಲರೂ ಕಾಲ್ನಡಿಗೆಯಲ್ಲಿ ಒಳದಾರಿ ಹಿಡಿದು ಹೊರಟು ಹೋದರು. ಒಂದು ಅರಗಳಿಗೆಯಲ್ಲಿಯೇ ಎರಡ್ನೂರು ಹೆಜ್ಜೆಗಳಷ್ಟು ಮುಂದೆ ಹೋಗಿರಬಹುದು. ಎದುರಿಗೆ ಬರುತ್ತಿದ್ದ ಕಾರು, ನಮಗೆ ಇನ್ನೇನು ಡಿಕ್ಕಿ ಹೊಡೆದೇ ಬಿಡುತ್ತದೆ ಎಂಬಂತೆ ಮೈಮೇಲೆಯೇ ಏರಿ ಬಂದಿತು. ಪ್ರತಿದಿನವೂ ಆ ದಾರಿಯಲ್ಲಿಯೇ ಟಾಂಗಾ ಓಡಿಸುತ್ತಿದ್ದವನು, ಅಷ್ಟು ಅನನುಭವಿಯಾಗಿರುವುದನ್ನು ಕಂಡು ನನಗೆ ಆಶ್ಚರ್ಯವಾಯಿತು. ಒಬ್ಬ ಪೋಲಿಸ್ ಪೇದೆ ಜೋರಾಗಿ ಕೂಗಿ ಕಾರಿನ ಡ್ರೈವರ್‌ಗೆ ಕೂಡಲೇ ಕಾರನ್ನು ಹಿಂದಕ್ಕೆ ಸರಿಸಲು ಹೇಳದಿದ್ದರೆ, ಭಾರಿ ಅವಘಡ ಸಂಭವಿಸಬಹುದಾಗಿತ್ತು. ಅಂತು ನೆರವಾಗಿಯೇ ನಮ್ಮ ಮೇಲೆ ಎರಗಲಿದ್ದ ಅಪಾಯ ತಪ್ಪಿಸಿಕೊಂಡು ಮುಂದೆ ಹೊರಟೆವು.

ಹಾಗೋ ಹೀಗೋ ಒಟ್ಟಿನಲ್ಲಿ ಆ ನದಿಯ ಮೇಲಿನ ಕಮಾನು ಸೇತುವೆಯವರೆಗೆ ಬಂದೆವು. ಸಾಮಾನ್ಯವಾಗಿ ಸೇತುವೆ ಎರಡೂ ಬದಿಗೂ ಇರುವಂತೆ ಆ ಕಮಾನಿನ ಮೇಲೆ ಇಬ್ಬದಿಯ ಗೋಡೆಗಳಿರಲಿಲ್ಲ. ಕಮಾನಿನ ಉದ್ದಕ್ಕೂ ಐದು ಹತ್ತು ಅಡಿಗಳಿಗೊಂದರಂತೆ ರಸ್ತೆಯ ಇಕ್ಕೆಲದಲ್ಲೂ ಅಲ್ಲಲ್ಲಿ ಕಲ್ಲುಗಳನ್ನು ಮಾತ್ರ ಸಾಲಾಗಿ ಇಡಲಾಗಿತ್ತು. ಕಮಾನಿನ ಮೇಲೆಯೂ ರಸ್ತೆಗೆ ಕಲ್ಲುಗಳನ್ನು ಹಾಸಲಾಗಿತ್ತು. ನಿಜವೆಂದರೆ, ಆ ನದಿಯ ಮೇಲಿನ ಕಮಾನು ನಾನು ಚಲಿಸುತ್ತಿದ್ದ ರಸ್ತೆಗೆ ನೇರವಾಗಿ ಲಂಬಕೋನದಲ್ಲಿತ್ತು. ನಮ್ಮ ರಸ್ತೆಯಿಂದ ಆ ಕಮಾನಿಗೆ ಬಂದೊಡನೆಯೇ ಟಾಂಗಾ ಗರಕ್ಕನೆ ತಿರುಗಬೇಕಾಗಿತ್ತು. ಆದರೆ ರಸ್ತೆಯ ಉದ್ದಕ್ಕೂ ಇಡಲಾಗಿದ್ದ ಮೊದಲನೇ ಕಲ್ಲಿನ ಬಳಿಗೆ ಬರುತ್ತಿದ್ದಂತೆಯೇ ಟಾಂಗಾ ನೆಟ್ಟಗೆ ಹೋಗುವ ಬದಲು ತಿರುಗಬೇಕಾಗಿದ್ದ ಸ್ಥಳಕ್ಕಿಂತ ಮುಂಚೆಯೇ ಚಕ್ಕನೆ ತಿರುಗಿದ್ದರಿಂದ ಅದರ ಗಾಲಿ ಕಲ್ಲಿನ ಮೇಲೆ ಹತ್ತಿ ಕೆಳಗಿಳಿಯುತ್ತಿದ್ದಂತೆಯೇ ಎರಡು ಕಲ್ಲುಗಳ ಮಧ್ಯೆ ಸಿಕ್ಕಿಕೊಂಡು ದಢಕ್ಕನೆ ಬಡಿದು ಗಕ್ಕನೆ ನಿಂತಿತು. ಆ ರಭಸಕ್ಕೆ ನಾನು ಟಾಂಗಾದಿಂದ ಹಾರಿ ಕಮಾನಿನ ಕಲ್ಲು ಹಾಸಿನ ಮೇಲೆ ಬಿದ್ದೆ. ನೆಗೆದು ಬಿದ್ದ ನನಗೆ ಪ್ರಜ್ಞೆ ತಪ್ಪಿತು. ಟಾಂಗಾ ಮತ್ತು ಕುದುರೆ ಎರಡೂ ಕಮಾನಿನಿಂದ ಕೆಳಗೆ ಉರುಳಿಬಿದ್ದವು. ಮಹಾರ್‌ವಾಡಾ ನದಿಯ ಆಚೆಯ ದಂಡೆಯ ಮೇಲಿತ್ತು. ನನ್ನನ್ನು ಸ್ವಾಗತಿಸಿ ಬರಮಾಡಿಕೊಳ್ಳಲು ಸ್ಟೇಶನ್‌ಗೆ ಬಂದಿದ್ದವರು ಕಾಲು ದಾರಿಯಲ್ಲಿ ಸರಸರ ನಡೆದು ಹೋಗಿ ನಮಗಿಂತಲೂ ಮುಂಚೆಯೇ ಮಹಾರ್‌ವಾಡಾ ತಲುಪಿದ್ದರು. ಆನಂತರ ಯಾರ್‍ಯಾರೋ ಸೇರಿ, ಪ್ರಜ್ಞೆ ತಪ್ಪಿಬಿದ್ದಿದ್ದ ನನ್ನನ್ನು ಎತ್ತಿ ಮಹಾರ್‌ವಾಡಾಕ್ಕೆ ಸಾಗಿದರು. ನನ್ನ

ಪುಟ 12 ಕ್ಕೆ

ರಿಂದಾಗಿ ಎಐಐಎಂಎಸ್ ಬೋಧಕ ವೃಂದದವರು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು ಎದುರಿಸುವ ಸಮಸ್ಯೆಗಳ ಬಗ್ಗೆ ಹೆಚ್ಚು ಸಂವೇದನಾಶೀಲರಾಗುವಂತೆ ಮಾಡಲು, ಆಮೂಲಕ ವಿದ್ಯಾರ್ಥಿಗಳು ತಮ್ಮ ಶಿಕ್ಷಕರಲ್ಲಿ ಹೆಚ್ಚಿನ ವಿಶ್ವಾಸ ಹೊಂದುವಂತೆ ಮಾಡಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಮಿತಿ ಶಿಫಾರಸು ಮಾಡಿದೆ.

ಪರೀಕ್ಷೆಗಳ ವಿಷಯದಲ್ಲಿ ಎಐಐಎಂಎಸ್ ಪ್ರಾಯೋಗಿಕ ಮತ್ತು ಮೌಖಿಕ ಪರೀಕ್ಷೆಗೆ ಒಂದು ಹೆಚ್ಚು ಪಾರದರ್ಶಕವಾದ, ಬಹುಶಃ ಸ್ವತಂತ್ರವಾದ ವಿಧಾನವನ್ನು, ಆ ವ್ಯವಸ್ಥೆಯಲ್ಲಿ ವಿಶ್ವಾಸವನ್ನು ಮತ್ತೆ ಗಳಿಸಲಿಕ್ಕಾಗಿಯಾಗಿಯೇ, ಅಭಿವೃದ್ಧಿ ಪಡಿಸಬೇಕು ಎಂದು ಸಮಿತಿ ಶಿಫಾರಸು ಮಾಡಿತ್ತು.

ಎಐಐಎಂಎಸ್ ಸೀಮಿತ ಉದ್ದೇಶಕ್ಕಾಗಿ ಬಳಸುವ ತರಗತಿ ಪ್ರತಿನಿಧಿಯ ವ್ಯವಸ್ಥೆ ಕೂಡ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಸಂದರ್ಭದಲ್ಲಿ ತಾರತಮ್ಯದ ಮತ್ತು ನ್ಯಾಯಯುತವಲ್ಲದ ರೀತಿಯಲ್ಲಿ ಕೆಲಸ ಮಾಡುತ್ತದೆ ಎಂದು ಸಮಿತಿ ಗಮನಿಸಿತು.

ಹಾಸ್ಟೆಲಿನಲ್ಲಿ ಸಾಮಾಜಿಕ ಜೀವನ ಜಾತಿ ವಿಭಜನೆಯಿಂದ ನರಳುತ್ತಿದೆ ಎಂದು ಸಮಿತಿ ಗಮನಿಸಿತು. "ಇದು ಸಾಕಷ್ಟು ಸಮಯದಿಂದ ನಡೆದು ಬಂದಿದೆ ಮತ್ತು ಮೀಸಲಾತಿ-ವಿರೋಧಿ ಚಳುವಳಿಯಿಂದಾಗಿ ಉಲ್ಬಣಗೊಂಡಿರುವಂತೆ ಕಾಣುತ್ತದೆ. ಜಾತಿ ವಿಭಜನೆಯಿಂದಾಗಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು ಹೊರಗುಳಿಯುವಂತಾಗಿದೆ. ಕಾಲಕ್ರಮೇಣ ಎಐಐಎಂಎಸ್‌ನ ವಿದಾರ್ಥಿ ಸಮುದಾಯದ ಸಾಮಾಜಿಕ ಜೀವನದಲ್ಲಿ ಜಾತಿ ವಿಭಜನೆ ಸಂಭವಿಸಿದೆ ಎಂಬುದನ್ನು ಸಮಿತಿ ಗಮನಿಸಿತು. ಈ ಜಾತಿ ವಿಭಜನೆ ಜಾತಿ ಅಧಾರದಲ್ಲಿ ವಿದ್ಯಾರ್ಥಿ ಗುಂಪುಗಳ ರಚನೆಯಲ್ಲಿ ಬಿಂಬಿತವಾಗಿದೆ. ಈ ಮೂಲಕ ಸಂಬಂಧಗಳು ಜಾತಿ ಗುಂಪುಗಳಿಗೆ ಸೀಮಿತವಾಗಿವೆ. ಕ್ಯಾಂಪಸ್‌ನ ಸಹಜೀವನದಲ್ಲಿ ಈ ರೀತಿ ಜಾತಿ ಆಧಾರದಲ್ಲಿ ವಿದ್ಯಾರ್ಥಿಗಳಲ್ಲಿ ವಿಭಜನೆ ಗಂಭೀರ ಸಾಮಾಜಿಕ ಸಮಸ್ಯೆಗಳಿಗೆ ಎಡೆ ಮಾಡಿಕೊಟ್ಟಿದೆ ಎಂದು ಸಮಿತಿಗೆ ಅನಿಸುತ್ತದೆ. ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳು, ನಿಜ ಹೇಳಬೇಕೆಂದರೆ, ನಿಂದನೆ, ಅವಮಾನ ಮತ್ತು ಹಿಂಸಾಚಾರದಿಂದ ನರಳುತ್ತಿದ್ದಾರೆ. ಜಾತಿ ಸಂಬಂಧಿತ ರ್‍ಯಾಗಿಂಗ್ ಎಐಐಎಂಎಸ್‌ನಲ್ಲಿರುವ ಸಂಸ್ಕೃತಿಗೆ ಒಂದು ಕ್ಲಾಸಿಕ್ ಉದಾಹರಣೆ. ಜಾತಿ ವಿಭಜನೆಯ ಫಲಿತಾಂಶವಾಗಿ, ಆಗಾಗ ಹೊಲಸು ಸ್ವರೂಪ ಪಡೆಯುವ ಒಂದು ಸಂಸ್ಕೃತಿ ಬಂದು ಬಿಟ್ಟಿದೆ. ಎಐಐಎಂಎಸ್ ಈ ಪ್ರಶ್ನೆಯನ್ನು ತಕ್ಷಣವೇ ಎತ್ತಿಕೊಳ್ಳುವುದು ಅಗತ್ಯವಾಗಿದೆ. ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳನ್ನು ಸಾಮಾಜಿಕವಾಗಿ ಹೊರಗಿಡುವುದರ ಪರಿಣಾಮಗಳು ಬಹಳಷ್ಟು ಗಂಭೀರವಾಗಿವೆ, ಇದು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಲ್ಲಿ ಮಾನಸಿಕ ಸಮಸ್ಯೆಗಳು ಮತ್ತು ಅಭದ್ರತೆಯ ಒಂದು ಭಾವನೆ ಬೆಳೆಯುವಂತೆ ಮಾಡಿದೆ" ಎಂದಿರುವ ಥೋರಟ್ ಸಮಿತಿ ಯಾವುದೇ ಶಿಕ್ಷಣ ಸಂಸ್ಥೆಯ ಸಮರಸಪೂರ್ಣ ಬೆಳವಣಿಗೆಗೆ, ವಿದ್ಯಾರ್ಥಿಗಳು ಮತ್ತು ಶಿಕ್ಷಕ ಸಮುದಾಯ ಸಾಮಾಜಿಕ ಸಾಮರಸ್ಯದ ಮತ್ತು ನೆರವು ನೀಡುವ ರೀತಿಯಲ್ಲಿ ಬದುಕುವಂತೆ ಆಗಬೇಕಾಗಿದೆ ಎಂಬುದನ್ನು ನೆನಪಿಸಿತ್ತು.

ಈ ದೃಷ್ಟಿಯಿಂದ ಸಮಿತಿ ಈ ಮುಂದಿನ ಶಿಫಾರಸುಗಳನ್ನು ಮಾಡಿದೆ:

1. ವಿದ್ಯಾರ್ಥಿಗಳು, ರೆಸಿಡೆಂಟ್‌ಗಳು ಮತ್ತು ಬೋಧಕರಿರುವ ಒಂದು ಜಂಟಿ ಸಮಿತಿಯನ್ನು ಎಐಐಎಂಎಸ್‌ನ ಅಧಿಕಾರ ಮಂಡಳಿ ರಚಿಸಬೇಕು. ಇದು ಕ್ಯಾಂಪಸ್‌ನಲ್ಲಿರುವ ಸಾಮಾಜಿಕ ವಾತಾವರಣವನ್ನು ಪರೀಕ್ಷಿಸಬೇಕು ಮತ್ತು ಅಧ್ಯಯನ ಮಾಡಬೇಕು, ಮತ್ತು ಇಲ್ಲಿ ಕಾಲಕ್ರಮೇಣ ಮೂಡಿಬಂದಿರುವ ಸಾಮಾಜಿಕ ವಿಭಜನೆಯ ಬಗ್ಗೆ ಒಂದು ಒಳನೋಟವನ್ನು ಅಭಿವೃದ್ಧಿ ಪಡಿಸಬೇಕು.
   ಸಾಮಾಜಿಕ ವಿಭಜನೆಯ ಸಮಸ್ಯೆ ಇಲ್ಲ ಎಂದು ನಿರಾಕರಿಸುವುದು ಈ ಸಂಸ್ಥೆಯ, ಆಡಳಿತದ, ಬೋಧಕ ವೃಂದದ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಗೆ ಅನುಗುಣವಾದದ್ದಲ್ಲ. ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಯ ಅನುಭವ ಮತ್ತು ಭಾವನೆಯಲ್ಲಿ ಆತನನ್ನು ಕ್ಯಾಂಪಸ್‌ನ ಸಮುದಾಯಿಕ ಜೀವನದಲ್ಲಿ ಹೊರಗಿಡುವಂತೆ ಮಾಡಿರುವ ಸಾಮಾಜಿಕ ವಿಭಜನೆ ಮೂಡಿ ಬಂದಿದೆ. ಹೃದಯದಿಂದ ಹೃದಯದ ಚರ್ಚೆಗಳ ಮೂಲಕ ವಿಶ್ವಾಸವನ್ನು ಕಟ್ಟುವುದು ಮತ್ತು ಈ ಪ್ರಶ್ನೆಯನ್ನು ಸಾಮೂಹಿಕವಾಗಿ ಒಟ್ಟಿಗೇ ಎದುರಿಸುವುದು ಅಗತ್ಯವಾಗಿದೆ.
2. ಅಧಿಕಾರ ಮಂಡಳಿ ಪರಿಸ್ಥಿತಿಯನ್ನು ಸರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ಕ್ಯಾಂಪಸ್‌ನಲ್ಲಿ ಸಾಮಾಜಿಕ ಸಾಮರಸ್ಯವನ್ನು ಮತ್ತೆ ತರುವ ಒಂದು ಧೋರಣೆ ಮತ್ತು ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಬೇಕು.
3. ಎಸ್‌ಸಿ, ಎಸ್‌ಟಿ ಮತ್ತು ಒಬಿಸಿಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳನ್ನು ಪರಿಶೀಲಿಸಲು ಎಐಐಎಂಎಸ್ "ಸಮಾನ ಅವಕಾಶ ಕಚೇರಿ' ಎಂಬ ಒಂದು ವಿಶೇಷ ಕಚೇರಿಯನ್ನು ರಚಿಸಬೇಕು. ಈ ಕಚೇರಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ರಿಮೆಡಿಯಲ್ ಕೋಚಿಂಗ್ ಕಾರ್ಯಕ್ರಮ ಮತ್ತು ಇತರ ಯೋಜನೆಗಳನ್ನು ಜಾರಿಗೊಳಿಸಬೇಕು. ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಕುಂದುಕೊರತೆಗಳು ಮತ್ತು ಇತರ ಸಮಸ್ಯೆಗಳನ್ನು ಪರಿಶೀಲಿಸುವ ಕಚೇರಿಯಾಗಿಯೂ ಇದು ಕೆಲಸ ಮಾಡಬೇಕು. ಒಬ್ಬ ಹಿರಿಯ ಬೋಧಕರು ಇದಕ್ಕೆ ಮುಖ್ಯಸ್ಥರಾಗಿರಬೇಕು, ಅವರಿಗೆ ಬೆಂಬಲವಾಗಿ ಒಬ್ಬರು ಅಥವ ಹೆಚ್ಚು ಬೋಧಕರು ಇರಬೇಕು ಹಾಗೂ ಸೂಕ್ತ ಸಿಬ್ಬಂದಿ ಹಾಗೂ ನಿಧಿಗಳನ್ನು ಒದಗಿಸಬೇಕು.
4. ಸಾಂಸ್ಕೃತಿಕ ಉತ್ಸವಗಳಲ್ಲಿ ಮತ್ತು ಕೆಲವು ಆಟೋಟಗಳಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯ ಕೊರತೆ ಉಂಟಾಗಿರುವುದು ವಿವಿಧ ಸಮಿತಿಗಳಲ್ಲಿ ಎಸ್‌ಸಿ/ಎಸ್‌ಟಿ ಪ್ರಾತಿನಿಧ್ಯ ಇಲ್ಲದಿರುವುದರಿಂದ ಮತ್ತು ಈ ಸಮಿತಿಗಳು ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳ ವಿಷಯದಲ್ಲಿ ನ್ಯಾಯಯುತವಾಗಿ ಕೆಲಸ ಮಾಡದಿರುವುದರಿಂದಾಗಿ. ಆದ್ದರಿಂದ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಎಲ್ಲ ಸಮಿತಿಗಳಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳನ್ನು ನೇಮಿಸಬೇಕು. ಎರಡನೆಯದಾಗಿ, ಈ ಸಮಿತಿಗಳು ನ್ಯಾಯಯುತವಾಗಿ, ಪಾರದರ್ಶಕವಾಗಿ ಮತ್ತು ಪ್ರಜಾತಾಂತ್ರಿಕವಾಗಿ ಕೆಲಸ ಮಾಡುವಂತಹ ವಿಧಿ-ವಿಧಾನಗಳನ್ನು, ನಿಯಮಾವಳಿಗಳನ್ನು ಅಭಿವೃದ್ಧಿ ಪಡಿಸಬೇಕು.
5. ಸೀನಿಯರ್ ರೆಸಿಡೆಂಟ್‌ಗಳು ಮತ್ತು ಬೋಧಕರ ಆಯ್ಕೆಯಲ್ಲಿ ಮೀಸಲಾತಿಯ ಹುದ್ದೆ ಆಧಾರಿತ ರೋಸ್ಟರ್ ಪದ್ಧತಿಯನ್ನು ಅನ್ವಯಿಸಬೇಕು ಎಂದು ಸಮಿತಿ ಶಿಫಾರಸು ಮಾಡುತ್ತದೆ.
6. ಆರೋಗ್ಯ ಮಂತ್ರಾಲಯ ಎಐಐಎಂಎಸ್‌ನಲ್ಲಿ ಮೀಸಲಾತಿಯ ಜಾರಿಯ ಬಗ್ಗೆ ನಿಕಟವಾದ ನಿಗಾ ಇಡಬೇಕು.

ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ದಲಿತ/ಬುಡಕಟ್ಟು ವಿದ್ಯಾರ್ಥಿಗಳ ಕಹಿ ಅನುಭವಗಳು ಸುಮಾರಾಗಿ ಇದೇ ರೀತಿಯವಾಗಿದ್ದು ಈ ಶಿಫಾರಸುಗಳನ್ನು ಜಾರಿಗೆ ತರಬೇಕು, ಇವನ್ನು ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯವಾಗುವಂತೆ ವಿಸ್ತರಿಸಿ ಅದಕ್ಕೆ ಕಾಯ್ದೆಯ ಶಕ್ತಿಯನ್ನು ಕೊಡಬೇಕಾಗಿದೆ. ಈಗ ಇದು ಅಖಿಲ ಭಾರತ ಸಾಮಾಜಿಕ ನ್ಯಾಯದ ಜಂಟಿ ಸಮಿತಿಯ ಒಂದು ಪ್ರಮುಖ ಬೇಡಿಕೆ.

ಮಹಾಡ್ ಸತ್ಯಾಗ್ರಹದ ನೆನಪು

ಪುಟ 10 ರಿಂದ

ಈ ರೀತಿಯ ತಾರತಮ್ಯ ಮತ್ತು ಅಸ್ಪೃಶ್ಯತೆಯ ವಿರುದ್ಧ ಕೆಲವು ಸಮಾಜ ಸುಧಾರಕರ ಬೆಂಬಲದಿಂದ ಬ್ರಿಟಿಷ್ ಸರಕಾರಕ್ಕೆ ಮತ್ತು ಅಂದಿನ ಡಿಸ್ಟ್ರಿಕ್ಟ್ ಕಲೆಕ್ಟರ್‌ಗೆ ಸ್ವತಃ ಪತ್ರ ಬರೆದು ಅದರ ಒಂದು ಪ್ರತಿಯನ್ನು ಒಂದು ಪತ್ರಿಕೆಗೆ ಪ್ರಕಟಣೆಗಾಗಿ ಕಳುಹಿಸುವ ಧೈರ್ಯ ಮಾಡುತ್ತಾನೆ. ಮೋರೆ ಕಳುಹಿಸಿದ ಆ ಪತ್ರ ಪತ್ರಿಕೆಯಲ್ಲಿ ಪ್ರಕಟವಾಗಿದ್ದೆ ತಡ, ಎಚ್ಚೆತ್ತುಕೊಂಡ ಶಾಲಾ ಆಡಳಿತ ಮಂಡಳಿಯು ಮೋರೆಗೆ ಮಹಾಡ್ ಹೈಸ್ಕೂಲ್‌ನಲ್ಲಿ ಪ್ರವೇಶವೇನೊ ನೀಡಿ, ಅಲ್ಲಿಯೂ ದಲಿತನೆಂಬ ಕಾರಣಕ್ಕೆ ಆತನನ್ನು ಹೊರಗಡೆಯೇ ಕುಳಿಸುತ್ತದೆ. ಆದರೆ ಏನೇ ಆಗಲಿ ಬಾಲಕ ಮೋರೆ ಇಂತಹ ಸಾಮಾಜಿಕ ತಾರತಮ್ಯದ ವಿರುದ್ಧ ನಡೆಸಿದ ಈ ಐತಿಹಾಸಿಕ ಗೆಲುವು ಶೋಷಿತ ಸಮುದಾಯಗಳಲ್ಲಿ ಒಂದು ಹೊಸದಾದ ಸಂಚಲನವನ್ನೇ ಮೂಡಿಸುತ್ತದೆ. ಹೀಗೆ ಅಮಾನವೀಯ ಅಸ್ಪೃಶ್ಯತೆ ಆಚರಣೆಗಳ ವಿರುದ್ಧ ತನ್ನ ಹೋರಾಟವನ್ನು ಬಾಲ್ಯದಿಂದಲೇ ಆರಂಭಿಸಿದ್ದ ಮೋರೆಗೆ 1923 ರಲ್ಲಿ ತನ್ನ ಗ್ರಾಮದಲ್ಲೇ ನಡೆಸಿದ ಯಶಸ್ವಿ 'ಚವ್ದಾರ್ ಕೆರೆ ನೀರು ಕುಡಿಯುವ ಚಳವಳಿ'ಯು ಮತ್ತಷ್ಟು ಹುಮ್ಮಸ್ಸನ್ನು ನೀಡುತ್ತದೆ.

ಡಾ: ಅಂಬೇಡ್ಕರ್‌ಗೆ ಆಹ್ವಾನ :

1924 ರ ಸುಮಾರಿನಲ್ಲಿ ಮಹಾಡ್ ಪ್ರದೇಶ ವ್ಯಾಪ್ತಿಯ ಪ್ರಮುಖ ದಲಿತ ಕಾರ್ಯಕರ್ತರ ಸಭೆಯೊಂದನ್ನು ನಡೆಸಿದ ಮೋರೆಯವರು ಆ ಸಭೆಯಲ್ಲಿ 'ದಲಿತ ಸಮ್ಮೇಳನ'ವನ್ನು ಆಯೋಜಿಸಲು ಮತ್ತು ಅದರ ಅಧ್ಯಕ್ಷತೆಯನ್ನು ಡಾ: ಅಂಬೇಡ್ಕರ ವಹಿಸುವಂತೆ ಕೋರಲು ನಿರ್ಣಯ ಮಾಡಿದರು. ಅಷ್ಟೊತ್ತಿಗೆ ಲಂಡನ್ ಮತ್ತು ಕೊಲಂಬಿಯಾ ಎರಡರಿಂದಲೂ ಡಾಕ್ಟರೇಟ್ ಮತ್ತು ಬಾರ್ ಅಟ್ ಲಾ ಗೌರವಗಳಿಗೆ ಪಾತ್ರವಾಗಿದ್ದ ಅಂಬೇಡ್ಕರ್ ಕುರಿತಾಗಿ ಮೋರೆಯವರಲ್ಲಿ ಅಪಾರವಾದ ಅಭಿಮಾನ ಮತ್ತು ಹೆಮ್ಮೆ ಮೂಡಿತ್ತು. ಅಂತಹ ಮಹಾನ್ ಸಾಧನೆ ಮಾಡಿದ ವ್ಯಕ್ತಿಯನ್ನು ತಮ್ಮ ಪ್ರದೇಶಕ್ಕೆ ಕರೆಸಿ ಗೌರವಿಸುವುದು ಮತ್ತು ಆ ಪ್ರದೇಶದ ಮಕ್ಕಳಲ್ಲಿ ಅವರಂತೆ ಓದಲು ಸ್ಫೂರ್ತಿ ತುಂಬಬೇಕು ಮತ್ತು ಆ ಮೂಲಕ ದಲಿತರನ್ನು ಕೀಳಾಗಿ ಕಾಣುವ ಮೇಲ್ವರ್ಗದ ಜನರಿಗೆ ನಾಚಿಕೆ ಭರಿಸುವಂತಾಗಬೇಕು ಎಂಬ ಬಯಕೆ ಮೋರೆಯವರಲ್ಲಿ ಇತ್ತು. ಹೀಗೆ ಮೋರೆ ಮತ್ತು ಅವರ ಗೆಳೆಯರು ನಡೆಸಿದ ನಿರಂತರ ಪ್ರಯತ್ನದ ಫಲವಾಗಿ ಡಾ: ಬಿ.ಆರ್. ಅಂಬೇಡ್ಕರ್ 1927 ಮಾರ್ಚ 19–20, ಮಹಾಡ್‌ನಲ್ಲಿ ಆಯೋಜಿಸಲಾದ 'ದಲಿತ ಸಮ್ಮೇಳನದ' ಅಧ್ಯಕ್ಷತೆ ವಹಿಸಲು ಒಪ್ಪಿಕೊಂಡರು. ಆದರೆ ಹಾಗೆ ಒಪ್ಪಿಕೊಳ್ಳುವ ಮುನ್ನ ಬಾಬಾ ಸಾಹೇಬರು ಈ ಯುವಕನಿಗೆ ಅಂತಹ ಸಮ್ಮೇಳನವನ್ನು ಆಯೋಜಿಸುವ ಸಾಮರ್ಥವಿದೆಯಾ ಎಂಬುದನ್ನು ಮನವರಿಕೆ ಮಾಡಿಕೊಳ್ಳಲು ತನ್ನ ಅನುಯಾಯಿಗಳನ್ನು ಮಹಾಡ್‌ಗೆ ಕಳುಹಿಸಿದ ನಂತರವೇ ಸಮ್ಮೇಳನಕ್ಕೆ ಬರುವ ಬಗ್ಗೆ ಖಾತ್ರಿಪಡಿಸಿದರು.

ಮಹಾಡ್‌ನ ಈ ದಲಿತ ಸಮಾವೇಶದ ತಯಾರಿಗಾಗಿ ಮೋರೆ ಮತ್ತು ಅವರ ಸಂಗಾತಿಗಳು ಸುಮಾರು ಮೂರು ವರ್ಷಗಳ ಕಾಲ ಅಪಾರವಾಗಿ ಓಡಾಡಿದರು. ವಿಶೇಷವಾಗಿ ದಲಿತರಲ್ಲಿ ಬೌದ್ಧಿಕ ಜಾಗೃತಿಯನ್ನು, ಸಾಮಾಜಿಕ ಎಚ್ಚರವನ್ನು ಹಾಗೂ ಸಮಾವೇಶದ ಯಶಸ್ವಿಗೆ ಅಗತ್ಯವಿದ್ದ ಆರ್ಥಿಕ ಹಾಗೂ ಜನ ಬೆಂಬಲವನ್ನು ಕ್ರೋಢಿಕರಿಸಲು ಆ ಇಡೀ ಅವಧಿಯನ್ನು ಬಳಸಿಕೊಂಡರು. ಇವರ ಈ ಪ್ರಯತ್ನದಿಂದ ಎಚ್ಚತ್ತುಕೊಂಡಿದ್ದ ಮಹಾಡ್ ಮುನಿಸಿಪಾಲಿಟಿ ಸಮಾವೇಶಕ್ಕಿಂತ ಕೆಲವು ದಿನಗಳ ಮುಂಚೆಯೇ 'ಮಹಾಡ್ ಕೆರೆ ನೀರು' ಬಳಸುವ ಅವಕಾಶ ಎಲ್ಲ ಜಾತಿಯವರಿಗೂ ಸೇರಿದೆ ಎನ್ನುವ ನಿರ್ಣಯವನ್ನು ಪಾಸು ಮಾಡಿತ್ತು.

'ಮಹಾಡ್' ಎನ್ನುವ ಐತಿಹಾಸಿಕ ಸಮಾವೇಶ

1927 ಮಾರ್ಚ 19 ಹಾಗೂ 20 ರ ಸಮಾವೇಶ ಐತಿಹಾಸಿಕವಾಗಿತ್ತು. ಮಹಾರಾಷ್ಟ್ರದ ಕೊಂಕಣ ಪ್ರದೇಶದ ಮುಂಬೈ, ಥಾಣಾ, ಕುಲಬಾ ಮತ್ತು ರತ್ನಗಿರಿ ಜಿಲ್ಲೆಗಳ ಸುಮಾರು 5000 ದಷ್ಟು ಮಹಾರ್ ಜನರು ಮೋರೆಯವರು ಅತ್ಯಂತ ಶ್ರಮವಹಿಸಿ ಸಂಘಟಿಸಿದ್ದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸಮಾವೇಶದಲ್ಲಿ ಡಾ. ಅಂಬೇಡ್ಕರ್ ಹಾಗೂ ಅವರ ಜೊತೆ ಆಗಮಿಸಿದ್ದ ಅವರ ಸಹವರ್ತಿಗಳಾದ ಆನಂತ ಚೈತ್ರೆ, ಬಾಬು ಸಹಸ್ರಬುದೆ ಮತ್ತು ಸೀತಾರಾಮ ಸವಿತ್ರಕರ್ ಅವರನ್ನು ಸ್ವತಃ ಮೋರೆಯವರೇ ಸಭೆಗೆ ಪರಿಚಯಿಸಿದರು. ಡಾ: ಅಂಬೇಡ್ಕರ್ ಅಂದು ಮಾಡಿದ 'ಎಲ್ಲಾ ಸ್ವರೂಪದ ಅಸ್ಪೃಶ್ಯತೆ ಆಚರಣೆಗಳ ವಿರುದ್ಧ ನಾವು ಬಂಡಾಯ ಸಾರಬೇಕು' ಎಂಬ ಭಾಷಣ ನೆರೆದಿದ್ದವರಲ್ಲಿ ವಿದ್ಯುತ್ ಸಂಚಾರ ಮೂಡಿಸಿತು. ಮಾರನೇ ದಿನ ಅಂದರೆ ಮಾರ್ಚ 20 ರಂದು ಸಮ್ಮೇಳನದ ಅಧ್ಯಕ್ಷರಾದ ಡಾ: ಅಂಬೇಡ್ಕರ್ ನೇತೃತ್ವದಲ್ಲಿ ಸಮ್ಮೇಳನ ಸಭಾಂಗಣದಿಂದ ಆರಂಭಗೊಳ್ಳುವ ಸಾವಿರಾರು ಜನರ ರ್‍ಯಾಲಿಯು ಮಹಾಡ್ ನಗರದ ಸಿಹಿನೀರಿನ 'ಚವ್ದಾರ್ ಕೆರೆ'ಯತ್ತ ಧಾವಿಸುತ್ತದೆ. ಕೆರೆಗೆ ಇಳಿದ ಅಂಬೇಡ್ಕರ ಮೊದಲು ಬೊಗಸೆ ತುಂಬ ನೀರನ್ನು ಕುಡಿಯುವ ಮೂಲಕ ಸಾವಿರಾರು ವರ್ಷಗಳ ಜಾತಿ ವ್ಯವಸ್ಥೆಯ ಬೇರುಗಳನ್ನು ಕತ್ತರಿಸುವ ಕೆಲಸಕ್ಕೆ ಕೈ ಹಾಕುತ್ತಾರೆ. ಉಳಿದವರು ಸಾಲುಗಟ್ಟಿ ಚವ್ದಾರ್ ಕೆರೆಯ ಆ ಸಿಹಿನೀರನ್ನು ಕುಡಿಯುವ ಮೂಲಕ ಮಲೆತು ಹೋಗಿದ್ದ ಇಂಡಿಯಾದ ಜಾತಿ ವ್ಯವಸ್ಥೆಯನ್ನು ಧಿಕ್ಕರಿಸುವ ಧೈರ್ಯ ಮಾಡುತ್ತಾರೆ. ಇಂತಹದೊಂದು ಐತಿಹಾಸಿಕ ಪ್ರತಿಭಟನೆ ಮೂಲಕ ಮುಂಬರುವ ಹತ್ತಾರು ಸಾಮಾಜಿಕ ಚಳವಳಿಗಳಿಗೆ ಈ ಮಹಾಡ್‌ನ ಸಮಾವೇಶ ಮುನ್ನುಡಿ ಬರೆಯುತ್ತದೆ. 'ಚವ್ದಾರ್ ಕೆರೆ ನೀರು ಕುಡಿಯುವ ಚಳವಳಿ' ಯಶಸ್ವಿಯಾಗಿ ಕಾರ್ಯಕ್ರಮಕ್ಕೆ ಬಂದವರೆಲ್ಲಾ ತಮ್ಮ ಊರುಗಳಿಗೆ ವಾಪಸ್ಸಾಗುವ ಸಂದರ್ಭದಲ್ಲಿ ನಮ್ಮ ನೀರನ್ನು ಅಪವಿತ್ರಗೊಳಿಸಲಾಗಿದೆ, ನಮ್ಮ ದೇವಸ್ಥಾನವನ್ನು ಮಲಿನಗೊಳಿಸಲಾಗುತ್ತಿದೆ ಎಂಬ ಸುಳ್ಳು ಸುದ್ದಿಗಳನ್ನು ಹರಡಿದ ಸವರ್ಣೀಯರು, ಗುಂಪುಕೂಡಿ ಕಲ್ಲು ಮತ್ತು ದೊಣ್ಣೆಗಳಿಂದ ಮರಾಣಾಂತಿಕ ಹಲ್ಲೆಗಳನ್ನು ಮಹಾರ್ ಜನರ ಮೇಲೆ ಹರಿಯ ಬಿಟ್ಟು ಅವರ ಆತ್ಮಸ್ಥೈರ್ಯವನ್ನು ಕುಗ್ಗಿಸುವ ಪ್ರಯತ್ನಗಳನ್ನು ನಡೆಸಿದರು. ಆದರೆ ಇದರಿಂದ ಕಿಂಚಿತ್ತು ವಿಚಲಿತರಾಗದ ಅಂಬೇಡ್ಕರ್, ಮೋರೆ ಹಾಗೂ ಅವರ ಸಹವರ್ತಿಗಳ ಬೆಂಬಲದೊಂದಿಗೆ ಮುಂದೆ ಅಂತಹುದೇ ಹೋರಾಟವೊಂದನ್ನು ಮತ್ತದೇ ಮಹಾಡ್‌ನಲ್ಲೇ ನಡೆಸುವ ನಿರ್ಧಾರಕ್ಕೆ ಬಂದರು.

ಮನುಸ್ಮೃತಿಗೆ ಬಹಿರಂಗ ಬೆಂಕಿ.!


ಐತಿಹಾಸಿಕ ಮಹಾಡ್ ಯಶಸ್ವಿ ಸತ್ಯಾಗ್ರಹ ಬಳಿಕ ತನ್ನ ಸಾಮಾಜಿಕ ತಾರತಮ್ಯದ ವಿರುದ್ಧದ ಚಳವಳಿವನ್ನು ತೀವ್ರಗೊಳಿಸಲು ಅಂಬೇಡ್ಕರ ನಿರ್ಧರಿಸಿದರು. ಅದಕ್ಕೆ ಪೂರಕವಾಗಿ 'ಬಹಿಷ್ಕೃತ ಭಾರತ್' ಎನ್ನುವ ಮಾಸಿಕ ಪತ್ರಿಕೆಯನ್ನು ಆರಂಭಿಸಿದರು. ಅದರಲ್ಲಿ 'ಐತಿಹಾಸಿಕ ಮಹಾಡ್ ಸತ್ಯಾಗ್ರಹ'ದ ಮಹತ್ವ ಮತ್ತು ನಿರ್ಣಯಗಳು ಮತ್ತು ಅದರ ಮುಂದುವರೆದ ಭಾಗವಾಗಿ ಎರಡನೇ ಸಮಾವೇಶವನ್ನು ಅದೇ ವರ್ಷದ ಕೊನೆಯಲ್ಲಿ ಅಲ್ಲೆ ನಡೆಸಲು ನಿರ್ಧರಿಸಿರುವ ಅಂಶಗಳ ಕುರಿತು ಲೇಖನ ಬರೆದರು. ಈ ಎರಡನೇ ಮಹಾಡ್ ದಲಿತ ಸಮ್ಮೇಳನದ ತಯಾರಿಗಳು ಆರಂಭಗೊಳ್ಳುವ ವೇಳೆಗೆ ಸಂಘಟಕರು ಮತ್ತು ಅಲ್ಲಿ ಸೇರುವ ಜನರ ಮೇಲೆ ದೈಹಿಕ ಹಲ್ಲೆಗಳು ನಡೆಯುವ ಎಲ್ಲಾ ಲಕ್ಷಣಗಳು ಕಂಡು ಬಂದವು. ಇದನ್ನು ಅರಿತ ಮೋರೆ ಎರಡನೇ ಸಮ್ಮೇಳನದ ವಿಚಾರಗಳನ್ನು ಪ್ರಚುರಪಡಿಸುವ ಸಲುವಾಗಿ ಮತ್ತು ಎದುರಾಗಬಹುದಾದ ದೈಹಿಕ ಹಲ್ಲೆಗಳನ್ನು ತಡೆಯುವ ಗುರಿಯೊಂದಿಗೆ ಮುಂಬೈನಲ್ಲಿ ಕಾಂಗ್ರೆಸ್ ಸೇವಾ ದಳದ ಮಾದರಿಯಲ್ಲೇ ದಲಿತ ಯುವಕರನ್ನು ಒಳಗೊಂಡ 'ಅಂಬೇಡ್ಕರ ಸೇವಾ ದಳ' ಎನ್ನುವ ಸಂಘಟನೆಯನ್ನು ಕಟ್ಟಿದರು. ಆದರೆ ಅಂಬೇಡ್ಕರ್ ಸ್ವತಃ ಅದರ ಹೆಸರನ್ನು 'ಸಮತಾ ಸೈನಿಕಾ ದಳ' ಎಂದು ಬದಲಾಯಿಸಿ ಸೈನ್ಯದಿಂದ ನಿವೃತ್ತರಾದ ದಲಿತ ಯುವಕರು ಇದಕ್ಕೆ ಸೇರುವಂತೆ ಪ್ರೇರೇಪಣೆ ನೀಡಿದರು. ಹೀಗೆ ಎರಡನೇ ಐತಿಹಾಸಿಕ ಸಮ್ಮೇಳನದತ್ತ ಎಲ್ಲರೂ ಗಮನ ಕೇಂದ್ರೀಕರಿಸಿದರು.

ಆದರೆ 1927 ಡಿಸೆಂಬರ್ 25–26 ರಂದು ಸಮ್ಮೇಳನವನ್ನು ನಡೆಸುವ ವೇಳೆಗೆ ಮಹಾಡ್‌ನ ಆ 'ಚವ್ದಾರ್' ಸಿಹಿನೀರನ್ನು ದಲಿತರು ಕುಡಿಯುವುದರ ವಿರುದ್ಧ ನ್ಯಾಯಲಯ ನಿಷೇಧ ಹೇರಿತ್ತು. ಈ ಬಾರಿಯ ಸಮಾವೇಶದಲ್ಲಿ ಇಡೀ ಮಹಾರಾಷ್ಟ್ರದ ಎಲ್ಲಾ ಭಾಗಗಳಿಂದಲೂ ದಲಿತ ಪುರುಷರು, ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ಇಂತಹ ಸನ್ನಿವೇಶದಲ್ಲಿ ನ್ಯಾಯಾಲಯದ ಆ ನಿಷೇಧಾಜ್ಞೆಯನ್ನು ನಾವು ಉಲ್ಲಂಘಿಸಿ 'ಚವ್ದಾರ್' ಕೆರೆಯ ನೀರನ್ನು ಮುಟ್ಟಬೇಕು ಎಂಬುದು ಮೋರೆ ಮತ್ತು ಇತರೆ ಸಂಗಾತಿಗಳ ಆಗ್ರಹವಾಗಿತ್ತು. ಈ ಬಗ್ಗೆ ಸುದೀರ್ಘ ಚರ್ಚೆಗಳು ನಡೆದವು. ನಂತರದಲ್ಲಿ ಹಾಗೆ ಮಾಡದೇ ಅಂಬೇಡ್ಕರ್ ನೇತೃತ್ವದಲ್ಲೇ ಮಹಾಡ್‌ನ ಪ್ರಮುಖ ಸ್ಥಳದಲ್ಲಿಯೇ ಸಾವಿರಾರು ಜನರ ಸಮ್ಮುಖದಲ್ಲಿ ಸಾವಿರಾರು ವರ್ಷಗಳಿಂದ ಅಮಾನವೀಯ ಜಾತಿ ವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿರುವ ಆ ಮೂಲಕ ಜಾತಿ ತಾರತಮ್ಯಕ್ಕೆ ಕಾರಣವಾದ 'ಮನುಸ್ಮೃತಿ'ಯನ್ನೇ ಸುಡುವ ಮತ್ತೊಂದು ಐತಿಹಾಸಿಕ ತೀರ್ಮಾನವನ್ನು ಆ ಸಮಾವೇಶ ಕೈಗೊಂಡಿತು.

ಹೀಗೆ ಭಾರತೀಯ ಜಾತಿ ವ್ಯವಸ್ಥೆಯ ಭಾಗವಾಗಿ ಬಂದಿರುವ ಮನುಷ್ಯವಿರೋಧಿ ಅಸ್ಪೃಶ್ಯತೆ ಹಾಗೂ ತಾರತಮ್ಯಗಳ ವಿರುದ್ಧ ನಡೆದ ಈ ಎರಡು ಐತಿಹಾಸಿಕ ಹೋರಾಟಗಳಿಗೆ ನಾಯಕತ್ವ ನೀಡುವ ಮೂಲಕ ಅಂಬೇಡ್ಕರ್ ಇಡೀ ದೇಶದ ಉದ್ದಗಲಕ್ಕೂ ಹೆಸರುವಾಸಿಯಾದರೆ, ಆ ಎರಡು ಹೋರಾಟಗಳನ್ನು ವ್ಯವಸ್ಥಿತವಾಗಿ ಸಂಘಟಿಸುವ ಮೂಲಕ ಬಿ.ಆರ್. ಮೋರೆಯವರು ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ವಿರುದ್ಧದ ಚಳವಳಿಯಲ್ಲಿ ಮಹಾರಾಷ್ಟ್ರದಲ್ಲಿ ಅಂಬೇಡ್ಕರ್‌ಗೆ ತೀರ ಹತ್ತಿರವೂ ಮತು ಆತ್ಮೀಯರೂ ಆದರು.

ಈ ಐತಿಹಾಸಿಕ ಎರಡನೇ ಮಹಾಡ್ ಸತ್ಯಾಗ್ರಹದ ಬಳಿಕ ಆರ್.ಬಿ. ಮೋರೆಯವರಿಗೆ ಮುಂಬೈನ ಗಿರಣಿ ಕಾಮಗಾರ್ ಯೂನಿಯನ್ ಸಂಪರ್ಕ ಸಿಕ್ಕಿತ್ತು. ಅಲ್ಲಿಯೂ ಬ್ರಿಟಿಷ ಆಳರಸರಿಂದ ಮತ್ತು ಹತ್ತಿಗಿರಣಿ ಮಾಲೀಕರಿಂದ ಬಡ ಕಾರ್ಮಿಕರ ಮೇಲಾಗುತ್ತಿದ್ದ ತೀವ್ರ ರೀತಿ ಶೋಷಣೆ ವಿರುದ್ಧ ಮೋರೆ ತನ್ನ ಹೋರಾಟವನ್ನು ಮುಂದುವರೆಸಿದರು. ಅದರ ಜೊತೆ ಜೊತೆಯಲ್ಲೇ ಕಮ್ಯುನಿಸ್ಟರಾಗಿದ್ದುಕೊಂಡೇ ಅಂಬೇಡ್ಕರ ಜೊತೆಗೂಡಿ ಮಹಾರಾಷ್ಟ್ರದಾದ್ಯಂತ ಜಾತಿ ತಾರತಮ್ಯ ಮತ್ತು ಅಸ್ಪೃಶ್ಯತೆಯ ಹೋರಾಟಗಳನ್ನು ಮುನ್ನಡೆಸಿದರು. ವಿಶೇಷವಾಗಿ ಮಹಾರಾಷ್ಟ್ರದ ಕೊಂಕಣ(ಕರಾವಳಿ) ಪ್ರದೇಶಗಳಲ್ಲಿ ಬಿ.ಆರ್. ಮೋರೆ ನಡೆಸಿದ ರೈತ ಕಾರ್ಮಿಕ ಆಂದೋಲನಗಳು ಮತ್ತು ದಲಿತ ಚಳವಳಿಗಳು ಅಲ್ಲಿ ಶೋಷಿತ ಜನಸಮುದಾಯಗಳನ್ನು ಅವರ ಮೇಲೆ ನಡೆಯುತ್ತಿದ್ದ ಎಲ್ಲಾ ರೀತಿ ಶೋಷಣೆಗಳನ್ನು ಕೊನೆಗಾಣಿಸಲು ಸಹಾಯಕವಾದವು. ಹೀಗೆ ಆರ್.ಬಿ. ಮೋರೆಯವರು ಐತಿಹಾಸಿಕ ಮಹಾಡ್ ಚಳವಳಿಯನ್ನು ಸಂಘಟಿಸಿದ ಮತ್ತು ಆ ನಂತರವೂ ಅಂತಹ ಹತ್ತಾರು ಚಳವಳಿಗಳನ್ನು ಮುನ್ನಡೆಸಿದ ಕಾರಣಕ್ಕಾಗಿ ಒಂದೆಡೆ ಮಹಾರಾಷ್ಟ್ರದ ದಲಿತ ಚಳವಳಿಗಳಿಂದಲೂ ಆ ನಂತರ ಕಮ್ಯುನಿಸ್ಟ್ ಚಳವಳಿ ಎರಡರಿಂದಲೂ ಗೌರವಕ್ಕೆ ಪಾತ್ರರಾದರು.

ಐತಿಹಾಸಿಕ ಮಹಾಡ್ ಸತ್ಯಾಗ್ರಹ ನಡೆದು ಇದೀಗ ಒಂಬತ್ತು ದಶಕಗಳ ನಂತರವೂ ಆರ್.ಬಿ. ಮೋರೆ ಮತ್ತು ಡಾ. ಅಂಬೇಡ್ಕರ್ ನಾಯಕತ್ವದಲ್ಲಿ ನಡೆಸಿದ ಅಂತಹ ಚಳವಳಿಗಳು ಅನಿವಾರ್ಯಗಳಾಗಿವೆ. ಸಾವಿರಾರು ವರ್ಷಗಳಿಂದ ಮಾನವ ವಿರೋಧಿಯಾದ, ಜಾತಿ ವ್ಯವಸ್ಥೆಯನ್ನೇ ಪುನರುತ್ಥಾನಗೊಳಿಸುವ ಗುರಿಯನ್ನು ಹೊಂದಿದ ಪ್ರತಿಗಾಮಿ ವ್ಯವಸ್ಥೆಯೊಂದು ನಮ್ಮ ಮೇಲೆ ಸವಾರಿ ಮಾಡುತ್ತಿದೆ. ಈ ಸಂದರ್ಭದಲ್ಲಿ ಮಹಾಡ್ ನಂತಹ ನೂರಾರು ಸತ್ಯಾಗ್ರಹಗಳ ಅವಶ್ಯಕತೆ ಜರೂರಿದೆ. ಅದಕ್ಕಾಗಿ ನಮ್ಮೆಲ್ಲಾ ಸಣ್ಣ ಪುಟ್ಟ ಭಿನ್ನಾಭಿಪ್ರಾಯ, ಮತಭೇಧ ಮತ್ತು ಬಾವುಟಗಳನ್ನು ಬದಿಗಿಟ್ಟು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ತುಳಿತಕ್ಕೊಳಗಾಗದ ಎಲ್ಲಾ ಸಮುದಾಯಗಳನ್ನು ಒಂದುಗೂಡಿಸಬೇಕಿದೆ. ಆ ಮೂಲಕ ಮನುವಾದಿಗಳಿಂದ, ಬ್ರಾಹ್ಮಣವಾದಿಗಳಿಂದ ಮತ್ತು ಭೂಮಾಲೀಕ–ಬಂಡವಾಳಿಗ ಶೋಷಣಾ ವ್ಯವಸ್ಥೆಯಿಂದ ಮುಕ್ತಿ ಹೊಂದಿ ಸಾಮಾಜಿಕ, ಆರ್ಥಿಕ ಮತ್ತು ಸಮಾನ ರಾಜಕೀಯ ಸ್ವಾತಂತ್ರ್ಯಗಳನ್ನು ಗಳಿಸಬೇಕಿದೆ. ಭವಿಷ್ಯದ ನಮ್ಮ ಇಂತಹ ಎಲ್ಲಾ ಹೋರಾಟಗಳಿಗೆ ಅಂಬೇಡ್ಕರ್ ಮತ್ತು ಮೋರೆಯವರು ಜೊತೆಗೂಡಿ ನಡೆಸಿದ 'ಮಹಾಡ್ ಸತ್ಯಾಗ್ರಹ' ಎಂಬ ಬಂಡಾಯ ಒಂದು ಸ್ಫೂರ್ತಿಯಾಗಲಿ. •



ಮಹಾಡ್ ಸತ್ಯಾಗ್ರಹದ ಸ್ವಾಗತ ಸಮಿತಿ–ಎಡದಿಂದ ನಾಲ್ಕನೇಯವರು ಡಾ. ಅಂಬೇಡ್ಕರ್, ನಿಂತಿರುವವರಲ್ಲಿ ಬಲದಲ್ಲಿರುವವರು ಕಾಂ. ರಾಮಚಂದ್ರ ಬಾಬಾಜಿ ಮೋರೆ.

ಬ್ಯಾರಿಸ್ಟರ್ ಆದ ಮೇಲೂ...........

ಪುಟ 11 ರಿಂದ

ಚಿಂತಾಜನಕ ಸ್ಥಿತಿಯನ್ನು ಕಂಡು, ಅಲ್ಲಿ ಸೇರಿದ್ದವರೆಲ್ಲಾ ಪುರುಷ, ಮಹಿಳೆ, ಮಕ್ಕಳಾದಿಯಾಗಿ ಸರ್ವರೂ ದುಃಖಿಸಲಾರಂಭಿಸಿದರು. ಆ ಅಪಘಾತದಿಂದಾಗಿ ನನಗೆ ಅನೇಕ ಗಾಯಗಳಾಗಿದ್ದವು. ಜೊತೆಗೆ ನನ್ನ ಒಂದು ಕಾಲೂ ಕೂಡ ಮುರಿದಿತ್ತು. ಪರಿಣಾಮವಾಗಿ ನಾನು ಮುಂದೆ ಎಷ್ಟೋ ದಿನಗಳವರೆಗೆ ಚಲನಹೀನನಾಗಿ ಹಾಸಿಗೆ ಹಿಡಿಯಬೇಕಾಯಿತು. ಇದೆಲ್ಲ ಹೇಗೆ ಸಂಭವಿಸಿತೋ, ಯಾಕೆ ಘಟಿಸಿತೋ ನನಗೆ ಅರ್ಥವಾಗಲೇ ಇಲ್ಲ. ಆ ಕಮಾನಿನ ಮೇಲಿಂದ ಟಾಂಗಾಗಳು ಪ್ರತಿದಿನವೂ ಹತ್ತಾರು ಸಲ ಹೋಗಿ ಬರುತ್ತಿದ್ದವು. ಆದರೆ ಒಮ್ಮೆಯೂ ಒಬ್ಬನೇ ಒಬ್ಬ ಟಾಂಗಾವಾಲಾ ಕೂಡ ಅಲ್ಲಿ ಅಪಘಾತಕ್ಕೆ ಒಳಗಾಗಿರಲಿಲ್ಲವಂತೆ.

ಬಹಳ ತನಿಖೆ ಮಾಡಿ ಕೇಳಿದ ನಂತರ ಗೊತ್ತಾದ ಸತ್ಯ ಸಂಗತಿಗಳು ಇವು. ರೈಲ್ವೆ ಸ್ಟೇಶನ್‌ನಿಂದ ನನ್ನನ್ನು ಮಹಾರ್‌ವಾಡಾಕ್ಕೆ ಕರೆದೊಯ್ಯಲು ತಡವಾದುದ್ದಕ್ಕೆ ಕಾರಣ, ಯಾವೊಬ್ಬ ಟಾಂಗಾವಾಲಾ ಕೂಡ ನನ್ನಂಥ ಅಸ್ಪೃಶ್ಯ ಪ್ಯಾಸೆಂಜರ್‌ನನ್ನು ತನ್ನ ಟಾಂಗಾದಲ್ಲಿ ಕರೆದೊಯ್ಯಲು ಸಿದ್ಧನಿರಲಿಲ್ಲ. ಅದು ಅವನ ಘನತೆಗೆ ಕುಂದು ತರುವುದೆಂದು ಭಾವಿಸಿದ್ದನು. ಆದರೆ ಮಹಾರ್‌ರು ನನ್ನನ್ನು ತಮ್ಮ ಓಣಿಗೆ ಕಾಲ್ನಡಿಗೆಯಲ್ಲಿ ಕರೆದುಕೊಂಡು ಹೋಗಲು ಬಯಸಲಿಲ್ಲ. ಅದು ಅವರ ಸ್ವಾಭಿಮಾನಕ್ಕೆ ಧಕ್ಕೆಯುಂಟು ಮಾಡುವ ವಿಷಯವಾಗಿತ್ತು. ಹಾಗಾಗಿ ಟಾಂಗಾವಾಲಾ ಮತ್ತು ಮಹಾರ್‌ರ ನಡುವೆ ಸಂಧಾನವೇರ್ಪಟ್ಟಿತ್ತು. ಆ ರಾಜಿಸೂತ್ರದ ಪ್ರಕಾರ ಟಾಂಗಾವಾಲಾ ತನ್ನ ಟಾಂಗಾವನ್ನು ಬಾಡಿಗೆಗೆ ಕೊಡಲು ಸಿದ್ಧನಾಗಿದ್ದನೇ ಹೊರತು, ಅದನ್ನು ತಾನೇ ನಡೆಸಲು ತಯಾರು ಇರಲಿಲ್ಲ. ಬೇಕಿದ್ದರೆ, ಮಹಾರ್‌ರು ಟಾಂಗಾ ತೆಗೆದುಕೊಂಡು ಹೋಗಿ ಅದನ್ನು ನಡೆಸಲು ಬೇರೆ ಯಾರನ್ನಾದರೂ ನೇಮಿಸಿಕೊಳ್ಳಬಹುದಾಗಿತ್ತು. ಮಹಾರ್‌ರಿಗೆ ಇದು ಬಹು ಕಾರ್ಯಸಾಧುವಾದ ಪರಿಹಾರವೆನಿಸಿತ್ತು. ಆದರೆ ತಮ್ಮ ಸ್ವಾಭಿಮಾನ ಹಾಗೂ ಆತ್ಮಘನತೆಗಿಂತಲೂ ಆ ಟಾಂಗಾದಲ್ಲಿ ಪ್ರಯಾಣಿಸುವ ಪ್ಯಾಸೆಂಜರ್‌ನ ಸುರಕ್ಷಿತತೆ ಹೆಚ್ಚು ಮಹತ್ವದ್ದು ಎಂಬುವುದನ್ನು ಮರೆತಿದ್ದರು. ಸುರಕ್ಷಿತತೆಯ ಬಗ್ಗೆಯೇ ಅವರೇನಾದರೂ ಹೆಚ್ಚಿಗೆ ಚಿಂತಿಸಿದ್ದರೆ, ನನ್ನನ್ನು ಬಹು ಕಾಳಜಿಯಿಂದ ಗುರಿ ತಲುಪಿಸಬಲ್ಲ ಟಾಂಗಾವಾಲಾನನ್ನು ಹುಡುಕಲು ಯತ್ನಿಸಬಹುದಾಗಿತ್ತು. ನಿಜವೆಂದರೆ, ಮಹಾರ್‌ರಲ್ಲಿ ಯಾರೊಬ್ಬರಿಗೂ ಟಾಂಗಾ ಚಲಾಯಿಸಲು ಬರುತ್ತಿರಲಿಲ್ಲ. ಯಾಕೆಂದರೆ, ಅದು ಅವರ ವೃತ್ತಿಯಾಗಿರಲಿಲ್ಲ. ಹಾಗಾಗಿ, ತಮ್ಮಲ್ಲಿಯ ಯಾರೋ ಒಬ್ಬನನ್ನು ಹಿಡಿದು ಆ ಟಾಂಗಾ ಚಲಾಯಿಸುವ ಕೆಲಸಕ್ಕೆ ನೇಮಿಸಿದ್ದರು. ಆ ವ್ಯಕ್ತಿ ಅದರಲ್ಲೇನು ಮಹಾ ಎಂದು ಭಾವಿಸಿದ್ದೇ ಲಗಾಮು ಕೈಗೆತ್ತಿಕೊಂಡಿದ್ದನು. ಆದರೆ ಟಾಂಗಾ ಮುಂಚಲಿಸಲಾರಂಭಿಸುತ್ತಿದ್ದಂತೆಯೇ ತನ್ನ ಹೊಣೆಗಾರಿಕೆಯ ಭಾರದ ಅರಿವಾಗಿ ಭೀತನಾಗಿಅಳುಕುತ್ತಲೇ ಚಲಾಯಿಸುತ್ತಿದ್ದ. ಟಾಂಗಾ ಅವನ ನಿಯಂತ್ರಣ ತಪ್ಪಿತು. ಅಥವಾ ಭೀತಿಯಿಂದ ತತ್ತರಿಸಿದ ಅವನು ನಿಯಂತ್ರಿಸುವ ಯತ್ನವನ್ನೇ ಕೈಬಿಟ್ಟಿದ್ದನು. ನನ್ನ ಘನತೆಯನ್ನು ಕಾಪಾಡುವ ಭರದಲ್ಲಿ ಚಾಳಿಸ್‌ಗಾಂವ್‌ನ ಮಹಾರ್‌ರು ನನ್ನ ಜೀವವನ್ನೇ ಅಪಾಯಕ್ಕೊಡ್ಡಿದ್ದರು. ಒಬ್ಬ ಮಾಮೂಲಿ ಹಿಂದೂ ಟಾಂಗಾವಾಲಾ, ಕನಿಷ್ಠ ಕೂಲಿ ಆಳಿನ ಸ್ಥಿತಿಯಲ್ಲಿದ್ದರೂ, ಒಬ್ಬ ಬ್ಯಾರಿಸ್ಟರ್ ಆ್ಯಟ್ ಲಾ ಪದವೀಧರನಷ್ಟು ಉಚ್ಚಸ್ಥಾನಮಾನದ ಅಸ್ಪೃಶ್ಯನಿಗಿಂತಲೂ ಶ್ರೇಷ್ಠನೆಂದೂ, ಹೆಚ್ಚು ಘನವಂತನೆಂದೂ ಭಾವಿಸುತ್ತಾನೆ ಎಂಬುದು ನನ್ನ ಅರಿವಿಗೆ ಬಂದದ್ದು ಆಗಲೇ. •

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಎಡಪಂಥ

ಇಂದು ಎಡಪಂಥ ಮತ್ತು ಬಲಪಂಥ ಎಂಬ ಪದಗಳು ದೇಶದ ರಾಜಕೀಯ ಮಾತ್ರವೇ ಅಲ್ಲದೆ ಸಾಂಸ್ಕೃತಿಕ ಚರ್ಚೆ, ವಾದ -ವಿವಾದಗಳಲ್ಲಿ ಮತ್ತೆ ಮತ್ತೆ ಕೇಳಬರುತ್ತಿವೆ. ನಾವು ಎಡಪಂಥೀಯರೂ ಅಲ್ಲ, ಬಲಪಂಥೀಯರೂ ಅಲ್ಲ ಎಂದು ಸಾಂಸ್ಕೃತಿಕ ರಂಗದಲ್ಲಿನ ಗಣನೀಯ ಸಂಖ್ಯೆಯ ಜನರು ಹೇಳಲಾರಂಭಿಸುವುದನ್ನು ಕಾಣುತ್ತೇವೆ. ಮತ್ತೂ ಕೆಲವರು ನಾವು ಎಡಪಂಥೀಯರೂ ಅಲ್ಲ ಬಲ ಪಂಥೀಯರೂ ಅಲ್ಲ ಮಧ್ಯಮ ಪಂಥೀಯರೂ ಅಲ್ಲ ಎನ್ನುವುದೊಂದು ಹೆಮ್ಮೆಯ ವಿಷಯವೆಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಇವುಗಳನ್ನು ನೋಡಿದಾಗ ಇತ್ತೀಚಿನ ದಿನಮಾನದಲ್ಲಿ ಚಳುವಳಿಗಳ ಇತಿಹಾಸದ ಬಗ್ಗೆ ಮತ್ತು ಸಾಮಾಜಿಕ ಹಾಗೂ ರಾಜಕೀಯ ಬದಲಾವಣೆಯ ಪರಿಕಲ್ಪನೆಗಳ ಬಗ್ಗೆ ತಿಳಿದುಕೊಳ್ಳಬೇಕಾದ ಅಗತ್ಯವನ್ನು ಎತ್ತಿತೋರಿಸುತ್ತಿದೆ.

ಸಾಮಾಜಿಕ-ರಾಜಕೀಯ ಪರಿಕಲ್ಪನೆಗಳ ಆಧಾರದಲ್ಲಿ ಜಗತ್ತಿನಲ್ಲಿ ಕಮ್ಯೂನಿಸ್ಟ್ ಚಳುವಳಿಗಳು, ಸಮಾಜವಾದಿಗಳು, ಸಮಾಜದ ಬದಲಾವಣೆಯನ್ನು ಬಯಸುವವರು, ಇತರ ಅನೇಕ ಪ್ರಗತಿಪರರನ್ನೆಲ್ಲಾ ಎಡಪಂಥವೆಂದು ಪರಿಗಣಿಸುವ ಪರಿಪಾಠ ಬೆಳೆದಿದೆ. ಸಮಾಜದ ರಚನೆಯಲ್ಲಿ ತೀವ್ರ ಬದಲಾವಣೆಯನ್ನು ತರಲು, ಮುಖ್ಯವಾಗಿ ಜಾತಿ ಪದ್ಧತಿಯನ್ನು ಮತ್ತು ಅಸ್ಪೃಶ್ಯತೆಯನ್ನು ತೊಡೆಯಲು, ಅದರಿಂದ ದಮನಕ್ಕೊಳಗಾದ ದಲಿತರು, ಮಹಿಳೆಯರು ಮೊದಲಾದವರಿಗಾಗಿ ಜೀವಮಾನ ಪೂರ್ತಿ ಶ್ರಮಿಸಿದ ಡಾ. ಅಂಬೇಡ್ಕರ್ ಯಾವ ಪಂಥಕ್ಕೆ ಸೇರಿದವರು? ಸಮಾಜ ಬದಲಾವಣೆಯ ತಹತಹವನ್ನು ಹೊತ್ತ ಇವರು ಎಡಪಂಥವಲ್ಲದೇ ಮತ್ತಾವ ಪಂಥವಾಗಿರಲು ಸಾಧ್ಯ?



ಜಿ.ಎನ್.ನಾಗರಾಜ್

ಡಾ.ಬಾಬಾಸಾಹೇಬ್ ಅಂಬೇಡ್ಕರ್ ರವರ ವ್ಯಕ್ತಿತ್ವದ ಹರಹು ಬಹಳ ವಿಶಾಲವಾದದ್ದು, ಹಲವು ರಂಗಗಳನ್ನು ವ್ಯಾಪಿಸಿದ ದೈತ್ಯ ಪ್ರತಿಭೆ ಅದು. ಅವರ ಜೀವನದ ಪ್ರಧಾನ ಗುರಿ ದಲಿತರಿಗೆ ಸಮಾನತೆ ಮತ್ತು ಜಾತಿ ವ್ಯವಸ್ಥೆಯ ನಾಶ ಎಂದರೂ ಕೂಡ ಅವರು ರೈತರ, ಕಾರ್ಮಿಕರ, ಮಹಿಳೆಯರ ಮೊದಲಾದ ಎಲ್ಲ ದಮನಿತರ ಸಲುವಾಗಿ ಅವರ ಗಮನ ಮತ್ತು ಶ್ರಮ ಗಣನೀಯವಾದದ್ದು. ಅವರ ಅಧ್ಯಯನದ ವ್ಯಾಪ್ತಿಯಂತೂ ಬಹುಮುಖೀ ಆಯಾಮಗಳನ್ನು ಹೊಂದಿದ್ದು. ಅವರ ವ್ಯಕ್ತಿತ್ವವನ್ನು ಅದರ ಸಮಗ್ರತೆಯಲ್ಲಿ ಅರ್ಥ ಮಾಡಿಕೊಳ್ಳುವುದು ಅವರೆಲ್ಲ ಸಾಧನೆಗಳನ್ನೂ ಜನರ ಮುಂದಿಡುವುದು ಅವರ ಬಗ್ಗೆ ಇಂದು ಸಾಮಾನ್ಯವಾಗಿ ಜನ ಮಾನಸದಲ್ಲಿರುವುದಕ್ಕಿಂತ ಭಿನ್ನವಾದ ಚಿತ್ರಣವನ್ನು ಮೂಡಿಸುತ್ತದೆ.

ಅಂಬೇಡ್ಕರ್ ರವರು ಜಾತಿ ವಿನಾಶದ ಘೋಷಣೆಯ ಮೂಲಕ ಭಾರತದಲ್ಲಿ ಮಹತ್ತರ ಸಾಮಾಜಿಕ ಬದಲಾವಣೆಯ ಕಹಳೆಯೂದಿದವರು. ವಿಶ್ವದಲ್ಲಿಯೇ ರಾಜಪ್ರಭುತ್ವವನ್ನು ನಾಶ ಮಾಡಿ ಪ್ರಜಾಪ್ರಭುತ್ವದ ಸ್ಥಾಪನೆಯ ಹರಿಕಾರವಾದ ಫ್ರೆಂಚ್ ಕ್ರಾಂತಿಯ ಪ್ರಧಾನ ಘೋಷಣೆಯಾದ "ಸ್ವಾತಂತ್ರ್ಯ, ಸಮಾನತೆ, ಸೋದರತ್ವ" ಅಂಬೇಡ್ಕರ್ ರವರ ಮೇಲೆ ಬಹಳ ಪ್ರಭಾವ ಬೀರಿತ್ತು. ಈ ಘೋಷಣೆಗಳು ಮತ್ತದರ ಹಿಂದಿರುವ ಮೂಲಭೂತ ತತ್ವಗಳೇ ಅಂಬೇಡ್ಕರ್ ರವರ ಎಲ್ಲ ಚಿಂತನೆ, ಬರಹ ಮತ್ತು ಹೋರಾಟದ ಹಿಂದೆ ಇವೆ ಎಂಬುದು ಸರ್ವ ವೇದ್ಯವಾದ ಸಂಗತಿ. ಅದರಲ್ಲಿಯೂ ಅವರು ಈ ಮೂರು ತತ್ವಗಳು ಪ್ರತ್ಯೇಕವಲ. ಅವು ಒಂದರೊಡನೊಂದು ಬೇರ್ಪಡಿಸಲಾಗದಂತಹ ಸಂಬಂಧ ಹೊಂದಿರುವಂತಹವು ಎಂಬ ಬಗ್ಗೆ ಹೊಸ ಒಳನೋಟಗಳನ್ನು ನೀಡಿದ್ದಾರೆ. ಈ ವಿಚಾರಗಳ ಬೆಳಕಿನಲ್ಲಿ ಸೋದರತ್ವದ ಭಾವನೆಯೇ ಇಲ್ಲದ ಜಾತಿ ವಿಭಜಿತ ಭಾರತದಲ್ಲಿ ಜಾತಿ ವ್ಯವಸ್ಥೆಯನ್ನು ನಿರ್ಮೂಲಗೊಳಿಸದೇ ಸಮಾನತೆ ಮತ್ತು ಸ್ವಾತಂತ್ರ್ಯ ಎರಡೂ ಅಸಾಧ್ಯ ಎಂಬ ತೀರ್ಮಾನಕ್ಕೆ ಬಂದರು. ಅದನ್ನು ಸಾಧಿಸುವ ವಿವಿಧ ಮಾರ್ಗಗಳನ್ನು ತಮ್ಮ ಜೀವನದ ಪ್ರಧಾನ ಧಾರೆಯಾಗಿಸಿದರು. ಇನ್ನು ಸಂವಿಧಾನ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸಿ ಫ್ರೆಂಚ್ ಕ್ರಾಂತಿಯ ಘೋಷವಾಕ್ಯಕ್ಕೆ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಸೇರಿಸಿ ಸಂವಿಧಾನದ ಒಂದು ಮೂಲ ಧ್ಯೇಯವಾಗಿಸಿದ್ದು ಕೂಡ ಇಂತಹ ಕ್ರಿಯೆಯ ಭಾಗ. ಹೀಗೆ ಡಾ. ಅಂಬೇಡ್ಕರ್ ರವರು ನಮ್ಮ ದೇಶದ ಪ್ರಮುಖ ಎಡಪಂಥೀಯ ಚಿಂತಕ ಮತ್ತು ಹೋರಾಟಗಾರರಲ್ಲೊಬ್ಬರಾಗಿ ಹೊರಹೊಮ್ಮಿದರು. ಅಂದು ದೇಶದಲ್ಲಿದ್ದ ಇತರ ಎಡ ಪಂಥೀಯ ಚಿಂತನೆ ಮತ್ತು ರಾಜಕಾರಣದ ನಡುವೆ ಇದ್ದ ಸಾಮಾನ್ಯ ಅಂಶಗಳು ಮತ್ತು ಭಿನ್ನತೆಗಳನ್ನು, ಭಾರತದ ಜನ ರಾಜಕಾರಣದ ಮೇಲೆ ಅದರ ಪರಿಣಾಮಗಳನ್ನು ಪರಿಶೀಲಿಸುವುದು ಈ ಲೇಖನದ ಉದ್ದೇಶ.

ಭಾರತದಲ್ಲಿ ಎಡಪಂಥೀಯ ವಿಚಾರಗಳು ಇಪ್ಪತ್ತನೆಯ ಶತಮಾನದ ಎರಡನೆಯ ದಶಕದಲ್ಲಿ ಪ್ರವೇಶಿಸಿದವು. ಅವುಗಳಲ್ಲಿ ಪ್ರಧಾನ ಧಾರೆಗಳು ಕಮ್ಯೂನಿಸ್ಟ್, ಸಮಾಜವಾದಿ ಮತ್ತು ಅಂಬೇಡ್ಕರ್ ವಿಚಾರಗಳು ಇವುಗಳಲ್ಲಿ ಮುಖ್ಯವಾದವು. ಕಮ್ಯೂನಿಸ್ಟ್ ಚಳುವಳಿ 1922 ರಲ್ಲಿ ಮೊತ್ತ ಮೊದಲ ಬಾರಿಗೆ ದೇಶಕ್ಕೆ ಸಂಪೂರ್ಣ ಸ್ವಾತಂತ್ರ್ಯ ಬೇಕೆಂದು ಒತ್ತಾಯಿಸಿತು. ಮತ್ತು ಸ್ವಾತಂತ್ರ್ಯ ಬೇಕಾದ್ದು ಯಾರಿಗೆ ಎಂಬ ಪ್ರಶ್ನೆಯನ್ನೂ ಕಮ್ಯೂನಿಸ್ಟ್ ಪಕ್ಷ ಎತ್ತಿತು. ಬ್ರಿಟಿಷರನ್ನು ಭಾರತದಿಂದ ತೊಲಗಿಸಬೇಕು ಅದಕ್ಕಾಗಿ ಹೋರಾಡುವ ಜೊತೆ ಜೊತೆಗೇ ಜನರನ್ನು ಸಂಕಟಕ್ಕೀಡು ಮಾಡುತ್ತಿರುವ ಪಾಳೆಯಗಾರೀ ಪಟ್ಟಭದ್ರರು ಮತ್ತು ಜಾತಿ ವ್ಯವಸ್ಥೆಯ ವಿರುದ್ಧವಾಗಿ ಸೆಣೆಸಬೇಕೆಂಬ ಅಜೆಂಡಾವನ್ನು ದೇಶದ ಮುಂದೆ ಮಂಡಿಸಿತು. ಆಗ ಕಾಂಗ್ರೆಸ್ ಸ್ವಾತಂತ್ರ್ಯ ಬೇಕೆಂಬ ಪ್ರಶ್ನೆಯನ್ನೇ ಎತ್ತಿರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯದ ಆಡಳಿತದಲ್ಲಿಯೇ ಈ ದೇಶದ ಜನಗಳ ಅಭಿಪ್ರಾಯಕ್ಕೂ ಮನ್ನಣೆ ನೀಡುವ ಅವಕಾಶ ಕಲ್ಪಿಸಬೇಕೆಂಬುದಷ್ಟೆ ಅವರ ಅಂದಿನ ಬೇಡಿಕೆಯಾಗಿತ್ತು. ಅಲ್ಲಿಂದ 1930 ರವರೆಗೆ ನಿರಂತರವಾಗಿ ಪ್ರತಿ ವರ್ಷ ಕಾಂಗ್ರೆಸ್ ಅಧಿವೇಶನ ನಡೆಯುವಾಗೆಲ್ಲ ಅದರ ಮುಂದೆ ಕಮ್ಯೂನಿಸ್ಟ್ ಪಕ್ಷ ಪ್ರತಿಭಟನೆ ನಡೆಸಿತು. 1928ರಲ್ಲಿ ಅದು 30 ಸಾವಿರ ಜನರ ಬೃಹತ್ ಪ್ರತಿಭಟನೆಯಾಗಿ ಪರಿಣಮಿಸಿತು. ಪ್ರತಿಭಟನಾಕಾರರಿಂದ ಕಾಂಗ್ರೆಸ್ ನಾಯಕರು ತಪ್ಪಿಸಿಕೊಂಡು ಸಭಾಭವನಕ್ಕೆ ಹೋಗುವುದೇ ಕಷ್ಟಕರವಾಯಿತು.

ಕೊನೆಗೆ 1929 ರ ಕೊನೆಯಲ್ಲಿ ಕಾಂಗ್ರೆಸ್ ಸಂಪೂರ್ಣ ಸ್ವಾತಂತ್ರ್ಯ ಬೇಕೆಂದು ನಿರ್ಣಯ ಮಾಡಿತು. 1930ರ ಜನವರಿ 26 ರಂದು ಮೊದಲ ಬಾರಿಗೆ ಸಂಪೂರ್ಣ ಸ್ವಾತಂತ್ರ್ಯ ದಿನಾಚರಣೆಯನ್ನು ದೇಶಾದ್ಯಂತ ಆಚರಿಸುವ ಮೂಲಕ ಘೋಷಿಸಿತು. ದೇಶದೆಲ್ಲೆಡೆ ತ್ರಿವರ್ಣ ಧ್ವಜವನ್ನು ಏರಿಸುವ ಮೂಲಕ ಉತ್ಸಾಹಪೂರ್ಣವಾಗಿ ಜನರು ಅದನ್ನು ಆಚರಿಸಿದರು. ಇದು ದೇಶದ ಜನತೆ ಸ್ವಾತಂತ್ರ್ಯಕ್ಕಾಗಿ ಹಸಿದಿದ್ದುದನ್ನೂ, ನಾಯಕತ್ವದಿಂದ ಅಂತಹ ಘೋಷಣೆ ಬರಬೇಕೆಂದು ಹಂಬಲಿಸಿತ್ತುದನ್ನೂ ತೋರಿಸುತ್ತದೆ. ಹೀಗೆ ತನ್ನ ಆರಂಭದ ದಿನಗಳಿಂದಲೇ, ಇನ್ನೂ ಸಣ್ಣ ಶಕ್ತಿಯಾಗಿದ್ದಾಗಲೇ ಕಮ್ಯುನಿಸ್ಟ್ ಪಕ್ಷ ದೇಶದ ಜನರ ನಾಡಿಮಿಡಿತವನ್ನು ಅರ್ಥ ಮಾಡಿಕೊಂಡು ಅದರ ಜೊತೆಗೆ ಹೆಜ್ಜೆ ಹಾಕುತ್ತಿತ್ತು. ಅಂದು ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಚಳುವಳಿಯ ನಾಯಕತ್ವ ವಹಿಸಿದ್ದನ್ನು ಪರಿಗಣನೆಗೆ ತೆಗೆದುಕೊಳ್ಳುತ್ತಲೇ ನಿರಂತರವಾಗಿ ಕಾಂಗ್ರೆಸ್ ಜನ ಸಾಮಾನ್ಯರ ಹಿತಗಳಿಗಾಗಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಟೀಕಿಸುತ್ತಾ ಬಂದಿತು. ಗಾಂಧೀಜಿಯವರನ್ನು ಕಠಿಣವಾಗಿ ಟೀಕಿಸುವುದರಲ್ಲಿ ಕಮ್ಯೂನಿಸ್ಟರನ್ನು ಮೀರಿಸಿದ್ದು ಅಂಬೇಡ್ಕರ್ ಮಾತ್ರ ಎನ್ನಬಹುದು.

ಒಂದು ಮುಖ್ಯ ವ್ಯತ್ಯಾಸವೆಂದರೆ ಅಂಬೇಡ್ಕರ್ ರವರು ಕಾಂಗ್ರೆಸ್ ನಿಂದ ದೂರ ನಿಂತು ಟೀಕೆಯ ಸುರಿಮಳೆ ಸುರಿಸುತ್ತಿದ್ದರೆ ಕಮ್ಯೂನಿಸ್ಟರು ಕಾಂಗ್ರೆಸ್ ಅಧಿವೇಶನಗಳ ಎದುರಿಗೆ ನಿಂತು ಈ ಕೆಲಸ ಮಾಡುತ್ತಿದ್ದರು. ಕಾಂಗ್ರೆಸ್ ನ ಮಹಾಧಿವೇಶನಗಳ ಪ್ರತಿನಿಧಿಗಳು ಒಳಗೆ ಗಾಂಧೀಜಿಯವರನ್ನು ಪ್ರಶ್ನಿಸಲು ಹೂರಣ ಒದಗಿಸುತ್ತಿದ್ದರು. ಇದ-ಕ್ಕೆ ಹತ್ತು ಹಲವು ನಿದರ್ಶನಗಳನ್ನು ಕೊಡಬಹುದು. 1921 ರಲ್ಲಿ ಕಾಂಗ್ರೆಸ್ ನ ಜೊತೆ ಮೊತ್ತ ಮೊದಲ ಮುಖಾಮುಖಿಯಲ್ಲಿಯೇ ಕಮ್ಯೂನಿಸ್ಟರ ಈ ಪಾತ್ರ ಸ್ಪಷ್ಟವಾಯಿತು.

'ಕಾಂಗ್ರೆಸ್ ರಾಷ್ಟ್ರೀಯ ಹಿತವೆಂಬ ಉನ್ನತ ಗುರಿಯ ಹೆಸರಿನಲ್ಲಿ ವ್ಯಾಪಾರಿಗಳ ಮತ್ತು ಕೈಗಾರಿಕಾ ಮಾಲೀಕರ ಹಿತಗಳನ್ನು ರಕ್ಷಿಸುವುದನ್ನು ಬಿಟ್ಟರೆ ಮಾತ್ರ ಅದು ಜನ ಸಾಮಾನ್ಯರ ನೆಚ್ಚಿಗೆಯನ್ನು ಪಡೆಯಲು ಸಾಧ್ಯ. ಕಾಂಗ್ರೆಸ್ ನಲ್ಲಿ ಪ್ರತಿಭಾವಂತ ವಕೀಲರ ಬದಲಾಗಿ ಈಗ ಈ ವ್ಯಾಪಾರಿಗಳು, ಕೈಗಾರಿಕಾ ಮಾಲೀಕರು ತುಂಬಿಹೋಗಿದ್ದಾರೆ. ಬ್ರಿಟಿಷ್ ಸೈತಾನರ ಬದಲಾಗಿ ಇವರನ್ನು ಪಟ್ಟದಲ್ಲಿ ಕೂರಿಸುವುದೇ ಕಾಂಗ್ರೆಸ್ ಇಂದಿನ ತಂತ್ರವಾಗಿದೆ.'

ಅಂದು ಕಾಂಗ್ರೆಸ್ ಪಕ್ಷ ಅಸಹಕಾರ ಚಳುವಳಿಯ ಹೋರಾಟದ ಅಲೆಯ ಮೇಲೆ ತೇಲುತ್ತಿರುವಾಗ ಆಗಿನ್ನೂ ಕಣ್ಣು ಬಿಡುತ್ತಿದ್ದ ಕಮ್ಯೂನಿಸ್ಟ್ ಪಕ್ಷ ಮಾಡಿದ ಈ ಕಟು ವಿಮರ್ಶೆ ಕಾಂಗ್ರೆಸ್ ನ ನಾಯಕರ ಕಣ್ಣು ಕೆಂಪಗಾಗಿಸಿದ್ದು ಆಶ್ಚರ್ಯಕರವೇನಲ್ಲ. ಅಂದಿನ ಭಾರತದ ಮತ್ತೊರ್ವ ಎಡಪಂಥೀಯ ಚಳುವಳಿಯಾದ ಸಮಾಜವಾದಿಗಳು ಕಾಂಗ್ರೆಸ್ ನ ಭಾಗವಾಗಿ ಅದರಲ್ಲಿನ ಎಡ ಧಾರೆಯಾಗಿದ್ದರು. ಅವರು ಗಾಂಧೀಜಿಯವರನ್ನು ಭಾರತದ ಜನ ನಾಯಕರೆಂದೇ ಗುರುತಿಸುತ್ತಿದ್ದರು. ಸ್ವಾತಂತ್ರ್ಯಾನಂತರ ಮಾತ್ರವೇ ಅವರು ಕಾಂಗ್ರೆಸ್ ನ ಕಟು ಟೀಕಾಕಾರರಾದರು. ಆಗಲೂ ಅವರ ಗುರಿ ನೆಹರೂರವರೇ ಹೊರತು ಗಾಂಧೀಜಿಯವರಲ್ಲ. ಕಾಂಗ್ರೆಸ್ ಅನ್ನು ಭಾರತದ ಜನ ಸಾಮಾನ್ಯರ ಪಕ್ಷವಲ್ಲ ಕೇವಲ ಒಂದು ಸಣ್ಣ ಗುಂಪನ್ನು ಪ್ರತಿನಿಧಿಸುತ್ತದೆ. ಗಾಂಧೀಜಿ ಈ ಗುಂಪಿನ ಹಿತರಕ್ಷಣೆ ಮಾಡುತ್ತಿದ್ದಾರೆ ಎಂದು ಪರಿಗಣಿಸುವುದರಲ್ಲಿ ಕಮ್ಯೂನಿಸ್ಟರು ಹಾಗೂ ಅಂಬೇಡ್ಕರ್‌ರವರಲ್ಲಿ ಸಮಾನ ಮನೋಭಾವವನ್ನು ಕಾಣಬಹುದು. ಗಾಂಧೀಜಿಯವರ ಬಗ್ಗೆ ಅಪಾರ ಗೌರವ ವ್ಯಕ್ತವಾಗುತ್ತಿದ್ದ ಸಮಯದಲ್ಲಿಯೆ ಇಂತಹ ಟೀಕೆ ಮಾಡಿದವರು ಈ ಎರಡು ಚಿಂತನಾ ಧಾರೆಗಳು ಮಾತ್ರವೇ. ಗಾಂಧೀಜಿಯವರ ಶ್ರೀಮಂತಪರ ಪ್ರತಿಗಾಮೀ ಸ್ವರೂಪವನ್ನು ಬಹಳ ಚೆನ್ನಾಗಿ ಬಿಚ್ಚಿಟ್ಟ ಕೆಲವೇ ಕೃತಿಗಳಲ್ಲಿ ಅಂಬೇಡ್ಕರ್ ರವರ ಅನೇಕ ಬರಹಗಳಂತೆಯೇ ಕಮ್ಯೂನಿಸ್ಟರಾದ ರಜನಿ ಪಾಮೇ ದತ್ ರವರ 'ಇಂಡಿಯಾ ಟುಡೇ', ಇ.ಎಂ.ಎಸ್ ನಂಬೂದರಿಪಾದ್‌ರವರ 'ಮಹಾತ್ಮರೂ ಅವರ ವಾದವೂ', 'ಏ ಹಿಸ್ಟರಿ ಆಫ್ ಇಂಡಿಯನ್ ಫ್ರೀಡಮ್ ಸ್ಟ್ರಗಲ್' ಮತ್ತು ಇತರನೇಕ ಕಮ್ಯೂನಿಸ್ಟರ ಬರಹಗಳನ್ನು ನೋಡಬಹುದು.

(ಮುಂದುವರಿಯುವುದು – ಈ ದೀರ್ಘ ಲೇಖನ ಈ ಸಂಚಿಕೆಯಿಂದ ಆರಂಭಿಸಿ 5 ಭಾಗಗಳಲ್ಲಿ ಪ್ರಕಟವಾಗಲಿದೆ)



1937ರಲ್ಲಿ ಅಂಬೇಡ್ಕರ್ ಸ್ಥಾಪಿಸಿದ ಇಂಡಿಪೆಂಡೆಂಟ್ ಲೇಬರ್ ಪಾರ್ಟಿಯ ಸಹಯೋಗಿಗಳೊಂದಿಗೆ

ಎಡಪಂಥ ಎಂದರೇನು?

ಎಡ ಮತ್ತು ಬಲ ಎಂಬ ಪರಿಕಲ್ಪನೆಗಳನ್ನು ಸೂಚಿಸುವ ಪದ ಬಳಕೆ ಆರಂಭವಾಗಿದ್ದು ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ. ಅಂದು ರಾಜಪ್ರಭುತ್ವ ಎಸಗುತ್ತಿರುವ ಅನ್ಯಾಯ ಮತ್ತು ತೆರಿಗೆ ಹೇರಿಕೆಯ ವಿರುದ್ಧ ದಂಗೆಯೆದ್ದು ರಾಜಪ್ರಭುತ್ವವನ್ನೇ ಕಿತ್ತು ಹಾಕುವ ಸಂದರ್ಭದಲ್ಲಿ ಅಲ್ಲಿಯ ರಾಜ ಸಭೆಯಲ್ಲಿ ಈ ಬಗ್ಗೆ ಬಿರುಸಿನ ಚರ್ಚೆಗಳು ನಡೆಯುವಾಗ ಅಲ್ಲಿಯ ಪ್ರತಿನಿಧಿಗಳಲ್ಲಿ ರಾಜ ಪ್ರಭುತ್ವವನ್ನು ಬೆಂಬಲಿಸುತ್ತಿರುವವರು ಬಲಗಡೆ ಕುಳಿತುಕೊಳ್ಳಲಾರಂಭಿಸಿದರು. ಏಕೆಂದ-ರೆ ಪ್ರಜಾಪ್ರಭುತ್ವಕ್ಕಾಗಿ ಒತ್ತಾಯಿಸುವವರು, 'ಸ್ವಾತಂತ್ರ್ಯ, ಸಮಾನತೆ, ಸೋದರತ್ವ' ತತ್ವಗಳನ್ನು ಪ್ರತಿಪಾದಿಸುವವರು ಕೆಳವರ್ಗಗಳಾದ ವಿಭಾಗಗಳಿಂದ ಬಂದವರೂ ಆಗಿದ್ದು ಅವರು ಬಹಳ ಗದ್ದಲ ಮಾಡುತ್ತಾರೆ. ಆದ್ದರಿಂದ ಅವರ ಜೊತೆ ಕುಳಿತುಕೊಳ್ಳಲಾಗುವುದಿಲ್ಲ ಎಂದು ರಾಜ ಕುಟುಂಬ ಮತ್ತು ಕುಲೀನ ಶ್ರೀಮಂತ ವರ್ಗದವರು ಭಾವಿಸಿದರು. ಅದರಿಂದಾಗಿ ಪ್ರಜಾಪ್ರಭುತ್ವವನ್ನು ಬಯಸುವವರಿಗೆ ಎಡಭಾಗ ಮಾತ್ರವೇ ಉಳಿಯಿತು.

ಮುಂದೆ ಪತ್ರಿಕೆಗಳಲ್ಲಿ ಮತ್ತು ಸಾಮಾಜಿಕ, ರಾಜಕೀಯ ರಂಗಗಳಲ್ಲಿ ಸಮಾಜ ಮತ್ತು ವ್ಯವಸ್ಥೆಯ ಅನ್ಯಾಯಗಳ ವಿರುದ್ಧವಾಗಿರುವವರು, ಸಮಾಜದಲ್ಲಿ ಆಮೂಲಾಗ್ರವಾಗಿ ಬದಲಾವಣೆ ಬಯಸುವವರು ಎಡ ಪಂಥ ಎಂದು ಮತ್ತು ವ್ಯವಸ್ಥೆಯಲ್ಲಿ ಅನ್ಯಾಯವೇನಿಲ್ಲ ಎಂದು ಅದನ್ನು ಸಮರ್ಥಿಸುವವರು ಬಲಪಂಥ ಎಂದೂ ಪ್ರಚಲಿತವಾಗಿದೆ.

ಅಸ್ಪೃಶ್ಯತೆಯ ಗೋಡೆಗಳನ್ನು ಅಕ್ಷರಶಃ ಕೆಡವಿದ ತಮಿಳುನಾಡಿನ ಆಂದೋಲನ

–ಎನ್.ನಾಗರಾಜ್

9 ವರ್ಷಗಳ ಹಿಂದೆ ರಚನೆಗೊಂಡ 'ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ರಂಗ' (TNUEF) ಸಂಘಟನೆ ನಡೆಸಿರುವ ಅಸ್ಪೃಶ್ಯತಾ ವಿರೋಧಿ ಹಾಗೂ ಜಾತಿ–ತಾರತಮ್ಯಗಳ ವಿರುದ್ಧದ ಹೋರಾಟಗಳು ಇಡೀ ತಮಿಳುನಾಡಿನಾದ್ಯಂತ ದೊಡ್ಡ ಪ್ರಮಾಣದಲ್ಲಿ ಜನತೆಯ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿವೆ. ಅಲ್ಲಿನ ರಾಜ್ಯ ಸರ್ಕಾರವು ಕೂಡ ದಲಿತರ ಹಕ್ಕುಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡುವಲ್ಲಿ ಇದರ ಪಾತ್ರ ಮಹತ್ವದ್ದಾಗಿದೆ.



ಊಥಪುರಂ ಅಸ್ಪೃಶ್ಯತಾ ಗೋಡೆಯನ್ನು ಕೆಡವಿದ ದಿನ, ಸಿಪಿಐ(ಎಂ)ನ ಅಂದಿನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್‌ರವರು ಕೂಡ ಉಪಸ್ಥಿತರಿದ್ದರು.

ಕಳೆದ ಸುಮಾರು ಎರಡು ದಶಕಗಳಿಂದ ತಮಿಳುನಾಡು ರಾಜ್ಯದಲ್ಲಿನ ಅಸ್ಪೃಶ್ಯತಾ ಆಚರಣೆಗಳು, ಜಾತಿ–ತಾರತಮ್ಯ ಹಾಗೂ ಜಾತಿ–ದೌರ್ಜನ್ಯಗಳ ವಿರುದ್ಧ, ಸಿಪಿಐ (ಎಂ) ಇತರೆ ಹಲವು ವರ್ಗ ಹಾಗೂ ಸಾಮೂಹಿಕ ಸಂಘಟನೆಗಳು ಜೊತೆ–ಗೂಡಿ ಹೋರಾಟಗಳನ್ನು ನಡೆಸಿಕೊಂಡು ಬಂದಿದೆ. ಇದರ ಫಲಿತಾಂಶವಾಗಿಯೇ ಎಲ್ಲಾ ಸಮಾನ ಮನಸ್ಕ ಸಂಘಟನೆಗಳು ಒಂದಾಗಿ ಮೇ 2007 ರಲ್ಲಿ 'ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನಾ ರಂಗ' (TNUEF) ಎಂಬ ಸಂಘಟನೆಯು ರಚನೆಯಾಯಿತು.

ಹೆಸರೇ ಸೂಚಿಸುವಂತೆ ಇದು ಒಂದು ವಿಶಾಲವಾದ ತಳಹದಿಯಲ್ಲಿ ರಚನೆಗೊಂಡ ವೇದಿಕೆಯಾಗಿದೆ. ಇದರ ಮೂಲಕ ಬ್ಯಾಂಕಿಂಗ್ ಹಾಗೂ ವಿಮಾ ವಲಯಗಳ ನೌಕರ ಸಂಘಟನೆಗಳು, ರಾಜ್ಯ ಹಾಗೂ ಕೇಂದ್ರ ಸರ್ಕಾರಿ ನೌಕರರ ಸಂಘಟನೆಗಳು, ರೈಲ್ವೆ, ಸಾರಿಗೆ, ದೂರ ಸಂಪರ್ಕ ಹಾಗೂ ವಿದ್ಯುಚ್ಛಕ್ತಿ ವಲಯಗಳಲ್ಲಿನ ನೌಕರ ಸಂಘಟನೆಗಳು ಕೂಡ ಸೇರಿದಂತೆ ಹಲವಾರು ವರ್ಗ ಮತ್ತು ಸಾಮೂಹಿಕ ಸಂಘಟನೆಗಳು, ವಿದ್ಯಾರ್ಥಿ–ಯುವಜನ–ರೈತ–ಕಾರ್ಮಿಕ ಸಂಘಟನೆಗಳು, ವೈಯಕ್ತಿಕ ಪ್ರಗತಿಪರರು, ಚಿಂತಕರು, ಸಾಹಿತಿಗಳು, ಬರಹಗಾರರು, ಈ ವೇದಿಕೆಯು ರೂಪಿಸುವ ಹೋರಾಟಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ, ರಾಜ್ಯ ಮಟ್ಟದ 15 ದಲಿತ ಸಂಘಟನೆಗಳು, ಜಿಲ್ಲಾ ಮಟ್ಟದ 45 ದಲಿತ ಸಂಘಟನೆಗಳು ಈ ವೇದಿಕೆ ರೂಪಿಸುವ 'ಅಸ್ಪೃಶ್ಯತಾ ನಿವಾರಣೆ' ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

2007 ರಿಂದ ಈ ಸಂಘಟನೆ ನಡೆಸಿರುವ ಅಸ್ಪೃಶ್ಯತಾ ವಿರೋಧಿ ಹಾಗೂ ಜಾತಿ–ತಾರತಮ್ಯಗಳ ವಿರುದ್ಧದ ಹೋರಾಟಗಳು ಇಡೀ ತಮಿಳುನಾಡಿನಾದ್ಯಂತ ದೊಡ್ಡ ಪ್ರಮಾಣದಲ್ಲಿ ಜನತೆಯ ಗಮನ ಸೆಳೆಯುವಲ್ಲಿ ಯಶಸ್ವಿಯಾಗಿದೆ. ಅಲ್ಲಿನ ರಾಜ್ಯ ಸರ್ಕಾರವು ಕೂಡ ದಲಿತರ ಹಕ್ಕುಗಳನ್ನು ಗಂಭೀರವಾಗಿ ಪರಿಗಣಿಸುವಂತೆ ಮಾಡುವಲ್ಲಿ ಇದರ ಪಾತ್ರ ಮಹತ್ವದ್ದಾಗಿದೆ.

ಬೆಚ್ಚಿ ಬೀಳಿಸಿದ ಸಮೀಕ್ಷೆ: ಅಸ್ಪೃಶ್ಯತೆ, ಜಾತಿ–ತಾರತಮ್ಯಗಳ ಭಯಂಕರ ರೂಪ ಬೆಳಕಿಗೆ

ತಮಿಳುನಾಡು ದಲಿತರ ಮೇಲೆ ಪಾಶವಿಕ ದೌರ್ಜನ್ಯಗಳ ಭಯಂಕರ ಇತಿಹಾಸವನ್ನು ಹೊಂದಿದೆ. 1969ರಲ್ಲಿ ಕಿಲ್ವೆನ್‌ಮಣಿ ಗ್ರಾಮದ 44 ದಲಿತ ಕುಟುಂಬಗಳನ್ನು ಜೀವಂತ ಸುಟ್ಟು ಭಸ್ಮಗೊಳಿಸಿದ ಹೃದಯವಿದ್ರಾವಕ ಪ್ರಕರಣ ಇಡೀ ದೇಶದ ಗಮನ ಸೆಳೆದಿತ್ತು. TNUEF ರಚನೆಗೊಂಡ ತಕ್ಷಣ ಮಾಡಿದ ಕಾರ್ಯವೆಂದರೆ, ಅಸ್ಪೃಶ್ಯತಾ ಆಚರಣೆಗಳ ಕುರಿತಂತೆ, ರಾಜ್ಯದ ಎಲ್ಲಾ 32 ಜಿಲ್ಲೆಗಳಲ್ಲಿನ ಸಾವಿರಾರು ಗ್ರಾಮಗಳಲ್ಲಿ ಸಮೀಕ್ಷೆ ನಡೆಸಿದ್ದು. ಸಮೀಕ್ಷೆಯ ವರದಿ ಬೆಚ್ಚಿ ಬೀಳಿಸುವಂತಿತ್ತು. ಸ್ವಾತಂತ್ರ್ಯ ಬಂದು ಆರು ದಶಕಗಳು ಕಳೆದರೂ ಸಹ, ಪ್ರಜಾಪ್ರಭುತ್ವ, ಸಮಾನತೆ, ಸಾಮಾಜಿಕ ನ್ಯಾಯಗಳನ್ನು ಎತ್ತಿ ಹಿಡಿಯುವ ಸಂವಿಧಾನ ಸೆಕ್ಷನ್ 16 ಮತ್ತು 17 ಕಲಂಗಳಲ್ಲಿ ಅಸ್ಪೃಶ್ಯತಾ ಆಚರಣೆಗಳನ್ನು ರದ್ದುಗೊಳಿಸಿದ್ದರೂ ಕೂಡ, ಜೊತೆಗೆ ಶ್ರೇಷ್ಟ ಸಾಮಾಜಿಕ ಸುಧಾರಕರಾದ ಪೆರಿಯಾರ್ ರಾಮಸ್ವಾಮಿ ಹೋರಾಟ ನಡೆಸಿದ್ದ ತಮಿಳುನಾಡಿನಲ್ಲಿ ಸುಮಾರು 160ಕ್ಕೂ ಹೆಚ್ಚು ರೀತಿಯ ಅಮಾನವೀಯ, ಪಶು ಸ್ವಭಾವದ, ಪೈಶಾಚಿಕ ಕೃತ್ಯಗಳು, ಹಿಂಸಾಚಾರಗಳು ಆಚರಣೆಯಲ್ಲಿದ್ದದ್ದು ಬೆಳಕಿಗೆ ಬಂದವು.

ಇವುಗಳಲ್ಲಿ ಪ್ರಮುಖವಾದದ್ದು 'ಅಸ್ಪೃಶ್ಯತಾ ಗೋಡೆಗಳು'. ಇವು ಅಸ್ಪೃಶ್ಯತಾ ಆಚರಣೆಗಳನ್ನು ಯಾವುದೇ ಕಾನೂನಿಗೂ ಸೊಪ್ಪು ಹಾಕದೆ, ರಾಜಾರೋಷದಿಂದ ನಡೆಸಿಕೊಂಡು ಹೋಗಲು ನೆರವಾಗಿವೆ ಎಂಬುದು ಈ ಸಮೀಕ್ಷೆಗಳಲ್ಲಿ ಕಂಡು ಬಂದ ಒಂದು ಪ್ರಮುಖ ಸಂಗತಿ. ಮೇಲ್ಜಾತಿಯವರು ತಮ್ಮ ಮತ್ತು ದಲಿತರ ಕೇರಿಗಳ ಮಧ್ಯೆ ಅಕ್ಷರಶಃ ಗೋಡೆಗಳನ್ನು ನಿರ್ಮಿಸಿ ದಲಿತರು ತಮ್ಮ ಪ್ರದೇಶಗಳತ್ತ ಸುಳಿಯಲೂ ಆಗದಂತೆ ನೋಡಿಕೊಂಡಿದ್ದರು.

ಊಥಪುರಂನಿಂದ ಆರಂಭ

TNUEF ಈ ಅಸ್ಪೃಶ್ಯತಾ ಗೋಡೆಗಳನ್ನು ಕೆಡವಿ ಹಾಕುವ ಹೋರಾಟಕ್ಕೆ ಜನರನ್ನು ಅಣಿನೆರೆಸಿತು. ಮಧುರೈ ಜಿಲ್ಲೆಯ ಊಥಪುರಂ ಗ್ರಾಮ ಹಾಗೂ ಕೊಯಂಬತ್ತೂರು ಜಿಲ್ಲೆಯ ಪೆರಿಯಾರ್ ನಗರದಲ್ಲಿ ನಿರ್ಮಿಸಲಾಗಿದ್ದ 'ಅಸ್ಪೃಶ್ಯತಾ ಗೋಡೆ'ಗಳನ್ನು ಉರುಳಿಸಲಾಯಿತು. ಹಾಗೆಯೇ ವೆಲ್ಲೂರು ನಗರದಲ್ಲಿ ಜನಜಂಗುಳಿ ಪ್ರದೇಶದಲ್ಲಿ ಅಡ್ಡಲಾಗಿ ನಿರ್ಮಿಸಲಾಗಿದ್ದ ದೊಡ್ಡ ಕಬ್ಬಿಣದ ಗೇಟ್ ಅನ್ನು ಕೂಡ ತೆಗೆಸಲಾಯಿತು. TNUEF ನ ಬೃಹತ್ ಹೋರಾಟದಿಂದಾಗಿ ಈ ಕಬ್ಬಿಣದ ಗೇಟನ್ನು ಸರ್ಕಾರವೇ ತೆಗೆಯಬೇಕಾದ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿತ್ತು. ಇದೀಗ ದಲಿತರು ಮೇಲ್ಜಾತಿಯ ಜನರು ವಾಸಿಸುವ ಪ್ರದೇಶಗಳ ಹೋಣಿಗಳಲ್ಲಿ ಸರಾಗವಾಗಿ ತಿರುಗಾಡಲು ಅವಕಾಶ ಕಲ್ಪಿಸಿಕೊಡಲಾಗಿದೆ.

ಊಥಪುರಂ ಅಸ್ಪೃಶ್ಯತಾ ಗೋಡೆಯನ್ನು ಕೆಡವಿದ ದಿನ, ಸಿಪಿಐ(ಎಂ)ನ ಅಂದಿನ ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್‌ರವರು ಕೂಡ ಉಪಸ್ಥಿತರಿದ್ದರು. ಇದು ಊಥಪುರಂ ಜನರ ಉತ್ಸಾಹವನ್ನು ಇಮ್ಮಡಿಗೊಳಿಸಿತ್ತು. ಸುಮಾರು 2 ದಶಕಗಳಿಂದ ಅಡ್ಡಲಾಗಿ ನಿರ್ಮಿಸಿದ್ದ ಅಸ್ಪೃಶ್ಯತಾ ಗೋಡೆಯನ್ನು ಕೆಡವಿ ದಲಿತರ ಹಾದಿಯನ್ನು ಸುಗಮಗೊಳಿಸಿದ್ದು, ಪ್ರಬಲ ಮೇಲ್ಜಾತಿಯ ಗುಂಪಿನವರಲ್ಲಿ ಆಕ್ರೋಶ ಉಂಟು ಮಾಡಿತು. ಸರಕಾರದ ನಿಷ್ಕ್ರಿಯತೆ ಮತ್ತು ಮೇಲ್ಜಾತಿಗಳ ಹತೋಟಿಯಲ್ಲಿರುವ ಮಾಧ್ಯಮಗಳು ಇದಕ್ಕೆ ತುಪ್ಪ ಸುರಿದವು.

ಇದರಿಂದಾಗಿ ಉಥಪುರಂನ ಗೋಡೆ ನೆಲಸಮವಾದರೂ ಆ ಮಾರ್ಗದಲ್ಲಿ ಕಸ ಗುಡ್ಡೆಹಾಕುವುದು, ಕಲ್ಲು–ಮಣ್ಣು ಹಾಕುವುದು, ಹೀಗೆ ಹತ್ತು ಹಲವಾರು ರೀತಿಯಲ್ಲಿ ಅಡ್ಡಿಪಡಿಸಲಾರಂಭಿಸಿದರು. ಇದರ ವಿರುದ್ಧ ಪೊಲೀಸ್ ದೂರು ದಾಖಲಿಸಿದಾಗ, ಪೊಲೀಸರು ದಲಿತರಿಗೆ ಕಿರುಕುಳ ಕೊಟ್ಟು ಇವರನ್ನೇ ಅಪರಾಧಿಗಳನ್ನಾಗಿ ಪ್ರಕರಣದಲ್ಲಿ ನೊಂದಾಯಿಸಿದರು. ಇದು ವಾತಾವರಣವನ್ನು ಪ್ರಕ್ಷುಬ್ಧಗೊಳಿಸಿ ಗಲಭೆ–

ಪುಟ 16 ಕ್ಕೆ

ಆಂಧ್ರ ಪ್ರದೇಶದಲ್ಲಿ ಅಸ್ಪೃಶ್ಯತೆ ವಿರುದ್ಧ ನೇರಕಾರ್ಯಾಚರಣೆಯ ಅನುಭವಗಳು

–ವಸಂತರಾಜ್ ಎನ್.ಕೆ.

ದಲಿತರ ಸಾಮಾಜಿಕ ದಮನ ಮತ್ತು ಆರ್ಥಿಕ ಶೋಷಣೆ ನಿವಾರಿಸುವುದು ನಮ್ಮ ಸಂವಿಧಾನದ ಉದ್ದೇಶಗಳಲ್ಲೊಂದು. ಇದಕ್ಕೆ ಯಥಾಸ್ಥಿತಿ ಕಾಪಾಡಬಯಸುವ ಆಳುವ ವರ್ಗಗಳ ತೀವ್ರ ಪ್ರತಿರೋಧ ಮತ್ತು ಅವುಗಳ ವಿರುದ್ಧ ಹೋರಾಡಬೇಕಾದ ದಲಿತ ಚಳುವಳಿಯ ಮಿತಿ ದೌರ್ಬಲ್ಯಗಳು ಕಾರಣ. ಇವುಗಳನ್ನು ಮೀರಲು ಆಂಧ್ರ ಪ್ರದೇಶದ "ಕುಲ ವಿವಕ್ಷ ವ್ಯತಿರೇಕ ಪೋರಾಟ ಸಂಘಂ" ಕೆ.ವಿ.ಪಿ.ಎಸ್–ಜಾತಿತಾರತಮ್ಯದ ವಿರುದ್ಧ ಹೋರಾಟ ಸಂಘಟನೆ) ನಡೆಸಿದ ಪ್ರಯತ್ನಗಳ ಅನುಭವದ ಬಗ್ಗೆ ಅದರ ನಾಯಕರೂ ಸಿಪಿಐ(ಎಂ) ಪಿ.ಬಿ. ಸದಸ್ಯರೂ ಆದ ಕಾ. ಬಿ.ವಿ.ರಾಘವುಲು (ಮಾರ್ಕ್ಸಿಸ್ಟ್, ಎಪ್ರಿಲ್–ಜೂನ್ 2013 ಸಂಚಿಕೆಯಲ್ಲಿ ಪ್ರಕಟವಾದ) ಲೇಖನವೊಂದರಲ್ಲಿ ವಿಶ್ಲೇಷಿಸಿದ್ದಾರೆ. ಅಲ್ಲಿ ಅವರು ಪ್ರಮುಖವಾಗಿ ಮೂರು ವಿಷಯಗಳ – ಎಸ್.ಸಿ./ಎಸ್.ಟಿ. ಕಮಿಶನ್‌ಗಾಗಿ, ಅಸ್ಪೃಶ್ಯತೆಯ ವಿರುದ್ಧ ನೇರ ಕಾರ್ಯಾಚರಣೆಗಳ ಮತ್ತು ಎಸ್.ಸಿ./ಎಸ್.ಟಿ. ಉಪಯೋಜನೆಗಾಗಿ– ಹೋರಾಟಗಳ ಅನುಭವ ದಾಖಲಿಸಿದ್ದಾರೆ. ಅವುಗಳಲ್ಲಿ ಅಸ್ಪೃಶ್ಯತೆಯ ವಿರುದ್ಧ ನೇರಕಾರ್ಯಾಚರಣೆ–ಯ ಬಗೆಗಿನ ಅನುಭವದ ದಾಖಲೆಯ ಭಾವಾನುವಾದ ಇಲ್ಲಿದೆ.

1999 ಅಕ್ಟೋಬರ್‌ನಲ್ಲಿ ಕೆ.ವಿ.ಪಿ.ಎಸ್. ಪೂರ್ವಭಾವಿಯಾಗಿ ಒಂದು ಸಮೀಕ್ಷೆ ಕೈಗೊಂಡಿತು. ಇದರ ಬಾಗವಾಗಿ 15 ದಿನಗಳಲ್ಲಿ 11 ಸಾವಿರ ದಲಿತ ಕಾಲೋನಿಗಳಿಗೆ ಕೆ.ವಿ.ಪಿ.ಎಸ್. ಭೇಟಿ ಇತ್ತರು. ಆಂಧ್ರ ಪ್ರದೇಶದ ಹೆಚ್ಚಿನ ದಲಿತ ಕಾಲೊನಿಗಳಲ್ಲಿ ವಿವಿಧ ರೀತಿಗಳಲ್ಲಿ ಸಾಮಾನ್ಯವಾಗಿ ಅಂದುಕೊಂಡಿದ್ದಕ್ಕಿಂತ ವ್ಯಾಪಕವಾಗಿ ಭೀಕರವಾಗಿಅಸ್ಪೃಶ್ಯತೆ ಆಚರಣೆ ನಡೆ–ಯುತ್ತಿದೆ ಎಂಬುದು ಈ ಸಮೀಕ್ಷೆಯಲ್ಲಿ ಕಂಡುಕೊಂಡ ಸತ್ಯ. ಇದರ ಆಧಾರದ ಮೇಲೆ ಅಸ್ಪೃಶ್ಯತೆ ಆಚರಣೆ ಬಗ್ಗೆ ವಿವರವಾದ ಸಮೀಕ್ಷೆ ನಡೆಸಲು ಸರಕಾರ ಒಂದು ಏಕಸದಸ್ಯ ಕಮಿಶನ್ ನೇಮಿಸಬೇಕೆಂಬ ಹೋರಾಟ ನಡೆಯಿತು. ಮಾರ್ಚ್ 2001ರಲ್ಲಿ ನ್ಯಾ. ಪುನ್ನಯ್ಯ ಅವರ ನಾಯಕತ್ವದಲ್ಲಿ ಕಮಿಶನ್ ನೇಮಕವಾಯಿತು. ಅದು ವ್ಯಾಪಕ ಸಾರ್ವಜನಿಕ ತನಿಖೆಯ ನಂತರ ಸಲ್ಲಿಸಿದ ವಿವರವಾದ (1996 ಪುಟಗಳ) ವರದಿ ಕೆ.ವಿ.ಪಿ.ಎಸ್. ಸಮೀಕ್ಷೆಯನ್ನು ಪುಷ್ಟೀಕರಿಸಿತು. ಕಮಿಶನ್ 42 ಶಿಫಾರಸುಗಳನ್ನು ಸಹ ಮಾಡಿತು.

ಕೆ.ವಿ.ಪಿ.ಎಸ್. 2006ರಲ್ಲಿ ಅಸ್ಪೃಶ್ಯತೆಯ ವಿರುದ್ಧ ನೇರ ಕಾರ್ಯಾಚರಣೆಯನ್ನು ಆರಂಭಿಸಿತು. ಏಪ್ರಿಲಿನಲ್ಲಿ ರಂಗಾರೆಡ್ಡಿ ಜಿಲ್ಲೆಯಲ್ಲಿ 13 ದಿನಗಳ ಕಾಲ ಕಾ. ರಾಘವುಲು ಮತ್ತು 25 ಯುವ ಕಾರ್ಯಕರ್ತರೊಂದಿಗೆ ಸೈಕಲ್‌ಯಾತ್ರೆ ನಡೆಸಿದರು. ಯಾತ್ರೆ 950 ಕಿ.ಮಿ. ಕ್ರಮಿಸಿ 152 ಹಳ್ಳಿಗಳನ್ನು ತಲುಪಿತು. 69 ಹಳ್ಳಿಗಳಲ್ಲಿ ದೇವಾಲಯ ಪ್ರವೇಶ, ಎರಡು–ಗ್ಲಾಸುಗಳ ಪದ್ಧತಿ ರದ್ದತಿ ಮತ್ತಿತರ ನೇರ ಕಾರ್ಯಾಚರಣೆಯ ಕ್ರಮಗಳನ್ನು ಕೈಗೊಳ್ಳಲಾಯಿತು. 2007ರಲ್ಲಿ 10 ದಿನಗಳ ಕಾಲ ದೊಡ್ಡ ಪ್ರಮಾಣದ ಕಾರ್ಯಕರ್ತರೊಂದಿಗೆ ಇನ್ನೊಂದು ರಾಜ್ಯ ವ್ಯಾಪ್ತಿಯ ಸೈಕಲ್‌ಯಾತ್ರೆ ನಡೆಸಲಾಯಿತು. ಈ ಯಾತ್ರೆ 41 ಸಾವಿರ ಕಿ.ಮಿ. ಕ್ರಮಿಸಿ 8336 ಹಳ್ಳಿಗಳನ್ನು ಮುಟ್ಟಿತು. ಈ ಯಾತ್ರೆಯಲ್ಲೂ ಅಸ್ಪೃಶ್ಯತೆಯ ವಿರುದ್ಧ ನೇರ ಕಾರ್ಯಾಚರಣೆಯನ್ನು ಕೈಗೊಳ್ಳಲಾಯಿತು.

ಈ ಎರಡೂ ನೇರ ಕಾರ್ಯಾಚರಣೆಗಳಿಗೂ ರಾಜ್ಯದಲ್ಲಿ ಬಹಳಷ್ಟು ಸ್ಪಂದನ ದೊರಕಿತು. ರಾಜ್ಯದ ಗಮನ ಸೆಳೆಯಿತು. ಮೆಚ್ಚುಗೆ, ಟೀಕೆ ಎರಡೂ ಬಂದವು. ಕೆಲವರು ಶಾಂತಿಯಿಂದ ಇದ್ದ ಹಳ್ಳಿಗಳಲ್ಲಿ ನಮ್ಮ ನೇರ ಕಾರ್ಯಾಚರಣೆ ಘರ್ಷಣೆಗಳನ್ನು ಹುಟ್ಟು ಹಾಕಿತು ಎಂದು ಟೀಕಿಸಿದರು. ಕೆಲವು ಹಳ್ಳಿಗಳಲ್ಲಿ ಕೆಲವು ದಲಿತರು ನಾವು ಹಳ್ಳಿ ಪ್ರವೇಶಿಸುವ ಅಗತ್ಯ ಇಲ್ಲ ಎಂದು ತಡೆದರು. ಸವರ್ಣೀಯರು ನಮ್ಮ ಜತೆ ಯಾವುದೇ ತಾರತಮ್ಯವಿಲ್ಲದೆ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಎಲ್ಲಾ ಜಾತಿಗಳು ಶಾಂತಿ–ಸೌಹಾರ್ದತೆಯಿಂದ ಬದುಕುತ್ತಿವೆ ಎನ್ನುತ್ತಿದ್ದರು. ನಾವು ಹೆಚ್ಚಿನ ತನಿಖೆ ನಡೆಸಿದಾಗ ಇವರನ್ನು ಭೂಮಾಲಕರು ಕಳಿಸಿದ್ದರು ಎಂದು ತಿಳಿಯಿತು. ಹೆಚ್ಚಾಗಿ ದಲಿತ ಮಹಿಳೆಯರು ಸಾಮಾಜಿಕ ದಬ್ಬಾಳಿಕೆಯ ನಿಜದ ಬಗ್ಗೆ ಹೇಳುತ್ತಿದ್ದರು. ಪುರುಷರು–ಅದರಲ್ಲೂ ವಯಸ್ಕರು–ಕಲ್ಯಾಣ ಯೋಜನೆಗಳು, ಭೂಮಿ, ಸ್ಮಶಾನದ ಸಮಸ್ಯೆ ಬಗ್ಗೆ ಹೆಚ್ಚು ಹೇಳುತ್ತಿದ್ದರು. ಸರಕಾರದ ಬಗ್ಗೆ ದೂರು–ಟೀಕೆ ಮಾಡಿದರೆ ಮೇಲ್ಜಾತಿಯವರಿಗೆ ಏನೂ ಸಮಸ್ಯೆ ಇಲ್ಲ. ಸಾಮಾಜಿಕ ದಬ್ಬಾಳಿಕೆ ಬಗ್ಗೆ ದೂರು–ಟೀಕೆ ಮಾಡಿದರೆ ಅವರು ಕೆರಳಿ ಸಂಘರ್ಷಗಳು ಆಗಬಹುದು. ಇಂತಹ ಸಂಘರ್ಷಗಳಲ್ಲಿ ದಲಿತರೇ ಸೋಲುವುದು ಎಂಬುದು ಅವರ ಆತಂಕವಾಗಿತ್ತು.

ದಲಿತರನ್ನು ಕೆಲವು ನಿರ್ದಿಷ್ಟ ದೌರ್ಜನ್ಯಗಳ ವಿರುದ್ಧ ಸಂಘಟಿಸುವುದು ಸಾಧ್ಯವಿತ್ತು.ಇದನ್ನು ಕೆ.ವಿ.ಪಿ.ಎಸ್. ಮತ್ತು ಇತರ ದಲಿತ ಸಂಘಟನೆಗಳು ಮಾಡುತ್ತಲೇ ಬಂದಿವೆ. ಆದರೆ ಅಸ್ಪೃಶ್ಯತೆ ಮತ್ತಿತರ ದೈನಂದಿನ ಸಾಮಾಜಿಕ ದಬ್ಬಾಳಿಕೆ ವಿರುದ್ಧ ದಲಿತರನ್ನು ಹೋರಾಡಲು ಸಿದ್ಧಗೊಳಿಸುವುದು ಕಷ್ಟದ ಕೆಲಸವಾಗಿತ್ತು. ಇಂತಹ ಪ್ರತಿರೋಧಗಳಿಗೆ ಪ್ರೇರೇಪಿಸಿದಾಗ "ಇವತ್ತು ನಿಮ್ಮ ಬೆಂಬಲ ಇದೆ. ನಾವು ಪ್ರತಿರೋಧ ತೋರುತ್ತೇವೆ. ಆದರೆ ನಾಳೆ ನೀವು ಹೊರಟು ಹೋದ ನಂತರ ಮೇಲ್ಜಾತಿಯವರ ದಾಳಿಯನ್ನು ನಾವು ಎದುರಿಸುವುದು ಹೇಗೆ?' ಎಂಬುದು ಅವರ ಪ್ರಶ್ನೆ ಆಗಿತ್ತು. ನಾವು ನಿಮ್ಮ ಜತೆ ಯಾವಾಗಲೂ ಇರುತ್ತೇವೆ ನಿಲ್ಲುತ್ತೇವೆ ಎಂಬ ಭರವಸೆ ಮೂಡಿಸಿದಲ್ಲಿ ಮಾತ್ರ ಇದು ಸಾಧ್ಯವಾಯಿತು. ಕೆ.ವಿ.ಪಿ.ಎಸ್. ಅಥವಾ ಇತರ ದಲಿತ ಸಂಘಟನೆಗಳ ಪ್ರಜ್ಞಾವಂತ ಕಾರ್ಯಕರ್ತನೊಬ್ಬ ಹಳ್ಳಿಯಲ್ಲಿ ಇದ್ದಲ್ಲಿ ಮಾತ್ರ ಇದು ಸಾಧ್ಯವಾಗಿದ್ದು. ಉಳಿದ ಕಡೆ ಅಸ್ಪೃಶ್ಯತೆ ಮತ್ತಿತರ ಸಾಮಾಜಿಕ ದಬ್ಬಾಳಿಕೆ ವಿರುದ್ಧ ಪ್ರಚಾರಾಂದೋಲನ ಮಾತ್ರ ನಡೆಸಲು ಸಾಧ್ಯವಾಯಿತು. ಹಳ್ಳಿಯಲ್ಲಿ ಈಗಾಗಲೇ

ಪುಟ 16 ಕ್ಕೆ

ಫೆಬ್ರುವರಿ 23, 2007ರಂದು ಅಸ್ಪೃಶ್ಯತೆಯ ವಿರುದ್ಧ ಅನಿರ್ದಿಷ್ಟ ಕಾಲದ ಉಪವಾಸ ಸತ್ಯಾಗ್ರಹದ ಆರಂಬದಲ್ಲಿ ರಾಘವುಲು ಮತ್ತು ಇತರ ಕೆವಿಪಿಎಸ್ ಮುಖಂಡರು



ದಲಿತ ಬಂಡವಾಳವಾದ

ಕೆ. ಪ್ರಕಾಶ್

ದಲಿತ್ ಕ್ಯಾಪಿಟಲಿಸಂ ಕೆಲವು ದಲಿತ ಉದ್ಯಮಿಗಳನ್ನು ಕಾಲಚಕ್ರದಲ್ಲಿ ಫೋರ್ಬ್ಸ್–೫೦೦ ಅಥವಾ ಫಾರ್ಚೂನ್–೫೦೦ ಪಟ್ಟಿಗೋ ಸೇರಿಸಬಹುದು. ಅಥವಾ ಇನ್ನೊಂದಷ್ಟು ಕೈಬೆರಳೆಣಿಕೆಯಷ್ಟು ಜನರಿಗೆ ಮಧ್ಯಂತರ ಸ್ಥಾನಮಾನಗಳು ಕಲ್ಪಿಸಬಹುದು. ಆದರೆ ಬಂಡವಾಳಶಾಹಿಯ ಉತ್ಪಾದನಾ ನಿಯಮದ ಪ್ರಕಾರ ಬಹುಸಂಖ್ಯಾತ ದಲಿತ ಕಾರ್ಮಿಕರು ಶೋಷಣೆಗೆ ಒಳಗಾಗುವುದನ್ನು ಇದು ತಪ್ಪಿಸುವುದಿಲ್ಲ. ಬಂಡವಾಳಶಾಹಿ ಸ್ವಭಾವತಃ ಅಸಮಾನತೆಯ ವಿವಿಧ ತಾರತಮ್ಯಗಳ ವ್ಯವಸ್ಥೆ. ಆದ್ದರಿಂದ ದಲಿತ ಬಂಡವಾಳಶಾಹಿ ಜಾತಿ ಅಸಮಾನತೆ ತಾಡತಮ್ಯ ನಿವಾರಿಸಬಹುದು. ಭಾರತದ ಬಹುಸಂಖ್ಯಾತ ದಲಿತರ ಸಾಮಾಜಿಕ ಸಮಸ್ಯೆಗಳನ್ನು, ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಹುದು ಎನ್ನುವುದು ವಂಚನೆಯ ಮಾತೇ ಸರಿ. ಇದು ದಲಿತರ ಕ್ರಾಂತಿಕಾರಿ ಪರ್ಯಾಯವನ್ನು ತಡೆಯುವ ಆಳುವ ವರ್ಗಗಳ ಹುನ್ನಾರ ಎನ್ನುವಂತೆ ಕಾಣುತ್ತಿದೆ.

‘ದಲಿತ ಮುಖ್ಯಮಂತ್ರಿಗಳಾಗಿದ್ದಾರೆ, ದಲಿತ ಅಂಬಾನಿಗಳು ಯಾಕಾಗಬಾರದು?’, ‘ನಾವು ಉದ್ಯೋಗ ಕೇಳುವವರಲ್ಲ, ಉದ್ಯೋಗ ಕೊಡುವವರು’ ಎಂಬಿತ್ಯಾದಿ ಘೋಷಣೆಗಳನ್ನು ದಲಿತ ಬಂಡವಾಳದಾರರು ಎಂದೆನಿಸಿಕೊಂಡವರು ಮತ್ತು ದಲಿತ ಬಂಡವಾಳದಾರರಾಗಬೇಕೆಂದು ಬಯಸುವವರು ಕೂಗುತ್ತಿದ್ದಾರೆ. ಸುಮಾರು 100 ಕ್ಕೂ ಹೆಚ್ಚು ದಲಿತ ಬಿಲಿಯಾಧಿಪತಿಗಳನ್ನು ಸದಸ್ಯರಾಗಿ ಹೊಂದಿರುವ ‘ದಲಿತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ’ (DICCI)ಯ ಅಧ್ಯಕ್ಷ ಮಿಲಿಂದ್ ಕಾಂಬ್ಳೆ, ಜಾತಿಯನ್ನು ಬಂಡವಾಳದಿಂದ ಎದುರಿಸಬೇಕೆಂದು ಹೇಳಿದ್ದಾರೆ. ದಲಿತ ಬಂಡವಾಳದ ಮುಖ್ಯ ಚಿಂತಕರಲ್ಲೊಬ್ಬರಾದ ಶ್ರೀ ಚಂದ್ರಭಾನ್ ಪ್ರಸಾದ್ ಅವರು ಬಂಡವಾಳಶಾಹಿ ಜಾಗತೀಕರಣದ ಪ್ರಯೋಜನವನ್ನು ಪಡೆದು ದಲಿತರು ರೋಲ್ಸ್‌ರಾಯ್ ಕಾರುಗಳಲ್ಲಿ ಓಡಾಡುವಂತಾಗಬೇಂದು ಹೇಳುತ್ತಾರೆ. 2002 ರ ಭೂಪಾಲ್ ಸಮ್ಮೇಳನದಲ್ಲಿ ಅಂಗೀಕರಿಸಿದ ‘ದಲಿತ ಅಜೆಂಡಾ’ದ ಭಾಗವಾಗಿ ಚರ್ಚೆಗೆ ಬಂದ ದಲಿತ್ ಕ್ಯಾಪಿಟಲಿಸಂ ಈಗ ಮುಂಚೂಣಿಯಲ್ಲಿದೆ. ಇದಕ್ಕೆ ಪೂರಕ ಎಂಬ ನೆಪದಲ್ಲಿ ಹಿಂದಿನ ಮನಮೋಹನಸಿಂಗ್ ಸರ್ಕಾರ ಮತ್ತು ಈಗಿನ ಮೋದಿ ಸರ್ಕಾರ ಕೈಜೋಡಿಸಿವೆ. ಮೋದಿ ಸರ್ಕಾರದ ‘ಸ್ಟಾರ್ಟ್ ಅಪ್ ಇಂಡಿಯಾ’, ‘ಸ್ಟ್ಯಾಂಡ್ ಅಪ್ ಇಂಡಿಯಾ’ ಘೋಷಣೆಗಳು ಈ ಹಿನ್ನೆಲೆಯಲ್ಲೇ ಇವೆ. ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆಯುತ್ತಿದ್ದರೂ ದಲಿತರ ಬಾಳಿನಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯ ಪ್ರಶ್ನೆಗಳು ಪರಿಹಾರವಾಗದೇ ಇರುವ ಸಂದರ್ಭದಲ್ಲಿ ಮೇಲಿನ ಘೋಷಣೆಗಳನ್ನು ಪರಿಶೀಲಿಸಬೇಕಾಗಿದೆ.

ಕೃಷಿ ಕ್ಷೇತ್ರದಲ್ಲಿ ಅದರಲ್ಲೂ ಕೃಷಿ ಕೂಲಿಯ ಕೆಲಸಗಳಲ್ಲಿ ಈಗಲೂ ದಲಿತರ ಸಂಖ್ಯೆ ಹೆಚ್ಚಾಗಿದೆ. ಇದನ್ನು ಬದಿಗಿಟ್ಟು ನೋಡಿದರೆ, ಉದ್ಯಮಗಳಲ್ಲಿ ವಹಿವಾಟು ನಡೆಸುವ ದಲಿತರ ಸಂಖ್ಯೆ ಇವರ ಜನಸಂಖ್ಯೆಗೆ ಹೋಲಿಸಿದರೆ ತುಂಬಾ ಕಡಿಮೆಯಿದೆ. ಇದು ಈಗಾಗಲೇ ಇರುವ ಹಲವು ತಾರತಮ್ಯಗಳ ಜೊತೆಗೆ ನಂಟನ್ನು ಹೊಂದಿವೆ. ಈ ತಾರತಮ್ಯವನ್ನು ಹೋಗಲಾಡಿಸಲು, ಜಾತಿ ಸಮಸ್ಯೆಯನ್ನು ಇಲ್ಲವಾಗಿಸಲು ‘ಬಂಡವಾಳ’ ಉತ್ತಮ ಸಾಧನ. ಇದಕ್ಕಾಗಿ ಪ್ರಭುತ್ವದ ಉದ್ಯೋಗ ಮತ್ತು ಶಿಕ್ಷಣದ ಮೀಸಲಾತಿಯನ್ನೇ ನಂಬಿ ಕೂರಬೇಕಾಗಿಲ್ಲ, ಬದಲಿಗೆ ಆಧುನಿಕ ಆರ್ಥಿಕತೆಯ ಮಂತ್ರವಾದ ‘ಮಾರುಕಟ್ಟೆ’ಯನ್ನು ನಂಬಬೇಕು. ದಲಿತರು ತಮ್ಮದೇ ಉದ್ದಿಮೆಗಳನ್ನು ನಡೆಸಬೇಕು ಮತ್ತು ಅದಕ್ಕಾಗಿ ಆರ್ಥಿಕ ಸುಧಾರಣೆಗಳನ್ನು ಸ್ವಾಗತಿಸಬೇಕು, ಅದಕ್ಕಾಗಿ ಅದರ ಜನ್ಮದಾತನಾದ ಜಾಗತೀಕರಣವನ್ನು ವಿರೋಧ ಮಾಡದೆ ಸ್ವಾಗತಿಸಬೇಕು. ಈ ಮೂಲಕ ದಲಿತರು ತಾವೇ ಸ್ವತಃ ಬಂಡವಾಳಶಾಹಿ ವರ್ಗವಾಗಬೇಕು ಮತ್ತು ತಾವೇ ಮಾರುಕಟ್ಟೆ ಶಕ್ತಿಗಳಾಗಬೇಕು ಎಂಬುದು ದಲಿತ್ ಕ್ಯಾಪಿಟಲಿಸಂನ ಅರ್ಥವಾಗಿದೆ. ಭಾರತದ ದಲಿತರ ಎಲ್ಲ ರೀತಿಯ ಸಮಸ್ಯೆಗಳಿಗೆ ಇದೇ ಪರಿಹಾರ ಎಂಬುದು ಈಗ ಚರ್ಚೆಯ ವಿಷಯವಾಗಿದೆ.

ಕಳೆದೊಂದು ಒಂದೂವರೆ ದಶಕದಿಂದ ನಡೆಯುತ್ತಿರುವ ಈ ಚರ್ಚೆಯಲ್ಲಿ ಹಲವು ಮಗ್ಗುಲುಗಳ ವಾದಗಳು ನಡೆದಿವೆ. ದಲಿತ ಬಂಡವಾಳಶಾಹಿಯ ಭಾರತದಲ್ಲಿ ಬೆಳವಣಿಗೆಯಾಗಲು ಇರುವ ಅನುಕೂಲಗಳೇನು? ಅನಾನುಕೂಲಗಳೇನು? ಯಶಸ್ವಿ ಕಥಾನಕಗಳಾವುವು? ಇತ್ಯಾದಿ ಚರ್ಚೆಗಳಿಗೆ ಹೋಗದೆ, ಕೆಲವು ಮುಖ್ಯ ವಿಚಾರಗಳಿಗೆ ಸೀಮಿತಗೊಳ್ಳುತ್ತೇನೆ.

ಬಂಡವಾಳವಾದ ಎಂದರೇನು?

ಸಾಮಾಜಿಕ ಬೆಳವಣಿಗೆಯ ವಿವಿಧ ಹಂತಗಳನ್ನು ಮಾರ್ಕ್ಸ್ ಮನಮುಟ್ಟುವಂತೆ ವಿವರಿಸಿದ್ದಾನೆ. ಶೋಷಣಾ ಸಮಾಜದ ಅಂತಿಮ ಹಂತವಾಗಿ ‘ಬಂಡವಾಳಶಾಹಿ’ ಸಮಾಜವನ್ನು ಮಾರ್ಕ್ಸ್ ಗುರುತಿಸುತ್ತಾನೆ. ಇದು ಉತ್ಪಾದನಾ ಸಾಧನಗಳ, ಅಂದರೆ ವಿಜ್ಞಾನ – ತಂತ್ರಜ್ಞಾನದ ಮತ್ತು ಮಾನವ ಶ್ರಮ ಕೌಶಲ್ಯದ ಬೆಳವಣಿಗೆಯ ಉನ್ನತ ಹಂತ. ಇದರ ಒಡೆತನ ಬಂಡವಾಳದಾರರ ಕೈಯಲ್ಲಿ, ಅಂದರೆ ಶೋಷಕರ ಕೈಯಲ್ಲಿ ಇದೆ. ಇದರಿಂದಾಗಿ ಕೆಲವೇ ಕೆಲವು ಬಂಡವಾಳದಾರರು, ಅಸಂಖ್ಯಾತ ಕೆಲಸಗಾರರು ಇರುವುದು. ಉತ್ಪಾದನೆಯನ್ನು ಮತ್ತು ಅದರಿಂದುಂಟಾಗುವ ವಿನಿಮಯ, ವಿತರಣೆ ಮತ್ತು ಉಪಭೋಗವನ್ನೂ ಬಂಡವಾಳದಾರರೇ ನಿಯಂತ್ರಿಸುತ್ತಾರೆ. ದುಡಿಮೆ ಮಾಡುವ ಎಲ್ಲ ಶ್ರಮಜೀವಿಗಳ ರಕ್ತವನ್ನು ಹೀರುತ್ತಲೇ ಬಂಡವಾಳದಾರರು ಲಾಭ ಮಾಡುತ್ತಾರೆ. ಶೋಷಿತರಿಂದ ನಿರ್ಮಾಣವಾಗುವ ಹೆಚ್ಚುವರಿ ಲಾಭದಿಂದಲೇ ಬಂಡವಾಳದಾರರು ಬೆಳೆಯುತ್ತಾರೆ. ಹೀಗಾಗಿ ಬೃಹತ್ ಪ್ರಮಾಣದ ಶ್ರಮಜೀವಿಗಳು ಬಂಡವಾಳದಾರರ ಲಾಭಕ್ಕೆ ಅನಿವಾರ್ಯ. ಇದು ಬಂಡವಾಳಶಾಹಿ ವ್ಯವಸ್ಥೆಯ ಅವಿಭಾಜ್ಯ ಅಂಗ. ಹೀಗಾಗಿ ಕಾರ್ಮಿಕರು, ಶ್ರಮಿಕರು ಬಂಡವಾಳದಾರರ ವಿರುದ್ಧ ಸಂಘರ್ಷ ನಡೆಸಬೇಕಾದುದು ಅನಿವಾರ್ಯ. ಎಲ್ಲಾ ದಲಿತರು ಬಂಡವಾಳದಾರರಾಗಲು ಎಂದಿಗೂ ಸಾಧ್ಯವಿಲ್ಲ. ಹಾಗೇನಾದರೂ ಅದು ನಿಜವಾಗಿದ್ದರೆ, ಆನಂದ್ ತೇಲ್‌ತುಂಬ್ಡೆಯವರು ಹೇಳುವಂತೆ “ಅಂಬೇಡ್ಕರ್ ಬ್ರಾಹ್ಮಣಶಾಹಿಯ ವಿರುದ್ಧ ಹೋರಾಡುವ ಅಗತ್ಯವಿರಲಿಲ್ಲ, ದಲಿತರೆಲ್ಲರೂ ಬ್ರಾಹ್ಮಣರಾಗುವ ಮೂಲಕ ಜಾತಿ ಸಮಸ್ಯೆಯನ್ನು ಕೊನೆಗಾಣಿಸಬಹುದಿತ್ತಲ್ಲವೇ. ದಲಿತ್ ಕ್ಯಾಪಿಟಲಿಸಂ ಪ್ರತಿಪಾದಿಸುವ ಕೆಲವು ದಲಿತರ ವಾದ ಇದೇ ರೀತಿಯಿದೆ.”

ಅಂಬೇಡ್ಕರ್ ಬಂಡವಾಳಶಾಹಿಯ ಪರವೇ?

ದಲಿತ್ ಕ್ಯಾಪಿಟಲಿಸಂ ಪ್ರತಿಪಾದಕರು, ಅಂಬೇಡ್ಕರ್ ಅವರು ಮುಕ್ತ ಮಾರುಕಟ್ಟೆ, ನವ-ಉದಾರವಾದದ ಪರವಾಗಿದ್ದರೆಂದು ಹೇಳುತ್ತಿದ್ದಾರೆ. ಮಾತ್ರವಲ್ಲ ಇಂದಿನ ಜಾಗತೀಕರಣದ ಪ್ರಮುಖ ಅಂಶವಾದ ‘ಹಣಕಾಸು ಕೊರತೆ’ ಕಡಿತಗೊಳಿಸುವ ತತ್ವದ (ಮೊನಿಟರಿಸ್ಟ್) ಪ್ರತಿಪಾದಕರಾಗಿದ್ದರೆಂದು (ಅಂದರೆ ಸರ್ಕಾರದ ಸಾಮಾಜಿಕ ವೆಚ್ಚಗಳನ್ನು ಕಡಿತಗೊಳಿಸಬೇಕೆಂದ ತತ್ವ) ಹೇಳಲಾಗುತ್ತಿದೆ. ಬಿಜೆಪಿ ಪ್ರಧಾನಿ ಮೋದಿಯವರು ದಲಿತ ಬಂಡವಾಳದಾರರ ಸಭೆಗಳಲ್ಲಿ ಇದೇ ಹಿನ್ನೆಲೆಯಲ್ಲಿ ಅಂಬೇಡ್ಕರ್ ಅವರನ್ನು ಉದ್ಧರಿಸುತ್ತಿದ್ದಾರೆ. ಇದು ಅಂಬೇಡ್ಕರ್ ಅವರನ್ನು ಪೂರ್ಣವಾಗಿ ತಿರುಚುವ ಪ್ರಯತ್ನವಾಗಿದೆ.

ಅಂಬೇಡ್ಕರ್ ತಮ್ಮ ಜೀವಮಾನ ಪೂರ್ತಿಯಾಗಿ ಬಂಡವಾಳಶಾಹಿ ಪದ್ಧತಿಯನ್ನು ವಿರೋಧಿಸಿದವರು. ತೇಲ್‌ತುಂಬ್ಡೆಯವರು ಈ ಬಗ್ಗೆ “ಅಂಬೇಡ್ಕರ್ 1938 ರಲ್ಲಿ ರೈಲ್ವೆ ಕಾರ್ಮಿಕರನ್ನು ಉದ್ದೇಶಿಸಿ ಮನ್‌ಮಾಡ್‌ನಲ್ಲಿ ಮಾತನಾಡುತ್ತಾ, ಅಸ್ಪೃಶ್ಯರಿಗೆ ಇಬ್ಬರು ಶತ್ರುಗಳಿದ್ದಾರೆ : ಬ್ರಾಹ್ಮಣಶಾಹಿ ಮತ್ತು ಬಂಡವಾಳಶಾಹಿ” ಎಂದು ಹೇಳಿದ ಬಗ್ಗೆ ಗಮನ ಸೆಳೆಯುತ್ತಾರೆ. ಅಂಬೇಡ್ಕರ್ ಅವರ ಮೊದಲ ರಾಜಕೀಯ ಪಕ್ಷ ‘ಇಂಡಿಪೆಂಡೆಂಟ್ ಲೇಬರ್ ಪಾರ್ಟಿ’ (ILP) ಯನ್ನು ಬ್ರಿಟಿಷ್ ಲೇಬರ್ ಪಾರ್ಟಿಯ ಮಾದರಿಯಲ್ಲಿ ಸ್ಥಾಪಿಸುತ್ತಾರೆ. ಅಂದರೆ ಬಂಡವಾಳವಾದವನ್ನು ದ್ವೇಷಿಸುವ ಮತ್ತು ಸಮಾಜವಾದದೆಡೆಗೆ ಶಾಂತಿಯುತ ಪರಿವರ್ತನೆಯನ್ನು ಬಯಸುವ ಮಾದರಿಯಿದು.

ನಂತರದಲ್ಲಿ ಅವರು ILP ಯನ್ನು ವಿಸರ್ಜಿಸಿ ಶೆಡ್ಯೂಲ್ಡ್ ಕಾಸ್ಟ್ ಫೆಡರೇಷನ್ (SCF) ಸ್ಥಾಪಿಸಿ, 1942 ರಲ್ಲಿ ಕ್ರಿಪ್ಸ್ ಮಿಷನ್ ವರದಿಗೆ ನೀಡಿದ ಪ್ರತಿಕ್ರಿಯೆಯಲ್ಲಿ ಬಂಡವಾಳಶಾಹಿಗೆ ಸ್ಪಷ್ಟ ವಿರೋಧವಿರುವುದನ್ನು ದಾಖಲಿಸಿದ್ದಾರೆ. ತೇಲ್‌ತುಂಬ್ಡೆ ತಮ್ಮ ‘ದಲಿತ್ ಕ್ಯಾಪಿಟಲಿಸಂ ಮತ್ತು ಹುಸಿ ದಲಿತವಾದ’ (Dalit Capitalism And Pseudo Dalitism) ಲೇಖನದಲ್ಲಿ ಪ್ರಸ್ತಾಪಿಸಿರುವುದನ್ನು ಗಮನಿಸಬೇಕು : “1947ರಲ್ಲಿ SCF ಪರವಾಗಿ ಸಂವಿಧಾನ ಸಭೆಗೆ ಸಲ್ಲಿಸಿದ ‘ಸ್ಟೇಟ್ಸ್ ಅಂಡ್ ಮೈನಾರಿಟೀಸ್’ ಮನವಿಯಲ್ಲಿ, ಬಂಡವಾಳದಾರರ ಲಂಗುಲಗಾಮಿಲ್ಲದ ವಿಧಾನಗಳಿಂದ ರಕ್ಷಣೆ ಹೊಂದಲು ಪ್ರಭುತ್ವ ಸಮಾಜವಾದದ ಮೂಲ ಮಾದರಿಯನ್ನು ಸೂಚಿಸುತ್ತಾರೆ. ಇವರು ಬಂಡವಾಳವಾದವನ್ನು ‘ಖಾಸಗಿ ಮಾಲೀಕರ ಸರ್ವಾಧಿಕಾರ’ ಎಂದು ಕರೆದರು. ಮತ್ತೊಂದು ಕಡೆ, ‘ಬಂಡವಾಳವಾದವು ಶ್ರೀಮಂತರ ಪರವಾಗಿದೆ, ಬಡವರ ಪರವಾಗಿಲ್ಲ, ಇದಕ್ಕೆ ಬದಲಾಗಿ ಸಮಾಜವಾದವು ಬಡವರ ಪರವಾಗಿದೆ, ಶ್ರೀಮಂತರ ಪರವಾಗಿಲ್ಲ’ ಎಂದು ಹೇಳಿದ್ದಾರೆ”. ಅಂಬೇಡ್ಕರ್ ಅವರ ಈ ಧೋರಣೆಗಳು ಅವರು ಬಂಡವಾಳಶಾಹಿ ಪದ್ಧತಿಗೆ ಸ್ಪಷ್ಟವಾಗಿ ವಿರೋಧವಿದ್ದರೆಂದು ತಿಳಿಸುತ್ತವೆ.

ಭಾರತದ ಬಂಡವಾಳದಾರರು ಜಾತಿ ಆಧಾರಿತವಲ್ಲವೇ?

ಭಾರತದಲ್ಲಿ ಬಂಡವಾಳದಾರರ ಕುಟುಂಬಗಳು ಒಂದೇ ರೀತಿಯ, ಅಥವಾ ಮೇಲ್ ಜಾತಿಗಳಿಗೆ ಸೇರಿದವರಾದ್ದರಿಂದ, ದಲಿತರಿಗೆ ಅವರದೇ ಸಮುದಾಯಗಳಿಂದ ಬಂಡವಾಳದಾರರು ಸೃಷ್ಟಿಯಾಗುವುದು ಅಗತ್ಯ ಎಂಬ ವಾದವನ್ನು ಹುಟ್ಟುಹಾಕಲಾಗಿದೆ. ಪ್ರಸಕ್ತ ಭಾರತೀಯ ಉದ್ಯಮಿಗಳು ಒಂದೇ ಜಾತಿಯ ಜಾಲಗಳಾಗಿದ್ದಾರೆ. ಅದರೊಳಗೆ ಇತರೆ ಜಾತಿಗಳು ಪ್ರವೇಶ ಮಾಡಲಾಗದು ಇತ್ಯಾದಿ ವಾದಗಳಿವೆ. ಮಾರ್ವಾರಿ, ಗುಜರಾತಿ, ಕಚ್ಛ್ ಇತ್ಯಾದಿ ರಾಷ್ಟ್ರ ಮಟ್ಟದ ಜಾತಿ ಜಾಲಗಳಿರುವಂತೆ, ವಿವಿಧ ರಾಜ್ಯಗಳಲ್ಲಿ ಕೆಲವು ನಿರ್ದಿಷ್ಟ ಜಾತಿಗಳ ಉದ್ಯಮ ಜಾಲಗಳಿವೆ. ಒಂದೊಂದು ರೀತಿಯ ಉದ್ಯಮದ ಹಿಡಿತ ಒಂದೊಂದು ಜಾತಿಯ ಪ್ರಾಬಲ್ಯದಲ್ಲಿದೆ. ಈ ನಿರ್ದಿಷ್ಟ ಜಾತಿ ವಲಯಗಳ ನಡುವೆ ಒಂದು ರೀತಿಯ ಉದ್ಯಮ ಸಹಕಾರ ಚಲಾವಣೆಯಲ್ಲಿದೆ. ಹಣಕಾಸು, ಸಾಲ, ಮೂಲಸೌಕರ್ಯ, ಇತ್ಯಾದಿ ವಿಚಾರಗಳಲ್ಲಿ ಇದು ಆಚರಣೆಯಲ್ಲಿದೆ. ಇದನ್ನು ಪೂರ್ಣ ಸುಳ್ಳು ಎಂದು ಹೇಳಲಾಗದು.

ಆದರೆ ನಾವು ಗಮನಿಸಬೇಕಾದ್ದು ಏನೆಂದರೆ, ಜಾತಿ ಜಾಲಗಳನ್ನು ಬಳಸಿ ಲಾಭವನ್ನು ಹೆಚ್ಚಿಸಿಕೊಳ್ಳುವ ಆ ಮೂಲಕ ಬಂಡವಾಳವನ್ನು ಹೆಚ್ಚಿಸಿಕೊಳ್ಳುವ ಈ ಪ್ರಕ್ರಿಯೆಗೆ ಪೂರ್ಣವಾಗಿ ಜಾತಿ ಬಂಡವಾಳ ಎಂದು ಕರೆಯುವುದು ಕಷ್ಟ. ಬಂಡವಾಳಕ್ಕೆ ಜಾತಿ, ಕುಲ, ಅಷ್ಟೇಕೆ ದೇಶಗಳೂ ಇರುವುದಿಲ್ಲ. ಬಂಡವಾಳದ ಶೇಖರಣೆಯಲ್ಲಿ ಬಳಸಲಾಗುವ ವಿವಿಧ ಸಾಮಾಜಿಕ ಅಸ್ತ್ರಗಳಲ್ಲಿ ಜಾತಿಯೂ ಒಂದಷ್ಟೆ. ಇಲ್ಲಿ ಇನ್ನಷ್ಟು ಆಳಕ್ಕಿಳಿದು ನೋಡುವ ಅಗತ್ಯವಿದೆ. ಒಂದು ನಿರ್ದಿಷ್ಟ ಜಾತಿಗೆ ಸೇರಿದ ಬಂಡವಾಳದಾರರ ಉದ್ದಿಮೆಯಲ್ಲಿ ಅದೇ ಜಾತಿಗೆ ಸೇರಿದ ಕಾರ್ಮಿಕರನ್ನು ಯಾವ ರೀತಿಯಲ್ಲಿ ನೋಡಲಾಗುತ್ತದೆ. ಎಲ್ಲಾ ಕಾರ್ಮಿಕರಿಂದಲೂ ಹೆಚ್ಚುವರಿ ಉತ್ಪಾದನೆಯನ್ನು ಕಸಿಯುವಂತೆ ಮಾಲೀಕರ ಜಾತಿಗೆ ಸೇರಿದ ಕಾರ್ಮಿಕರಿಂದ ಕಸಿಯುವುದಿಲ್ಲವೇ? ಇದುವರೆಗಿನ ಎಲ್ಲ ಅನುಭವ ನಮಗೆ ಕಲಿಸಿರುವುದು, ಹೌದು, ಜಾತಿ ಯಾವುದಾದರೂ ಹೆಚ್ಚುವರಿ ಉತ್ಪಾದನೆಯನ್ನು ಕಸಿಯದೆ ಬಂಡವಾಳಶಾಹಿ ಬದುಕಿಲ್ಲ ಎಂಬುದು. ಈ ಮೂಲ ವೈರುಧ್ಯವನ್ನು ಮರೆತು ಬಂಡವಾಳಕ್ಕೆ ಪೂರ್ತಿಯಾಗಿ ಜಾತಿಯ ಬಣ್ಣವನ್ನು ಬಳಿಯಲು ಸಾಧ್ಯವಿಲ್ಲ.

ದಲಿತ್ ಕ್ಯಾಪಿಟಲಿಸಂನಿಂದ ದಲಿತರಿಗೆ ಪ್ರಯೋಜನವಿಲ್ಲವೇ?

ನಮ್ಮ ಸಮಾಜದ ಒಟ್ಟು ದಲಿತರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಂರಚನೆಯನ್ನು ಗಮನಿಸಿದರೆ, ಬಹುಸಂಖ್ಯಾತ ದಲಿತರಿಗೆ ಭೂಮಿ, ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಇತ್ಯಾದಿ ಪ್ರಶ್ನೆಗಳು ಬಗೆಹರಿದಿಲ್ಲ. ಬಂಡವಾಳದಾರರಾಗುವ ಸಾಧ್ಯತೆಗಳು ಬಹುಸಂಖ್ಯಾತ ದಲಿತರಿಗೆ ಇಲ್ಲ. ಸಂವಿಧಾನದ ಮೂಲಕ ಪಡೆಯಲಾದ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಮೀಸಲಾತಿಯ ಲಾಭ ಪಡೆದ ದಲಿತರ ಒಂದು ವಿಭಾಗದ ಶ್ರೀಮಂತರಲ್ಲಿ ದಲಿತ್ ಕ್ಯಾಪಿಟಲಿಸಂ ವಿಶೇಷಾಸಕ್ತಿಯನ್ನು ಮೂಡಿಸಿದೆ. ಉನ್ನತ ಸರ್ಕಾರಿ ಹುದ್ದೆಗಳ ಪ್ರಯೋಜನ ಪಡೆದ, ರಾಜಕೀಯದಲ್ಲಿ ಶಾಸಕರು, ಮಂತ್ರಿಗಳಾಗಿ ಪ್ರಯೋಜನ ಪಡೆದ ಒಂದು ವಿಭಾಗ ದಲಿತ್ ಕ್ಯಾಪಿಟಲಿಸಂನಲ್ಲಿ ನೇರ ಭಾಗಿದಾರರಾಗಿ ಅಥವಾ ಅದರ ಪರವಾಗಿ ಬ್ಯಾಟಿಂಗ್ ಮಾಡುತ್ತಿದೆ. ಅದರಲ್ಲೂ ಜಾಗತೀಕರಣದ ಅವಧಿಯಲ್ಲಿ ಬಂಡವಾಳದಿಂದ ಅಪಾರ ಲಾಭ ಮಾಡಿದ ಒಂದು ವಿಭಾಗವೂ ಸಹ ಇದರ ಬೆನ್ನು ಚಪ್ಪರಿಸುತ್ತಿದೆ. ರತನ್ ಟಾಟಾ ಮತ್ತು ಆದಿ ಗೋದ್ರೇಜ್ ನಂತಹ ಬೃಹತ್ ಬಂಡವಾಳದಾರರು ದಲಿತ್ ಕ್ಯಾಪಿಟಲಿಸಂಗೆ ಬೆಂಬಲ ನೀಡಿದ್ದಾರೆ. ಅವರಿಗೇನು ಭಾರತದಲ್ಲಿ ಈ ಮೂಲಕ ಜಾತಿ ವಿನಾಶ ಮಾಡಬೇಕೆನ್ನುವ ಇರಾದೆಯಿದೆಯೇ? ಇಲ್ಲ, ಬದಲಿಗೆ, ಅವರ ಬೃಹತ್ ಉದ್ದಿಮೆಗಳ ಉತ್ಪಾದನಾ ಜಾಲದಲ್ಲಿ, ದಲಿತರ ಸಣ್ಣ ಉದ್ದಿಮೆಗಳ ಲಾಭದ ಅವಕಾಶವನ್ನು ಜೋಡಿಸಬೇಕಾಗಿದೆ. ಆ ಮೂಲಕ ತಮ್ಮ ಲಾಭವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳಬೇಕಾಗಿದೆ. ದಲಿತ ವಬಂಡವಾಳದಾರರಿಗೆ ಕೊಡಬಹುದಾದದ ಸೌಲಭ್ಯಗಳನ್ನು ಬಳಸಿ ಸ್ಥಾಪಿಸಿದ ಕಂಪನಿಗಳಲ್ಲಿ ತಾವು ಪಾಲು ತೆಗೆದುಕೊಂಡು ಅದರ ಪ್ರಯೋಓಜನವನ್ನು ಪಡೆಯುಬಹುದು ಎಂಬ ದೂರಾಲೋಚನೆಯೂ ಇರಬಹುದು. ಖಾಸಗಿ ವಲಯದಲ್ಲಿ ದಲಿತರಿಗೆ ಮೀಸಲಾತಿ ಒತ್ತಾಯವನ್ನು ದಾರಿ ತಪ್ಪಿಸಲೂ ಇದನ್ನು ಬಳಸಬಹುದು ಎಂಬ ಲೆಕ್ಕಾಚಾರ ಸಹ ಇರಬಹುದು.

ಇದೇನೇ ಇದ್ದರೂ ಉದ್ದಿಮೆಗಳನ್ನು ಸ್ಥಾಪಿಸಿ ನಡೆಸಬೇಕೆನ್ನುವ ದಲಿತರಿಗೆ ಅವರ ಜಾತಿಮೂಲದಿಂದಾಗಿ ಹಲವು ಅಡೆತಡೆಗಳೂ ಅನಾನುಕೂಲಗಳೂ ಇರುತ್ತವೆ. ಅವನ್ನು ನಿವಾರಿಸುವ ಅವಶ್ಯಕವಾದ ಸೌಲಭ್ಯಗಳು, ಸಾಲಗಳು, ಭೂಮಿ, ನೀರು ಇತ್ಯಾದಿ ಮೂಲಸೌಲಭ್ಯಗಳನ್ನು ಒದಗಿಸಲು ವಿಶೇಷ ಪ್ರಯತ್ನ ಅಗತ್ಯ ಬೇಕೆನ್ನುವುದು ಸಹಜವಾದ ಬೇಡಿಕೆಯೇ ಆಗಿದೆ. ಸಂವಿಧಾನದತ್ತವಾದ ಎಲ್ಲ ಅನುಕೂಲಗಳು ಸರಿಯಾದ ರೀತಿಯಲ್ಲಿ ಈ ವಿಭಾಗಕ್ಕೆ ಸಿಗಬೇಕು. ಆದರೆ ಪ್ರಶ್ನೆಯಿರುವುದು, ಬಂಡವಾಳವಾದವನ್ನು ಬಹುಸಂಖ್ಯಾತ ದಲಿತರ ಎಲ್ಲ ಸಮಸ್ಯೆಗಳಿಗೆ ಅಂತಿಮ ಪರಿಹಾರ ಎಂದು ಸ್ವೀಕರಿಸುವುದರಲ್ಲಿ.

ದಲಿತ್ ಕ್ಯಾಪಿಟಲಿಸಂ ಕೆಲವು ದಲಿತ ಉದ್ಯಮಿಗಳನ್ನು ಕಾಲಚಕ್ರದಲ್ಲಿ ಫೋರ್ಬ್ಸ್–500 ಅಥವಾ ಫಾರ್ಚೂನ್–500 ಪಟ್ಟಿಗೋ ಸೇರಿಸಬಹುದು. ಅಥವಾ ಇನ್ನೊಂದಷ್ಟು ಕೈಬೆರಳೆಣಿಕೆಯಷ್ಟು ಜನರಿಗೆ ಮಧ್ಯಂತರ ಸ್ಥಾನಮಾನಗಳು ಕಲ್ಪಿಸಬಹುದು. ಆದರೆ ಬಂಡವಾಳಶಾಹಿಯ ಉತ್ಪಾದನಾ ನಿಯಮದ ಪ್ರಕಾರ ಬಹುಸಂಖ್ಯಾತ ದಲಿತ ಕಾರ್ಮಿಕರು ಶೋಷಣೆಗೆ ಒಳಗಾಗುವುದನ್ನು ಇದು ತಪ್ಪಿಸುವುದಿಲ್ಲ. ದಲಿತ ಉದ್ಯಮಿಗಳೇ ದಲಿತ ಕಾರ್ಮಿಕರನ್ನು ಶೋಷಿಸುವುದನ್ನು ತಪ್ಪಿಸಲು ಬಂಡವಾಳದಿಂದ ಸಾಧ್ಯವಿಲ್ಲ. ಬಂಡವಾಳಶಾಹಿ ಸ್ವಭಾವತಃ ಅಸಮಾನತೆಯ ವಿವಿಧ ತಾರತಮ್ಯಗಳ

ಪುಟ 18 ಕ್ಕೆ

ತಮಿಳುನಾಡು: ಅಸ್ಪೃಶ್ಯತೆಯ ಗೋಡೆಗಳ...... ಪುಟ 14 ರಿಂದ

ಹಿಂಸಾಚಾರ ದೊಂಬಿ ನಡೆಯಿತು.

ಪೊಲೀಸ್‌ನವರ ಈ ದಲಿತ ವಿರೋಧಿ ಹಿಂಸಾಕೃತ್ಯಗಳ ವಿರುದ್ಧ ಬೃಹತ್ ಪ್ರತಿಭಟನೆ ನಡೆದು ನ್ಯಾಯಾಂಗ ತನಿಖೆಗೆ ಒತ್ತಾಯಿಸಲಾಯಿತು. ಮಧುರೈನ AIDWA ಘಟಕವು ಮದ್ರಾಸ್ ಹೈಕೋರ್ಟಿನ ಮಧುರೈ ಪೀಠದ ಮುಂದೆ ಎಸ್/ಎಸ್‌ಟಿ (ದೌರ್ಜನ್ಯ ತಡೆ) ಕಾಯಿದೆ ಅಡಿಯಲ್ಲಿ ಪೊಲೀಸ್ ದೌರ್ಜನ್ಯದ ಬಗ್ಗೆ ದೂರು ದಾಖಲಿಸಿತು. ನ್ಯಾಯಾಂಗ ತನಿಖೆ ನಡೆಸಬೇಕು, ನೊಂದ ದಲಿತರಿಗೆ ಪರಿಹಾರ ಕೊಡಬೇಕು, ದೌರ್ಜನ್ಯವೆಸಗಿದವರಿಗೆ ಶಿಕ್ಷೆಯಾಗಬೇಕೆಂಬ ಬೇಡಿಕೆಗಳನ್ನು ಉಚ್ಚ ನ್ಯಾಯಾಲಯ ಮನ್ನಿಸಿ, ಇಬ್ಬರು ನ್ಯಾಯಾಧೀಶರಿದ್ದ ಆಯೋಗವನ್ನು ರಚಿಸಿತು. ಈ ಆಯೋಗವು ಊತ್ತುಪುರಂಗೆ ಭೇಟಿಕೊಟ್ಟು ವಿಚಾರಣೆ ನಡೆಸಿ ವರದಿ ಸಲ್ಲಿಸಿತು. ಇದರ ಆಧಾರದಲ್ಲಿ ನ್ಯಾಯಾಲಯವು ಪೊಲೀಸರು ಹಿಂಸಾಚಾರ ನಡೆಸಿದ್ದಾರೆಂದು ತೀರ್ಪು ನೀಡಿ, ಸಂತ್ರಸ್ಥ ದಲಿತರಿಗೆ ರೂ. 15 ಲಕ್ಷ ಪರಿಹಾರ ಧನ ನೀಡಬೇಕೆಂದು ಆದೇಶ ನೀಡಿತು. ಈ ಆದೇಶವನ್ನು ತಮಿಳುನಾಡಿನ ಸರ್ಕಾರ ಪ್ರಶ್ನಿಸಿತು. ಕೊನೆಗೆ ಎರಡು ಕಡೆಯಿಂದ ವಾದವನ್ನೂ ಕೇಳಿದ ಉಚ್ಚ ನ್ಯಾಯಾಲಯವು ಮಧ್ಯಂತರ ತೀರ್ಪು ನೀಡಿ ಆದೇಶ ಹೊರಡಿಸಿತು. ಅದರಂತೆ, ರೂ.10 ಲಕ್ಷ ಪರಿಹಾರ ಧನ ಕೊಡಲೇಬೇಕು, ದೌರ್ಜನ್ಯ ನಡೆಸಿದ ಪೊಲೀಸರಿಗೆ ಶಿಕ್ಷೆಯಾಗಲೇಬೇಕು. ಪ್ರಚೋದನೆಗೆ ಕಾರಣರಾದ ಮೇಲ್ಜಾತಿಯವರಿಗೂ ಕಾನೂನು ರೀತ್ಯ ಶಿಕ್ಷೆ ಕೊಡಬೇಕೆಂದು ಆದೇಶ ಹೊರಡಿಸಿತು. TNUEF ಗೆ ಇದೊಂದು ಅದ್ಭುತ ಗೆಲುವು._

ಇತರ ಹೋರಾಟಗಳು

- TNUEF ನ ಮತ್ತೊಂದು ಯಶಸ್ವಿ ಹೋರಾಟವೆಂದರೆ ದಲಿತರಲ್ಲಿ ಅತಿ ಕಡು ದಲಿತರೆನಿಸಿರುವ 'ಅರುಂತತ್ತಿಯಾರ್' ಸಮುದಾಯದವರಿಗೆ 'ಪರಿಶಿಷ್ಟ ಜಾತಿ'ಯೊಳಗೆ ಪ್ರಸ್ತುತವಿರುವ ಮೀಸಲಾತಿಯೊಳಗೆ ಶೇ.3ರಷ್ಟು ಉಪಮೀಸಲಾತಿ ಕೋಟಾ ಸೌಲಭ್ಯ ಪಡೆಯಲು ಸಾಧ್ಯವಾಗಿರುವುದು. ಅತ್ಯಂತ ಹೀನಾಯ ಸ್ಥಿತಿಯಲ್ಲಿರುವ ಇವರು ಒಳಚರಂಡಿ, ಮೋರಿಗಳಲ್ಲಿ ಕೆಲಸ ಮಾಡುತ್ತಾರೆ. ಕಸ-ಕಡ್ಡಿ ಕೊಳಕು ತೊಟ್ಟಿಗಳ ಕಸ ಎತ್ತುವ, ಕಕ್ಕಸು ಎತ್ತಿ ತೊಳೆಯುವ ಕೆಲಸಗಳು ಇವರ ಪಾಲಿಗೆ ಜೀವನಾಧಾರಗಳಾಗಿವೆ. ಸುಮಾರು 30 ವರ್ಷಗಳಿಂದ ಇವರು ಇದಕ್ಕಾಗಿ ಹೋರಾಟ ನಡೆಸಿಕೊಂಡು ಬಂದ್ದಿದರು ಸಹ, ಸರ್ಕಾರ ಅವರ ಬೇಡಿಕೆಯನ್ನು ಒಪ್ಪಿರಲಿಲ್ಲ.
- ಮಧುರೈ ಜಿಲ್ಲೆಯ ಪಾಪ್ಪಪಟ್ಟಿ, ಕೀರಿಪಟ್ಟಿ ಹಾಗೂ ನಾಟಕಮಂಗಲಂ ಹಾಗೂ ವಿರುಧನಗರ ಜಿಲ್ಲೆಯ ಕೊಟ್ಟಕಾಚಿಯಂಡಲ್ ಗ್ರಾಮ ಪಂಚಾಯಿತಿಗಳು ದಲಿತರಿಗೆ ಮೀಸಲಾತಿಯಾಗಿದ್ದರಿಂದ ಅಲ್ಲಿನ ಪ್ರಬಲ ಕೋಮಿನ ಮೇಲ್ಜಾತಿಯವರು ಕಳೆದ 10 ವರ್ಷಗಳಿಂದ ಚುನಾವಣೆಗಳನ್ನು ನಡೆಸಲು ಬಿಟ್ಟಿರಲಿಲ್ಲ. TNUEF ನ ಮಧ್ಯ ಪ್ರವೇಶ ಮತ್ತು ಹೋರಾಟಗಳ ಫಲವಾಗಿ ಈ ಬಾರಿ ಅಲ್ಲಿ ಚುನಾವಣೆ ನಡೆಸಲಾಗಿದೆ.
- ಅನೇಕ ಗ್ರಾಮಗಳಲ್ಲಿ ದಲಿತರಿಗೆ ದೇವಸ್ಥಾನಗಳಿಗೆ ಪ್ರವೇಶ ನಿಷೇಧಿಸಲಾಗಿತ್ತು. TNUEF ನ ಹೋರಾಟದಿಂದಾಗಿ, ತಾಮರಪಕ್ಕಂ ಗ್ರಾಮದ ಅಗ್ನೀಶ್ವರ ದೇವಸ್ಥಾನ, ವೇದಾಂತವಾಡಿ ಗ್ರಾಮದ ಕೋತಾಂದವರ ದೇವಸ್ಥಾನ ಈ ಎರಡು ಗ್ರಾಮಗಳು ತಿರುವನಂತಪುರ ಜಿಲ್ಲೆಯಲ್ಲಿವೆ. ಇಲ್ಲಿ ದಲಿತರು ನೇರ ಪ್ರವೇಶಿಸಿದ್ದಾರೆ. ಹಾಗೆಯೇ ದಿಂಡಿಗಲ್ ಜಿಲ್ಲೆ, ಕೊಯಂಬತ್ತೂರು ಜಿಲ್ಲೆ, ಮಧುರೈ ಜಿಲ್ಲೆ, ಕೃಷ್ಣಗಿರಿ ಜಿಲ್ಲೆ, ವಿಶಲಾಪುರ ಜಿಲ್ಲೆಯ ಅನೇಕ ಗ್ರಾಮದಲ್ಲಿನ ನೂರಾರು ದೇವಾಲಯಗಳಿಗೆ ನೇರ ಪ್ರವೇಶ ಮಾಡಿದ ಪರಿಣಾಮದಿಂದಾಗಿ ಇದೀಗ ಸರ್ಕಾರವೇ ಅವಕಾಶವನ್ನು ತೆರೆದಿದೆ. ಮೇಲ್ಜಾತಿಯ ಜನರು, ಪೂಜಾರಿಗಳಿಗೆ ಕಸಿವಿಸಿಯಾದರೂ, ಸಮಾನತೆಯನ್ನು ಎತ್ತಿ ಹಿಡಿಯುವ ಇದನ್ನು ತಡೆಯಲು ಯಾರಿಗೂ ಸಾಧ್ಯವಿಲ್ಲ ಎಂಬ ದೃಢವಾದ ಸಂದೇಶವನ್ನೂ ಈ ದೇವಸ್ಥಾನ ಪ್ರವೇಶದಿಂದ ಕೊಡಲಾಗಿದೆ.
- ಸ್ಮಶಾನ ಭೂಮಿಯ ಹೋರಾಟಗಳಲ್ಲಿ TNUEF ಗೆಲುವು ಸಾಧಿಸಿದೆ. ನಾಗಪಟ್ಟಣಂ ಜಿಲ್ಲೆಯ ವಾಟ್ಟಕುಡ ಗ್ರಾಮದಲ್ಲಿ ದಲಿತರಿಗಾಗಿ ಸ್ಮಶಾನ ಭೂಮಿಯನ್ನೂ ಕೊಡಿಸಲು ಸಾಧ್ಯವಾಗಿದೆ. ಭೂಮಿಯಿಲ್ಲದ ದಲಿತರ ಮನೆಯಲ್ಲಿ ಯಾರಾದರೂ ಸತ್ತು ಹೋದಾಗ, ಅವರ ಹೆಣ ಹೂಳಲು ಜಾಗವಿಲ್ಲದ ಕಾರಣ, TNUEF ಈ ಹೋರಾಟವನ್ನು ಕೈಗೆತ್ತಿಕೊಂಡು ಸಫಲವಾಗಿದೆ.

ತಮಿಳುನಾಡಿನ ಅಸ್ಪೃಶ್ಯತಾ ನಿರ್ಮೂಲನಾ ರಂಗ(TNUEF)ದ ಇಂತಹ ಹೋರಾಟಗಳ ಅನುಭವಗಳು ಅಪಾರ. ದೇಶದ ಇನ್ನಿತರ ರಾಜ್ಯಗಳು ಇದರಿಂದ ಬಹಳಷ್ಟು ಪ್ರಯೋಜನ ಪಡೆಯ ಬಹುದು. ಕರ್ನಾಟಕದಲ್ಲಿಯೂ ಇಂತಹ ಹೋರಾಟಗಳನ್ನು ತೀವ್ರಗೊಳಿಸುವ ನಿಟ್ಟಿನಲ್ಲಿ ನಾವೆಲ್ಲ ಒಂದಾಗಿ ಕಾರ್ಯಪ್ರವೃತ್ತರಾಗೋಣ.

ಆಂಧ್ರ ಪ್ರದೇಶ: ನೇರಕಾರ್ಯಾಚರಣೆಯ ಅನುಭವಗಳು

ಪುಟ 14 ರಿಂದ

ಸಾಮಾಜಿಕ ನ್ಯಾಯದ ಸರಿಯಾದ ಕಣ್ಣೋಟ ಇರುವ ಟ್ರೇಡ್‌ಯೂನಿಯನ್, ರೈತ ಸಂಘ, ಕೃಷಿಕೂಲಿಕಾರರ ಸಂಘ, ದಲಿತ ಸಂಘಟನೆ, ಎಡ/ಕಮ್ಯುನಿಸ್ಟ್ ಪಕ್ಷದ ಘಟಕಗಳು ಇದ್ದಲ್ಲಿ ಮಾತ್ರ, ದೈನಂದಿನ ಸಾಮಾಜಿಕ ದಬ್ಬಾಳಿಕೆ ವಿರುದ್ಧ ಸ್ಥಿರವಾದ ಪ್ರತಿರೋಧ ಒಡ್ಡುವುದು ಸಾಧ್ಯವಾಯಿತು ಎನ್ನುವುದು ಈ ಕೆ.ವಿ.ಪಿ.ಎಸ್. ಯಾತ್ರೆಗಳ ಮತ್ತು ನಂತರದ ಅನುಭವ.

ನೇರ ಕಾರ್ಯಾಚರಣೆಗೆ ಬೂರ್ಜ್ವಾ-ಭೂಮಾಲಕ ಪಕ್ಷಗಳ ಅದರಲ್ಲೂ ಅವುಗಳ ಸ್ಥಳೀಯ ನಾಯಕರ ಪ್ರತಿಕ್ರಿಯೆ ಕಿಡಿಗೇಡಿತನದ್ದು ಆಗಿತ್ತು. ಅವರು ಯಾತ್ರಾತಂಡವನ್ನು ಮಧ್ಯದಾರಿಯಲ್ಲೇ ಭೇಟಿ ಮಾಡಿ ಯಾತ್ರೆಯ ಕೆಲಸದ ಬಗ್ಗೆ ಹೊಗಳುತ್ತಿದ್ದರು. ಆದರೆ ತಮ್ಮ ಹಳ್ಳಿಯಲ್ಲಿ ಅಂತಹ ತಾರತಮ್ಯ ಇಲ್ಲದ್ದರಿಂದ ಅಲ್ಲಿಗೆ ಬರುವ ಅಗತ್ಯವಿಲ್ಲ. ನೆರೆಯ ಹಳ್ಳಿಗೆ ಹೋಗಬಹುದು ಎಂದು ದಾರಿತಪ್ಪಿಸಲು ಪ್ರಯತ್ನಿಸುತ್ತಿದ್ದರು. ಇನ್ನೂ ಕೆಲವರು ದಲಿತರ ಜತೆ ಯಾತ್ರಾ ಕಾರ್ಯಕರ್ತರು ಮುಕ್ತ ಮಾತುಕತೆ ಮಾಡದಂತೆ ಹಿಂಬಾಲಿಸುತ್ತಿದ್ದರು. ಅವರನ್ನು ಸಾಗ ಹಾಕಿ ದಲಿತರ ಜತೆ ಮಾತಾಡಿದಾಗ ಮಾತ್ರ ಸತ್ಯ ತಿಳಿಯುತ್ತಿತ್ತು. ಹಲವು ಹಳ್ಳಿಗಳಲ್ಲಿ ಎಲ್ಲಾ ಬೂರ್ಜ್ವಾ-ಭೂಮಾಲಕ ಪಕ್ಷಗಳ 'ಸ್ಥಳೀಯ ನಾಯಕರು ಒಂದಾಗಿ ದಲಿತರ ನೇರಕಾರ್ಯಾಚರಣೆ ಸಾಧ್ಯವಾಗದಂತೆ ಪ್ರಯತ್ನಿಸುತ್ತಿದ್ದರು. ಹಲವು ಕಡೆ ಮೇಲ್ಜಾತಿ ಯವರಿಗಿಂತಲೂ ಒಬಿಸಿ ಜಾತಿಯವರೇ ದಲಿತರ ವಿರುದ್ಧ ಹೆಚ್ಚು ಆಕ್ರಾಮಕ ಧೋರಣೆ ಪ್ರದರ್ಶಿಸುತ್ತಿದ್ದರು. ಕೆಲವು ಕಡೆ ಮಹಿಳೆಯರು ದಲಿತರ ನೇರ ಕಾರ್ಯಾಚರಣೆ ನಡೆಯದಂತೆ ಸಕ್ರಿಯವಾಗಿ ಆಕ್ರಾಮಕವಾಗಿ ತೊಡಗಿಸಿಕೊಂಡರು.

ಇತರ ದಲಿತ ಸಂಘಟನೆಗಳು ಕಮ್ಯುನಿಸ್ಟರನ್ನು ಸಾಮಾಜಿಕ ದಬ್ಬಾಳಿಕೆಯ ವಿಷಯ ನಿರ್ಲಕ್ಷಿಸಿ ಆರ್ಥಿಕ ಹಕ್ಕೊತ್ತಾಯಗಳು ಹಾಗೂ ವರ್ಗ ಹೋರಾಟದ ಮೇಲೆ ಒತ್ತುಕೊಡುತ್ತಾರೆ ಎಂದು ಟೀಕಿಸುತ್ತವೆ. ಅದು ಸ್ವಲ್ಪ ಮಟ್ಟಿಗೆ ನಿಜ ಕೂಡಾ. ಆದರೆ ಇದು ದಲಿತ ಸಂಘಟನೆಗಳ ಬಗ್ಗೆನೂ ನಿಜ ಎಂಬುದು ಈ ಯಾತ್ರೆಗಳ ಅನುಭವ. ಮೀಸಲಾತಿ, ಸರಕಾರಿ ಕಲ್ಯಾಣ ಯೋಜನೆ ಮತ್ತಿತರ ಆರ್ಥಿಕ ಸವಲತ್ತುಗಳನ್ನು ದೊರಕಿಸಲು ಸಹಾಯ ಮಾಡುವುದಕ್ಕೆ ಈ ಸಂಘಟನೆಗಳ ಕೆಲಸ ಹೆಚ್ಚಾಗಿ ಸೀಮಿತವಾಗಿತ್ತು. ಇವು ಆರ್ಥಿಕ ಚಟುವಟಿಕೆಗಳೇ ಎಂಬುದನ್ನು ಗಮನಿಸಬೇಕು. ಆಗೊಮ್ಮೆ ಈಗೊಮ್ಮೆ ನಿರ್ದಿಷ್ಟ ದೌರ್ಜನ್ಯ ಪ್ರಕರಣಗಳಿಗೆ ಪ್ರತಿಕ್ರಿಯಿಸಿ ಮಧ್ಯಪ್ರವೇಶ ಮಾಡುವುದನ್ನು ಬಿಟ್ಟರೆ, ಅಸ್ಪೃಶ್ಯತೆ ಮತ್ತಿತರ ದೈನಂದಿನ ಸಾಮಾಜಿಕ ದಬ್ಬಾಳಿಕೆ ವಿರುದ್ಧ ಸತತ ಪ್ರತಿರೋಧ ಸಂಘಟಿಸುವುದಾಗಲಿ, ಕನಿಷ್ಠ ಪ್ರಚಾರಾಂದೋಲನ ನಡೆಸುವುದಾಗಲಿ ಅವುಗಳ ಅಜೆಂಡಾದಲ್ಲೇ ಇರಲಿಲ್ಲ.

ಜಾತಿವಿನಾಶ ಕುರಿತು ಡಾ. ಅಂಬೇಡ್ಕರ್



* ಭಾರತದಲ್ಲಿ ಜಾತಿ ಅಂದರೆ ಕೃತಕವಾಗಿ ಜನರನ್ನು ನಿಗದಿಯಾದ ಮತ್ತು ನಿರ್ದಿಷ್ಟವಾದ ಘಟಕಗಳಾಗಿ ಕತ್ತರಿಸಿ ಬೇರ್ಪಡಿಸಿದ, ಅಂತರ್ವಿವಾಹದ ಪದ್ಧತಿಯ ಮೂಲಕ ಪ್ರತಿಯೊಂದೂ ಮತ್ತೊಂದರೊಂದಿಗೆ ಬೆಸೆಯದಂತೆ ಮಾಡಿರುವ ವ್ಯವಸ್ಥೆ.

* ಅಂತರ್ವಿವಾಹವೇ ಜಾತಿಗೇ ವಿಲಕ್ಷಣವಾದ ಏಕೈಕ ಗುಣಲಕ್ಷಣ.

* ಜಾತಿ ಅಂದರೆ ಮುಚ್ಚಿಟ್ಟ ವರ್ಗ.

* ಧರ್ಮ, ಸಾಮಾಜಿಕ ಸ್ಥಾನಮಾನ ಮತ್ತು ಆಸ್ತಿ ಇವೆಲ್ಲ ಒಬ್ಬ ಮನುಷ್ಯ ಮತ್ತೊಬ್ಬನ ಸ್ವಾತಂತ್ರವನ್ನು ನಿಯಂತ್ರಿಸಲು ಹೊಂದಿರಬೇಕಾದ ಬಲ ಮತ್ತು ಅಧಿಕಾರದ ಮೂಲಗಳು.

* ಜಾತಿ ಮನುಷ್ಯನ ನೈಸರ್ಗಿಕ ಶಕ್ತಿಗಳನ್ನು ಮತ್ತಲ್ಲೊಲವುಗಳನ್ನು ಅವನ ಚೇತನವನ್ನು ಸಾಮಾಜಿಕ ಕಟ್ಟುಪಾಡುಗಳಿಗೆ ಒಳಪಡಿಸುವುದರಿಂದ ಒಂದು ಆರ್ಥಿಕ ಸಂಘಟನೆಯಾಗಿ ಅದು ಒಂದು ಕೇಡುಂಟುಮಾಡುವ ವ್ಯವಸ್ಥೆ.

* "ಹಿಂದು" ಎಂಬ ಹೆಸರೇ ಒಂದು ವಿದೇಶಿ ಹೆಸರು-ಮಹಮ್ಮದೀಯರು ತಮ್ಮನ್ನು ಸ್ಥಳೀಯರಿಂದ ಪ್ರತ್ಯೇಕವಾಗಿ ಗುರ್ತಿಸಿಕೊಳ್ಳಲು ಕೊಟ್ಟಿರುವಂತದ್ದು. ಮಹಮ್ಮದೀಯ ಅತಿಕ್ರಮಣದ ಪೂರ್ವಕಾಲದ ಯಾವುದೇ ಸಂಸ್ಕೃತ ಗ್ರಂಥದಲ್ಲೂ ಇದು ಕಾಣುವುದಿಲ್ಲ. ಅವರಿಗೆ ತಾವು ಒಂದು ಸಮುದಾಯ ಎಂಬ ಪರಿಕಲ್ಪನೆ ಇಲ್ಲದ್ದರಿಂದ ಒಂದು ಸಾಮಾನ್ಯ ಹೆಸರಿನ ಅವಶ್ಯಕತೆ ಅವರಿಗೆ ಅನಿಸಿರಲಿಲ್ಲ.

* ಹಿಂದು ಸಮಾಜ ಎನ್ನುವುದು ಅಸ್ತಿತ್ವದಲ್ಲಿಲ್ಲ. ಅದು ಜಾತಿಗಳ ಒಂದು ಸಂಗ್ರಹ ಮಾತ್ರ. ಪ್ರತಿಯೊಂದು ಜಾತಿ ತನ್ನ ಅಸ್ತಿತ್ವದ ಪ್ರಜ್ಞೆ ಹೊಂದಿದೆ. ಅದರ ಉಳಿವು ಅದರ ಅಸ್ತಿತ್ವದ ಸರ್ವಸ್ವ.

* ಪ್ರಜಾಪ್ರಭುತ್ವ ಕೇವಲ ಸರ್ಕಾರದ ಒಂದು ರೂಪವಲ್ಲ. ಅದು ಪ್ರಾಥಮಿಕವಾಗಿ ಸಹಬಾಳ್ವೆ ಮತ್ತು ಒಟ್ಟುಗೂಡಿ ಸಂವಹನಗೊಳ್ಳುವ ಅನುಭವದ ಒಂದು ವಿಧಾನ. ಸಹಮಾನವರ ಬಗೆಗಿನ ಗೌರವ ಮತ್ತು ಪೂಜ್ಯಭಾವವೇ ಅದರ ತಿರುಳು.

* ಚಾತುರ್ವರ್ಣ್ಯಕ್ಕಿಂತ ಹೆಚ್ಚು ಅವಮಾನಕಾರವಾದ ಸಾಮಾಜಿಕ ಸಂಘಟನೆಯ ಒಂದು ವ್ಯವಸ್ಥೆ ಇರಲು ಸಾಧ್ಯವಿಲ್ಲ. ಅದು ಜನರನ್ನು ಸಹಾಯಕಾರಿ ಚಟುವಟಿಕೆಯಿಂದ ನಿಶ್ಚೇತನಗೊಳಿಸುವ, ನಿಷ್ಕ್ರಿಯಗೊಳಿಸುವ ಮತ್ತು ಕುಂಠಿತಗೊಳಿಸುವ ಒಂದು ವ್ಯವಸ್ಥೆ.

* ಉಪಜಾತಿಗಳ ನಿರ್ಮೂಲನೆ ಜಾತಿಗಳನ್ನು ಮತ್ತಷ್ಟು ಗಟ್ಟಿಗೊಳಿಸಬಹುದಷ್ಟೇ ಮತ್ತು ಅವನ್ನು ಹೆಚ್ಚು ಬಲಿಷ್ಟಗೊಳಿಸುವುದರಿಂದ ಹೆಚ್ಚು ಹಾನಿಕರ. ಆದ್ದರಿಂದ ಈ ಪರಿಹಾರ ಕಾರ್ಯಸಾಧ್ಯವೂ ಅಲ್ಲ ಮತ್ತು ಪರಿಣಾಮಕಾರಿಯೂ ಅಲ್ಲ.

* ಸಹಭೋಜನ ಜಾತಿಯ ಭಾವವನ್ನು ಮತ್ತು ಜಾತಿಯ ಪ್ರಜ್ಞೆಯನ್ನು ಉಡುಗಿಸುವಲ್ಲಿ ಯಶಸ್ವಿಯಾಗಿರುವುದಿಲ್ಲ.

* ನಿಜವಾದ ಮದ್ದು ಎಂದರೆ ಅಂತರ್ಜಾತಿ ಮದುವೆ, ರಕ್ತದ ಬೆಸುಗೆ ಮಾತ್ರವೇ ಬಂಧುತ್ವದ ಭಾವನೆಯನ್ನು ಸೃಷ್ಟಿಸುತ್ತದೆ.

* ಜಾತಿ ವಿನಾಶಕ್ಕೆ ಅಂತರ್ಜಾತಿ ವಿವಾಹವೇ ಮದ್ದು, ಬೇರೆ ಯಾವುದೇ ದ್ರಾವಣದಲ್ಲೂ ಜಾತಿ ಕರಗುವುದಿಲ್ಲ.

* ಜಾತಿಗೆ ಒಂದು ದೈವಿಕ ನೆಲೆಯಿದೆ. ಆದ್ದರಿಂದ ಜಾತಿಗೆ ತೊಡಿಸಿರುವ ಪಾವಿತ್ರ್ಯ ಮತ್ತು ದೈವಿಕತೆಯನ್ನು ನೀವು ಧ್ವಂಸಪಡಿಸಬೇಕು. ಕೊನೆಗೂ ಇದರ ಅರ್ಥ ಶಾಸ್ತ್ರಗಳ, ವೇದಗಳ ಅಧಿಕಾರವನ್ನು ಧ್ವಂಸಗೊಳಿಸುವುದು ಎಂದೇ ಆಗುತ್ತದೆ.

* ಪುರೋಹಿತ ವರ್ಗವನ್ನು ಯಾವುದಾದರೂ ಶಾಸನದ ನಿಯಂತ್ರಣದೊಳಕ್ಕೆ ತರಬೇಕು. ಹಾಗಾದಲ್ಲಿ ಅದು ಕುಹಕವಾಡಿ, ಜನರನ್ನು ದಿಕ್ಕುಗೆಡಿಸದಂತೆ ತಡೆಯುತ್ತದೆ. ಅದು ಅದನ್ನು ಎಲ್ಲರಿಗೂ ತೆರೆದು ಕೊಟ್ಟು ಜನಮುಖಿಗೊಳಿಸುತ್ತದೆ. ಅದು ಖಂಡಿತವಾಗಿ ಬ್ರಾಹ್ಮಣವಾದದ ನಾಶಕ್ಕೆ ಮತ್ತು ಬ್ರಾಹ್ಮಣವಾದದ ಅವತಾರವೇ ಆದ ಜಾತಿಯ ವಿನಾಶಕ್ಕೂ ಸಹಾಯವಾಗುತ್ತದೆ.

* ಚಾತುರ್ವಣ್ಯ ಹೆಚ್ಚು ಹಾನಿಕಾರಕ, ಕಾರಣ ವರ್ಗವ್ಯವಸ್ಥೆಯ ಪರಿಣಾಮವೆಂದರೆ, ಜನಸಮೂಹಗಳನ್ನು ಜ್ಞಾನಾರ್ಜನೆಯ ಅವಕಾಶವನ್ನು ವಂಚಿಸಿ ಕೀಳಾಗಿಸುವುದು ಮತ್ತು ಶಸ್ತ್ರಸಜ್ಜಿತರಾಗುವ ಹಕ್ಕನ್ನು ನಿರಾಕರಿಸಿ ಕೈಲಾಗದವರನ್ನಾಗಿ ಮಾಡುವುದು.

* ವರ್ಣ ಮತ್ತು ಜಾತಿ ಎರಡು ಅತ್ಯಂತ ಭಿನ್ನ ಪರಿಕಲ್ಪನೆಗಳು. ವರ್ಣ ಎಂಬುದು ಪ್ರತಿಯೊಬ್ಬನ ಯೋಗ್ಯತೆಗೆ ಅನುಸಾರವಾಗಿ ಎಂಬ ಸೂತ್ರವನ್ನು ಆಧರಿಸಿದ್ದರೆ, ಜಾತಿ ಪ್ರತಿಯೊಬ್ಬನ ಹುಟ್ಟಿಗೆ ಅನುಸಾರವಾಗಿ ಎಂಬ ಸೂತ್ರವನ್ನು ಆಧರಿಸಿದೆ.

ಡಾ. ಅಂಬೇಡ್ಕರ್ ಮತ್ತು ರಾಷ್ಟ್ರೀಯವಾದ

"ರಾಜಕೀಯವಾಗಿ ಯೋಚಿಸುವ ಭಾರತೀಯರು 'ಭಾರತದ ಜನತೆ' ಎನ್ನುವ ಪದಗುಚ್ಛದ ಬಗ್ಗೆ ಮುನಿದುಕೊಂಡ ದಿನಗಳನ್ನು ನೆನಪಿಸಿಕೊಳ್ಳುತ್ತೇನೆ. ಅದರ ಬದಲಾಗಿ 'ಭಾರತ ದೇಶ' ಎನ್ನುವ ಪದಗುಚ್ಛವೇ ಒಳ್ಳೆಯದು ಎಂದು ಅವರು ಸೂಚಿಸಿದರು. ನನ್ನ ಅಭಿಪ್ರಾಯದಲ್ಲಿ, ನಾವು ಒಂದು ದೇಶ ಎಂದು ನಂಬುವಲ್ಲಿ ನಾವೊಂದು ದೊಡ್ಡ ಭ್ರಮೆಯನ್ನು ಪೋಷಿಸುತ್ತಿದ್ದೇವೆ. ಸಾವಿರಾರು ಜಾತಿಗಳಲ್ಲಿ ವಿಭಜನೆಗೊಂಡಿರುವ ಜನ ಒಂದು ದೇಶವಾಗಲು ಹೇಗೆ ಸಾಧ್ಯ? ನಾವಿನ್ನೂ ದೇಶ ಎಂಬ ಪದದ ಸಾಮಾಜಿಕ ಮತ್ತು ಮಾನಸಿಕ ಅರ್ಥದಲ್ಲಿ ಒಂದು ದೇಶವಾಗಿಲ್ಲ ಎಂಬುದನ್ನು ಎಷ್ಟು ಬೇಗ ಅರಿತರೆ ಅಷ್ಟು ನಮಗೆ ಒಳಿತು. ಏಕೆಂದರೆ, ಆಗ ಮಾತ್ರವೇ ನಾವು ಒಂದು ದೇಶವಾಗುವ ಅಗತ್ಯತೆಯನ್ನು ಅರಿಯುತ್ತೇವೆ, ಮತ್ತು ಆ ಗುರಿಯನ್ನು ಈಡೇರಿಸಿಕೊಳ್ಳುವ ಮಾರ್ಗೋಪಾಯಗಳ ಬಗ್ಗೆ ಗಂಭೀರವಾಗಿ ಯೋಚಿಸುತ್ತೇವೆ. ಆ ಗುರಿ ಈಡೇರಿಕೆ ಬಹಳ ಕಷ್ಟವಿದೆ., ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಇದ್ದುದಕ್ಕಿಂತಲೂ ಬಹಳ ಹೆಚ್ಚು. ಅಮೇರಿಕಾದಲ್ಲಿ ಜಾತಿ ಸಮಸ್ಯೆ ಇಲ್ಲ. ಭಾರತದಲ್ಲಿ ಜಾತಿಗಳಿವೆ. ಜಾತಿಗಳು ರಾಷ್ಟ್ರ-ವಿರೋಧಿ. ಮೊದಲನೆಯದಾಗಿ, ಅವು ಸಾಮಾಜಿಕ ಜೀವನದಲ್ಲಿ ಪ್ರತ್ಯೇಕತೆಯನ್ನು ತರುವುದರಿಂದಾಗಿ. ಸಾಮಾಜಿಕ ಜೀವನದಲ್ಲಿ ಜಾತಿಗಳು ಜನರನ್ನು ಬೇರ್ಪಡಿಸುತ್ತವೆ. ಅವು ಜಾತಿ-ಜಾತಿಯ ಮಧ್ಯೆ ಅಸೂಯೆ ಮತ್ತು ಹೇವರಿಕೆಯನ್ನು ಹುಟ್ಟುಹಾಕುವುದರಿಂದಾಗಿಯೂ ರಾಷ್ಟ್ರೀಯತೆಗೆ ವಿರುದ್ಧವಾದವುಗಳು. ಆದರೆ ನಾವು ವಾಸ್ತವವಾಗಿ ಒಂದು ದೇಶವಾಗಬೇಕಾದರೆ ಈ ಎಲ್ಲಾ ಕಷ್ಟಗಳನ್ನು ಮೀರಿ ನಿಲ್ಲಬೇಕಾಗಿದೆ. ಏಕೆಂದರೆ ಒಂದು ದೇಶ ಇದ್ದಾಗ ಮಾತ್ರವೇ ಸೋದರತ್ವ ವಾಸ್ತವಗೊಳ್ಳುತ್ತದೆ. ಸೋದರತ್ವ ಇಲ್ಲದೆ ಹೋದರೆ ಸಮಾನತೆ ಮತ್ತು ಸ್ವಾತಂತ್ರ್ಯ ಮೇಲ್ಪದರದ ಬಣ್ಣಕ್ಕಿಂತ ಆಳಕ್ಕೆ ಹೋಗಲು ಸಾಧ್ಯವಿಲ್ಲ.

–ನವೆಂಬರ್ 25, 1949ರಂದು ಸಂವಿಧಾನ ಸಭೆಯಲ್ಲಿ
ಕರಡು ಸಂವಿಧಾನವನ್ನು ಮಂಡಿಸುತ್ತ ಮಾಡಿದ ಭಾಷಣದಲ್ಲಿ



ಪಶ್ಚಿಮ ಬಂಗಾಳ ಮೊದಲ ಹಂತದಲ್ಲಿ ಶೇ. 81 ಮತದಾನ

ಪಶ್ಚಿಮ ಬಂಗಾಳದಲ್ಲಿ ಏಪ್ರಿಲ್ 4 ರಂದು ಮೊದಲ ಹಂತದ ಚುನಾವಣೆಗಳು ಜರುಗಿವೆ. ಈ ಚುನಾವಣೆಗಳಲ್ಲಿ ಒಟ್ಟಾರೆ ಶೇ. 81 ರಷ್ಟು ಮತದಾನವಾಗಿದೆ. ಪುರುಲಿಯಾ, ಬಂಕುರ, ಪಶ್ಚಿಮ ಮಿಡ್ನಾಪುರದಲ್ಲಿ ಹರಡಿಕೊಂಡಿರುವ ನಕ್ಸಲ್ ಹಿಂಸಾಪೀಡಿತವಾದ ಜಂಗಲ್ ಮಹಲ್ ಪ್ರದೇಶದಲ್ಲಿ 13 ಅತಿಸೂಕ್ಷ್ಮ ಕ್ಷೇತ್ರಗಳೆಂದು ಗುರುತಿಸಲಾದ ಕ್ಷೇತ್ರಗಳಿದ್ದುವು. ಜನತೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಮತಚಲಾಯಿಸಿರುವುದು ಸಕಾರಾತ್ಮಕ ಅಂಶವೆಂದೂ, ಆಳುವ ಟಿಎಂಸಿ ಸರಕಾರದ ವಿರುದ್ಧ ಅತೃಪ್ತಿ ಈ ಒಳ್ಳೆಯ ಮತದಾನದಲ್ಲಿ ವ್ಯಕ್ತವಾಗಿದೆ ಎಂದೂ ಅಭಿಪ್ರಾಯಗಳು ವಿಶ್ಲೇಷಣೆಗಳು ಕೇಳಿಬರುತ್ತಿವೆ. 40 ಲಕ್ಷ ಮತದಾರರರು ಬಿರು ಬಿಸಿಲನ್ನು ಲೆಕ್ಕಿಸದೇ ಸಾಲುಗಳಲ್ಲಿ ನಿಂತು ಮತ ಚಲಾವಣೆ ಮಾಡಿದ್ದಾರೆ. ಪುರುಲಿಯಾದಲ್ಲಿ ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸಿದ ಚುನಾವಣಾಧಿಕಾರಿಯೊಬ್ಬರನ್ನು ಬದಲಿಸಲಾಗಿದೆ. ಮತಗಟ್ಟೆಗಳ ಬಳಿ ಮತದಾರರ ಮೇಲೆ ಪ್ರಭಾವ ಬೀರಲು ಯತ್ನಿಸಿದ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರಿಗೆ ಎಡರಂಗದ ಕಾರ್ಯಕರ್ತರು ಪ್ರತಿರೋಧವನ್ನು ಒಡ್ಡಿದ್ದಾರೆ. ಹಿಂಸಾಪೀಡಿತ ಪ್ರದೇಶಗಳಲ್ಲಿ ಯಾವುದೇ ಸನ್ನಿವೇಶವನ್ನು ಎದುರಿಸಲು ಪ್ರತಿಮತಗಟ್ಟೆಗಳ ಬಳಿ ಕನಿಷ್ಠ 10 ಕೇಂದ್ರ ಮೀಸಲು ಅರೆಸೇನಾ ಪಡೆ ಯೋಧರನ್ನು ನಿಯೋಜಿಸಲಾಗಿತ್ತು. ತುರ್ತು ಪರಿಸ್ಥಿತಿ ಎದುರಿಸಲು, ಹೆಲಿಕಾಪ್ಟರ್ ಮೂಲಕ ಸಮೀಕ್ಷೆ, ವೈಮಾನಿಕ ಅಂಬುಲೆನ್ಸ್ ವ್ಯವಸ್ಥೆ ಕೂಡ ಕಲ್ಪಿಸಲಾಗಿತ್ತು. ಇವೆಲ್ಲವುಗಳ ಜೊತೆಗೆ ತುರ್ತು ಕಾರ್ಯಾಚರಣೆ ಪಡೆ ಕೂಡ ಸಿದ್ಧವಾಗಿದ್ದವು. 4,945 ಮತಗಟ್ಟೆಗಳ ಪೈಕಿ 1,962 ಮತಗಟ್ಟೆಗಳ ಬಗೆಗೆ ವಿಶೇಷ ರಕ್ಷಣಾ ವ್ಯವಸ್ಥೆ ಮಾಡಲಾಗಿತ್ತು. ತೃಣಮೂಲ ಕಾಂಗ್ರೆಸ್ ಗೂಂಡಾಗಳ ಬೆದರಿಕೆ ಇದ್ದರೂ ಸಹ ಈಗೀಗ ಹಳ್ಳಿಹಳ್ಳಿಗಳಲ್ಲಿ ಎರಡು ಬಗೆಯ ಕೆಂಬಾವುಟಗಳು ಮತ್ತು ನಾನಾ ಪ್ರಜಾಸತ್ತಾತ್ಮಕ ಪಕ್ಷಗಳ ಬಾವುಟಗಳು ರಾರಾಜಿಸುತ್ತಿವೆ. ರಕ್ತದಾಹಿ ತೃಣಮೂಲದ ತೀವ್ರ ಬೆದರಿಕೆ ಇದ್ದರೂ ಸಹ ಎಡರಂಗವು ದಿಟ್ಟವಾಗಿ ಮನೆ ಮನೆ ಪ್ರಚಾರವನ್ನು ನಡೆಸುತ್ತಿದೆ. ಬರ್ಧ್ವಾನ್‌ನಲ್ಲಿ ಕಾಲ್ನ ಎಂಬ ವಿಧಾನಸಭಾ ಕ್ಷೇತ್ರದ ಹಳ್ಳಿಗಳಲ್ಲಿ ಕಟ್ಟಲಾಗಿದ್ದ ಕೆಂಬಾವುಟ, ತೋರಣ, ಬ್ಯಾನರ್ ಇತ್ಯಾದಿ ಪ್ರಚಾರ ಸಾಮಾಗ್ರಿಗಳನ್ನು ರಾತ್ರೋರಾತ್ರಿ ಕದ್ದೊಯ್ಯಲಾಗಿತ್ತು.

ಬೆಳಿಗ್ಗೆ ಎದ್ದಾಗ ಕೆಂಬಾವುಟಗಳು, ಪ್ರಚಾರ ಸಾಮಾಗ್ರಿಗಳು ಇಲ್ಲದಿದ್ದುದನ್ನು ಕಂಡ ಜನತೆ ಪೋಲೀಸರ ಮೇಲೆ ತೀವ್ರ ಒತ್ತಡ ಹೇರಿದರು. ಅದರ ಫಲವಾಗಿ ಪೋಲೀಸರು ಹುಡುಕಾಟ ನಡೆಸಿದಾಗ ತೃಣಮೂಲ ಕಾಂಗ್ರೆಸ್ ಮುಖಂಡ ಶೂಕುರ್ ಅಲಿ ಎಂಬಾತನ ಮನೆಯಲ್ಲಿ ಈ ಎಲ್ಲ ಪ್ರಚಾರ ಸಾಮಾಗ್ರಿಗಳು ದೊರೆತವು. ಕೊನೆಗೆ ಪೋಲೀಸರು ಅವುಗಳನ್ನು ಎಡರಂಗ ಕಾರ್ಯಕರ್ತರಿಗೆ ಒಪ್ಪಿಸಿದರು. ಇಂತಹ ಘಟನೆಗಳು ಗ್ರಾಮೀಣ ಬಂಗಾಳದಲ್ಲಿ ಸಾಮಾನ್ಯ ಎಂಬಂತೆ ವ್ಯಾಪಕವಾಗಿ ನಡೆಯುತ್ತಿದೆ.

ಪಶ್ಚಿಮ ಮೇಧಿನಿಪುರದ ದಂಟನ್ ಪ್ರದೇಶದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ ಮಿಶ್ರ ಪ್ರಚಾರವನ್ನು ನಡೆಸಿದರು. ಹೌರಾದ ಬಾಲಿ ಪ್ರದೇಶ ತೃಣಮೂಲಿಗರ ಬೆದರಿಕೆ, ದಾಳಿ ತೀವ್ರವಾಗಿರುವ ಮತ್ತೊಂದು ಪ್ರದೇಶ. ಆದರೆ ಈ ಬಾರಿ ಜನತೆ ಇಲ್ಲಿಯೂ ಧೈರ್ಯವಾಗಿ ಚುನಾವಣಾ ಪ್ರಚಾರಕ್ಕೆ ಮುನ್ನುಗ್ಗಿದರು. ಇಲ್ಲಿ ಉತ್ಸಾಹದ ರ‍್ಯಾಲಿ ಬಹಿರಂಗ ಸಭೆಗಳನ್ನು ನಡೆಸಲಾಗಿದೆ.

ಬಿರ್‌ಭೂಮ್ ತೃಣಮೂಲದ ಹಿಂಸೆ, ದಬ್ಬಾಳಿಕೆಯಲ್ಲಿ ನಲುಗಿರುವ ಮತ್ತೊಂದು ಪ್ರದೇಶ. ಇಲ್ಲಿ ತೃಣಮೂಲದ ಜಿಲ್ಲಾ ಅಧ್ಯಕ್ಷ ಒಬ್ಬ ಕುಖ್ಯಾತ ಮಾಫಿಯಾ ಮುಖಂಡ. ಆತನ ಹೆಸರು ಅನುಬ್ರತ ಮಂಡೋಲ್. ಈಗಲೂ ಸಾಮಾನ್ಯ ಜನತೆ ಈತನ ಹೆಸರು ಕೇಳಿದರೆ ಹೆದರುವ ಪರಿಸ್ಥಿತಿ ಇದೆ. ಆದರೆ ಸಿಪಿಐ(ಎಂ) ಜೊತೆಗೆ ಇತರ ಪ್ರಜಾಸತ್ತಾತ್ಮಕ ಪಕ್ಷಗಳು ಸೇರಿ ಈ ಭಾಗದಲ್ಲಿ ಪ್ರಚಾರ, ಬಹಿರಂಗ ಸಭೆಗಳನ್ನು ನಡೆಸಲಾಗಿದೆ. ನಾನೂರ, ಲಭಪುರ್, ಕೋಯಿರಾಶೋಲ್ ಮತ್ತು ಮಯೂರೇಶ್ವರ್ ಮುಂತಾದ ಹಿಂಸಾಪೀಡಿತ ಪ್ರದೇಶದಲ್ಲಿ ದಿಟ್ಟವಾಗಿ ಚುನಾವಣಾ ಪ್ರಚಾರ ನಡೆಸಲಾಗಿದೆ.



ತೃಣಮೂಲ ಉತ್ತರಿಸಬೇಕಾದ ಪ್ರಶ್ನೆಗಳು

2011 ರಿಂದ ಇಲ್ಲಿಯವರೆಗೆ ಆಡಳಿತ ನಡೆಸುತ್ತಾ ಬಂದಿರುವ ತೃಣಮೂಲ ಚುನಾವಣಾ ಸಂದರ್ಭದಲ್ಲಿಯಾದರೂ ಈ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ.

ಶಾರದಾ ಚಿಟ್‌ಫಂಡ್ ಹಗರಣದಲ್ಲಿ ತೃಣಮೂಲದ ಮುಂಚೂಣಿ ಮುಖಂಡರು ಸಿಲುಕಿಕೊಂಡಿದ್ದಾರೆ. ಹಗರಣದ ಸಂತ್ರಸ್ತರಿಗೆ ಪರಿಹಾರ ದೊರೆಯಲಿಲ್ಲ. ಈಗ 'ನಾರದಾ' ಸಂಸ್ಥೆ ಬಯಲಿಗೆಳೆದ ಹಗರಣದಲ್ಲಿ ಹತ್ತಾರು ತೃಣಮೂಲ ಕಾಂಗ್ರೆಸಿಗರು ಲಂಚ ಸ್ವೀಕರಿಸುತ್ತಿರುವ ವಿಡಿಯೋಗಳು ಬಟಾಬಯಲಾಗಿ ಹಗರಣ ಜಗಜ್ಜಾಹೀರಾಗಿದೆ. ಆದರೆ ತೃಣಮೂಲವು 'ನಾರದಾ' ಸಂಸ್ಥೆಯ ವಿಡಿಯೋಗಳಲ್ಲಿ ದಾಖಲಾಗಿರುವುದು ತೃಣಮೂಲ ಪಕ್ಷಕ್ಕೆ ನಿಧಿ ಸ್ವೀಕರಿಸುತ್ತಿರುವ ದೃಶ್ಯ ಎನ್ನುತ್ತಿದೆ. ಸ್ವೀಕರಿಸುತ್ತಿರುವುದು ಪಕ್ಷದ ನಿಧಿಯಾದರೆ ಸ್ವೀಕರಿಸಿದ ಹಣಕ್ಕೆ ರಸೀದಿ ಏಕೆ ಕೊಟ್ಟಿಲ್ಲ ಎಂದರೆ ಅದಕ್ಕೆ ಯಾರ ಬಳಿಯೂ ಉತ್ತರವಿಲ್ಲ. ವಿಡಿಯೋಗಳಲ್ಲಿ ಹಣ ಸ್ವೀಕರಿಸಿರುವ ಯಾರೂ ರಸೀದಿ ಬರೆಯುವ ಅಥವಾ ರಸೀದಿ ನೀಡುವ ದೃಶ್ಯಗಳು ಕಂಡು ಬಂದಿಲ್ಲ.

ಜಾಹಿರಾತು ಭರಾಟೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ತಮ್ಮ ಐದು ವರ್ಷಗಳ ಆಳ್ವಿಕೆಯ ಕೊನೆಗಾಲದಲ್ಲಿ ಹಲವಾರು ಜನಪ್ರಿಯ ಯೋಜನೆಗಳನ್ನು ಪ್ರಕಟಿಸಿದ್ದಾರೆ. ಇವುಗಳ ಜಾಹಿರಾತಿಗಾಗಿ ದೊಡ್ಡ ಪ್ರಮಾಣದಲ್ಲಿ ಹಣದ ಹೊಳೆ ಹರಿಸಲಾಗುತ್ತಿದೆ. ನಲವತ್ತು ವರ್ಷಗಳಲ್ಲಿ ಮಾಡಬಹುದಾದ ಸಾಧನೆಯನ್ನು ತೃಣಮೂಲ ಸರಕಾರ ಕೇವಲ ಐದು ವರ್ಷಗಳಲ್ಲಿ ಮಾಡಿದೆ ಎಂದು ಜಾಹಿರಾತುಗಳು ಸಾರುತ್ತಿವೆ. ಎಡರಂಗ ಆರಂಭಿಸಿದ ಯೋಜನೆಗಳನ್ನು, ಕೇಂದ್ರ ಸರಕಾರದ ಯೋಜನೆಗಳನ್ನು ತಮ್ಮ ಯೋಜನೆ ಎಂದು ಬಿಂಬಿಸಿಕೊಳ್ಳುವ ಕೆಲಸವೂ ನಡೆದಿದೆ. ಶಾಲಾ ಮಕ್ಕಳಿಗೆ ಸೈಕಲ್ ನೀಡುವ ಯೋಜನೆಯಲ್ಲಿ ಸರಿಯಾದ ರೀತಿಯಲ್ಲಿ ಟೆಂಡರ್ ಕರೆಯದೆ ಅಕ್ರಮ ಎಸಗಲಾಗಿದೆ. ಪಶ್ಚಿಮ ಬಂಗಾಳದಲ್ಲಿ ರೈತರ ಆತ್ಮಹತ್ಯೆಗಳು ಹೆಚ್ಚುತ್ತಿವೆ. ಅತಂತ್ರ ಕಾರ್ಮಿಕರ ಆತ್ಮಹತ್ಯೆಗಳು ಸಹ ನಡೆದಿವೆ. ಚಹಾ ತೋಟದ ಕಡೆಯಿಂದ ಹಸಿವಿನ ಸಾವುಗಳ ವರದಿಗಳು ಕೇಳಿಬರುತ್ತಿವೆ. ದೊಡ್ಡ ಸಂಖ್ಯೆಯ ಜನರು ಇಂತಹ ಬದುಕನ್ನ ಅರಸಿ ಹೊರ ರಾಜ್ಯಗಳಿಗೆ ವಲಸೆ ಹೋಗುತ್ತಿದ್ದಾರೆ. ವೇಶ್ಯಾವಾಟಿಕೆ ಹೆಚ್ಚುತ್ತಿದೆ. ಇಂತಹ ಸನ್ನಿವೇಶದಲ್ಲಿಯೂ ಸರಕಾರದ ಸಾಧನೆಗಳ ಕುರಿತ ಜಾಹಿರಾತುಗಳನ್ನು ಎಗ್ಗಿಲ್ಲದೆ ನೀಡಲಾಗುತ್ತಿದೆ. ಒಂದು ಕಡೆ ತೃಣಮೂಲ ಕಾಂಗ್ರೆಸ್ ಮುಖಂಡರು ಆಸ್ತಿಪಾಸ್ತಿ ಮಾಡಿಕೊಂಡು ಶ್ರೀಮಂತರಾಗುತ್ತ ನಡೆದಿದ್ದರೆ ತೃಣಮೂಲ ಸರಕಾರದ ನೀತಿಗಳಿಂದ ದಿವಾಳಿಯಾದ ಜನರು ಸಂಕಷ್ಟಗಳ ಕೂಪದಲ್ಲಿ ಬೇಯುತ್ತಿದ್ದಾರೆ.

ಪಶ್ಚಿಮ ಬಂಗಾಳದ 60 ಚಿಟ್ ಫಂಡ್ ಕಂಪನಿಗಳ ವ್ಯವಹಾರಗಳ ಬಗೆಗೆ ಸಿಬಿಐ ತನಿಖೆ ನಡೆಯುತ್ತಿದೆ. ನವೆಂಬರ್ 2015 ರಿಂದ ಫೆಬ್ರವರಿ 2016 ರ ವರೆಗೆ ಸುಮಾರು 300 ಕೋಟಿ ರೂಪಾಯಿಗಳ ಕಪ್ಪುಹಣ ತೃಣಮೂಲ ಮುಖಂಡರು ಮತ್ತು ಹಗರಣಗಳ ರೂವಾರಿಗಳ ಕೈಯಲ್ಲಿ ಹರಿದಾಡಿದೆ ಎಂಬ ಅಂದಾಜಿದೆ.

2012ರಲ್ಲಿ ಸಿಲಿಗುರಿ-ಜಲಪೈಗುರಿಗಳಲ್ಲಿ ಅಭಿವೃದ್ಧಿಗಾಗಿ ನೀಡಿದ್ದ 16.97 ಕೋಟಿ ರೂಪಾಯಿಗಳನ್ನು ಕಬಳಿಸಲಾಗಿದೆ. ಬಾಗ್ಡೋಡಾ ಎಂಬಲ್ಲಿ ಸ್ಮಶಾನದ ವಿದ್ಯುತೀಕರಣಕ್ಕಾಗಿ ಈ ಹಣವನ್ನು ಬಿಡುಗಡೆ ಮಾಡಲಾಗಿದೆ. ಆದರೆ ಕಾಗದದಲ್ಲಿ ತೋರಿಸಲಾದ ಅಭಿವೃದ್ಧಿ ಕೆಲಸ ವಾಸ್ತವವಾಗಿ ನಡೆದಿಲ್ಲ. ಇಂತಹ ಹಗರಣಗಳು ತೃಣಮೂಲ ಆಡಳಿತದ ಉದ್ದಕ್ಕೂ ಇವೆ. ಈ ಹಗರಣ ಮಹಾಪರ್ವತದ ತುದಿ ಮಾತ್ರ. ಸರಿಯಾದ ತನಿಖೆ ನಡೆದರೆ ಇನ್ನೂ ಏನೇನು ಹಗರಣಗಳು ಹೊರಬರುವವೋ ನೋಡಬೇಕು. ತೃಣಮೂಲ ಕಾಂಗ್ರೆಸ್ ಪಕ್ಷ ಈ ಚುನಾವಣಾ ಸಂದರ್ಭದಲ್ಲಾದರೂ ಈ ಮೇಲಿನ ವಿಷಯಗಳಲ್ಲಿ ಜನತೆಗೆ ಉತ್ತರ ನೀಡಬೇಕಿದೆ.

ಕೇರಳದಲ್ಲಿ ಎಡ ನೇತೃತ್ವದ ಸರಕಾರ ಅಧಿಕಾರಕ್ಕೆ-ಜನಮತ

ಕೇರಳ ರಾಜ್ಯಕ್ಕೆ ಸಂಬಂಧಿಸಿದಂತೆ ಜನಮತ ಸಂಗ್ರಹವೊಂದು ನಡೆದಿದ್ದು ಕೇರಳದಲ್ಲಿ ಮತ್ತೆ ಎಲ್‌ಡಿಎಫ್ ಸರಕಾರ ಅಸ್ತಿತ್ವಕ್ಕೆ ಬರಲಿದೆ ಎಂದು ಹೇಳಿದೆ. 'ಸಿ' ಓಟರ್- ಇಂಡಿಯಾ ಟಿವಿ' ಸಂಸ್ಥೆ ನಡೆಸಿರುವ ಈ ಸಮೀಕ್ಷೆಯು 140 ಸದಸ್ಯ ಬಲದ ಕೇರಳ ವಿಧಾನ ಸಭೆಯಲ್ಲಿ ಎಲ್‌ಡಿಎಫ್‌ಗೆ ಕನಿಷ್ಠ 86 ಸ್ಥಾನಗಳು ದೊರೆಯಲಿವೆ ಎಂದು ತಿಳಿಸಿದೆ. 2011ರ ಚುನಾವಣೆಯಲ್ಲಿ 72 ಸ್ಥಾನ ಗೆದ್ದಿದ್ದ ಕಾಂಗ್ರೆಸ್ ಕೂಟವು ಈ ಚುನಾವಣೆಯಲ್ಲಿ 53 ಸ್ಥಾನಗಳನ್ನು ಪಡೆದುಕೊಳ್ಳುವುದಾಗಿ ಹೇಳಿದೆ. ಬಿಜೆಪಿ ನೇತೃತ್ವದ ಎನ್‌ಡಿಎ ಕೂಟಕ್ಕೆ ಅಂತಹ ಆಶಾದಾಯಕವಾದ್ದೇನು ಕಂಡು ಬಂದಿಲ್ಲ. ಬಂದರೆ ಒಂದು ಸ್ಥಾನ ಬರಬಹುದು ಎಂದು ಸಮೀಕ್ಷೆ ಹೇಳಿದೆ. ಎಲ್‌ಡಿಎಫ್‌ಗೆ ಶೇ. 44 ರಷ್ಟು ಮತಗಳು, ಯುಡಿಎಫ್ ಗೆ ಶೇ. 41 ರಷ್ಟು ಮತಗಳು, ಎನ್‌ಡಿಎ ಗೆ ಶೇ. 10 ರಷ್ಟು ಮತಗಳು ದೊರೆಯಲಿವೆ ಎಂದು ಸಮೀಕ್ಷೆ ಹೇಳಿದೆ.

ಅಸ್ಸಾಂ:

ಸೊರ್ಭೋಗ್ ಸ್ಥಾನ ಗೆಲ್ಲುವ ನಿಟ್ಟಿನಲ್ಲಿ

ಅಸ್ಸಾಂ ರಾಜ್ಯದ ಸೊರ್ಭೋಗ್ ಒಂದು ವಿಶಿಷ್ಟ ಕ್ಷೇತ್ರ. ಇಲ್ಲಿಯವರೆಗೆ ಐದುಬಾರಿ ಸಿಪಿಐ(ಎಂ) ಅಭ್ಯರ್ಥಿಯನ್ನು ಆರಿಸಿ ಕಳುಹಿಸಿದ ಹೆಮ್ಮೆ ಅದರದು.

1978 ರಲ್ಲಿ ಸಿಪಿಐ(ಎಂ)ನ ಹೇಮೆನ್ ದಾಸ್ ಮೊತ್ತಮೊದಲಿಗೆ ಈ ಕ್ಷೇತ್ರದಿಂದ ಆಯ್ಕೆ ಆದರು. 1983 ರಲ್ಲಿ ಅಸ್ಸಾಂನಲ್ಲಿ ಅಶಾಂತ ಪರಿಸ್ಥಿತಿಯಲ್ಲಿಯೂ ಸಿಪಿಐ(ಎಂ) ಇಲ್ಲಿಂದ ವಿಜಯಿಯಾಯಿತು. 1985 ರಲ್ಲಿ ಮೂರನೇ ಬಾರಿಯೂ ಹೇಮೆನ್ ದಾಸ್ ಆಯ್ಕೆಯಾದರು. 1991ರ ಚುನಾವಣೆಯಲ್ಲಿ ಗೆಲುವು ಸಿಗದಿದ್ದರೂ ಮತ್ತೆ 1996 ರಲ್ಲಿ ಹೇಮೆನ್ ದಾಸ್ 4 ನೇ ಬಾರಿಗೆ ಶಾಸಕರಾಗಿ ಚುನಾಯಿತರಾದರು. 2001 ಕೋಮುವಿಭಜನೆ, ಕೋಮುದ್ರುವೀಕರಣದ ಕಾರಣದಿಂದ ಸೋಲುಣ್ಣಬೇಕಾಯಿತು. 2006 ರಲ್ಲಿ ಸಿಪಿಐ(ಎಂ) ಹಿರಿಯ ಮುಖಂಡರಾದ ಮಾಜಿ ಸಂಸದ ಉದ್ಧವ್ ಬರ್ಮನ್ ಈ ಕ್ಷೇತ್ರದಿಂದ ಚುನಾಯಿತರಾದರು. 2011 ರಲ್ಲಿ ಸಂಕೀರ್ಣ ರಾಜಕೀಯ ಪರಿಸ್ಥಿತಿಯಲ್ಲಿ ಕೋಮುವಾದಿ ಧ್ರುವೀಕರಣದ ಕಾರಣದಿಂದ ಸೋಲುಂಟಾಯಿತು. 2016 ರ ಈ ಪ್ರಸ್ತುತ ಚುನಾವಣೆಯಲ್ಲಿ ಕ್ಷೇತ್ರದಲ್ಲಿ ಗೆಲುವು ಸಾಧಿಸುವ ಗುರಿಯೊಂದಿಗೆ ಸೆಣೆಸಲಾಗುತ್ತಿದೆ. ಸಿಪಿಐ(ಎಂ) ಹಿರಿಯ ಮುಖಂಡರಾದ ಮನೋರಂಜನ್ ತಾಲ್ಲೂಕುದಾರ್ ಎರಡನೇ ಬಾರಿಗೆ ಅಭ್ಯರ್ಥಿಯಾಗಿದ್ದಾರೆ. ಜನರ ಸಕಾರಾತ್ಮಕ ತೀರ್ಪನ್ನು ಎದುರು ನೋಡಲಾಗುತ್ತಿದೆ. ಸಿಪಿಐ(ಎಂ) ಅಸ್ಸಾಂನಲ್ಲಿ ಒಟ್ಟು 19 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ.

ನಮ್ಮ ಚುರು-ಟ್ವೀಟ್

Sahil Shah
-|@SahilBulla .
ಬಾಬಾ ರಾಂದೇವ್ ಮತ್ತು ಐಎಸ್‌ಐಎಸ್ ನಡುವಿನ ಸಾಮ್ಯತೆ ಏನು?
ಇಬ್ಬರೂ ತಲೆ ಕತ್ತರಿಸುವ ಸ್ಪರ್ಧೆಯಲ್ಲಿದ್ದಾರೆ.

ನಾಳಿನ ಕಾರ್ಯಕ್ರಮಗಳು :

1. **ಏಪ್ರಿಲ್ 11:** ಕೇಂದ್ರ ಸರ್ಕಾರಿ ನೌಕರರ, ರೈಲ್ವೇ ಮತ್ತು ರಕ್ಷಣಾ ಕ್ಷೇತ್ರದ ನೌಕಕರ ಮುಷ್ಕರ.
2. **ಏಪ್ರಿಲ್ 8 ರಿಂದ 14:** ದೇಶವ್ಯಾಪ್ತಿ ರೈತರ ಪ್ರತಿಭಟನಾ ವಾರಾಚರಣೆ: ಎಐಕೆಎಸ್
3. **ಏಪ್ರಿಲ್ 1 ರಿಂದ 12:** ರಾಜ್ಯಾದ್ಯಂತ ಅಸ್ಪೃಶ್ಯತಾ ವಿರೋಧಿ ಜನಾಂದೋಲನ: ದಲಿತ ಹಕ್ಕುಗಳ ಸಮಿತಿ
4. **ಏಪ್ರಿಲ್ 13:** 'ಸಮಾನತ ಸಂಕಲ್ಪ ದಿನ' ಅಂಗವಾಗಿ ಸಾಮೂಹಿಕ ಉಪವಾಸ ಸತ್ಯಾಗ್ರಹ, ಜಿಲ್ಲಾ/ತಾಲ್ಲೂಕು ಕೇಂದ್ರಗಳಲ್ಲಿ: ದಲಿತ ಹಕ್ಕುಗಳ ಸಮಿತಿ
5. **ಏಪ್ರಿಲ್ 14:** ಡಾ॥ ಬಿ.ಆರ್.ಅಂಬೇಡ್ಕರ್ 125ನೇ ಜನ್ಮದಿನ. ವಿವಿದೆಡೆ ಕಾರ್ಯಕ್ರಮಗಳು.
6. **ಏಪ್ರಿಲ್ 16:** ಬೆಂ.ವಿವಿ. ಘಟಿಕೋತ್ಸವಕ್ಕೆ ಕೇಂದ್ರ ಸಚಿವೆ ಸ್ಮೃತಿ ಇರಾನಿ ಭೇಟಿ ಖಂಡಿಸಿ ರೋಹಿತ್ ವೇಮುಲ ಪರ ನ್ಯಾಯಕ್ಕಾಗಿ ಜಂಟಿ ಹೋರಾಟ ಸಮಿತಿಯಿಂದ ಪ್ರತಿಭಟನೆ

ದಲಿತ ಬಂಡವಾಳವಾದ...........

ಪುಟ 15 ರಿಂದ

ವ್ಯವಸ್ಥೆ. 'ಆದ್ದರಿಂದ ದಲಿತ ಬಂಡವಾಳಶಾಹಿ ಜಾತಿ ಅಸಮಾನತೆ ತಾರತಮ್ಯ ನಿವಾರಿಸಬಹುದು. ಭಾರತದ ಬಹುಸಂಖ್ಯಾತ ದಲಿತರ ಸಾಮಾಜಿಕ ಸಮಸ್ಯೆಗಳನ್ನು, ಆರ್ಥಿಕ ಸಮಸ್ಯೆಗಳನ್ನು ಪರಿಹರಿಸಬಹುದು ಎನ್ನುವುದು ವಂಚನೆಯ ಮಾತೇ ಸರಿ.

ಕಪ್ಪು ಬಂಡವಾಳವಾದ

ಅಮೇರಿಕದಲ್ಲಿ ಬೆಳೆಸಲಾದ ಕಪ್ಪು ಬಂಡವಾಳವಾದದ ದಾರಿಯಲ್ಲಿ ದಲಿತ ಬಂಡವಾಳವಾದದ ಚರ್ಚೆ ಭಾರತದಲ್ಲಿ ನಡೆದಿದೆ. ಅಮೇರಿಕದ ಕಪ್ಪು ಜನಾಂಗದ ವಿರುದ್ಧ ನಿರಂತರವಾಗಿ ನಡೆಸಲಾದ ವರ್ಣ ದ್ವೇಷ ಮತ್ತು ಜನಾಂಗೀಯ ದಮನದ ವಿರುದ್ಧ ಬೆಳೆದು ಬಂದ ಕಪ್ಪು ಜನರ ಕ್ರಾಂತಿಕಾರಿ ಚಳುವಳಿಯನ್ನು ಮತ್ತು ಕ್ರಾಂತಿಕಾರಿ ಸಿದ್ಧಾಂತವನ್ನು ನಾಶ ಮಾಡಲು ಅಮೇರಿಕದ ಕಾರ್ಪೊರೇಟ್ ಉದ್ದಿಮೆದಾರರು ಬಳಸಿದ ಅಸ್ತ್ರವೇ ಕಪ್ಪು ಬಂಡವಾಳವಾದ. ಇದರ ಪರಿಣಾಮವಾಗಿ ಅಮೇರಿಕದಲ್ಲಿ ಸಾಕಷ್ಟು ಸಂಖ್ಯೆಯ ವ್ಯಕ್ತಿಗಳು ಬಂಡವಾಳದಾರರಾಗಿದ್ದಾರೆ. ಅಂತಹ ಯಶಸ್ವಿ ಉದ್ಯಮಿಗಳ ಕಥೆಗಳು ಹುಟ್ಟಿಕೊಂಡಿವೆ. ಆದರೆ ಅಮೇರಿಕದ ಬಹುಸಂಖ್ಯಾತ ಕರಿಯರು ತಮ್ಮ ಮೂಲ ಸಮಸ್ಯೆಗಳಿಂದ ಹೊರಬರಲಾಗಲಿಲ್ಲ. ಜನಾಂಗೀಯ ದ್ವೇಷ ಕಡಿಮೆಯಾಗಲಿಲ್ಲ. ಕರಿಯರ ಶೈಕ್ಷಣಿಕ ಅಸಮಾನತೆ ಹೋಗಲಿಲ್ಲ. ಉದ್ಯೋಗದ ಅಸಮಾನತೆ ಕಡಿಮೆಯಾಗಲಿಲ್ಲ. ಜೈಲುಗಳಲ್ಲಿ ಕೊಳೆಯುವವರ ಸಂಖ್ಯೆ ಕಡಿಮೆಯಾಗಲಿಲ್ಲ. ಆದ-ರೆ ಅಮೇರಿಕನ್ ಕಾರ್ಪೊರೇಟ್ ಜಗತ್ತು ಒಂದು ವಿಷಯದಲ್ಲಿ ಖುಷಿ ಪಡುತ್ತಿದೆ. ಕರಿಯರ ಕ್ರಾಂತಿಕಾರಿ ಚಳುವಳಿಯನ್ನು ಮತ್ತು ಅವರು ಎತ್ತಿ ಹಿಡಿದ ಕ್ರಾಂತಿಕಾರಿ ಸಿದ್ಧಾಂತವನ್ನು ಹತೋಟಿಯಲ್ಲಿಡಲು ಸಾಧ್ಯವಾಗಿದೆ.

ಭಾರತದಲ್ಲಿ ಇದೇ ಹಾದಿಯಲ್ಲಿ ದಲಿತ ಬಂಡವಾಳವಾದದ ಚರ್ಚೆ ಎತ್ತಲಾಗಿದೆ. ಇದನ್ನು ದಲಿತರ ವಿಮೋಚನೆಯ ದಾರಿ ಎನ್ನಬೇಕೋ ಅಥವಾ ದಲಿತರ ಕ್ರಾಂತಿಕಾರಿ ಪರ್ಯಾಯವನ್ನು ತಡೆಯುವ ಹುನ್ನಾರ ಎನ್ನಬೇಕೋ? ಇದು ದಲಿತರ ಕ್ರಾಂತಿಕಾರಿ ಪರ್ಯಾಯವನ್ನು ತಡೆಯುವ ಆಳುವ ವರ್ಗಗಳ ಹುನ್ನಾರ ಎನ್ನುವಂತೆ ಕಾಣುತ್ತಿದೆ.



ಮಾತಿಗೆ ತಪ್ಪಿದ ಸರ್ಕಾರ

ತುಮಕೂರಿನಲ್ಲಿ ಗುತ್ತಿಗೆ ಪೌರ ಕಾರ್ಮಿಕರ ಪ್ರತಿಭಟನೆ

ಗುತ್ತಿಗೆ ಮುನಿಸಿಪಾಲ್ ಕಾರ್ಮಿಕರ ಸೇವೆಗಳನ್ನು ಖಾಯಂ ಗೊಳಿಸುವುದಾಗಿ ಕಳೆದ ಮೂರು ವರ್ಷಗಳಿಂದ ದಿನ ದೂಡುತ್ತಾ ಬಂದಿರುವ ಕ್ರಮ ವಿರೋಧಿಸಿ ಕರ್ನಾಟಕ ರಾಜ್ಯ ಮುನಿಸಿಪಾಲ್ ಕಾರ್ಮಿಕರ ಸಂಘ ಹಾಗೂ ತುಮಕೂರು ಜಿಲ್ಲಾ ಪೌರ ಕಾರ್ಮಿರ ಸಂಘದ-ಸಿಐಟಿಯು ನೇತೃತ್ವದಲ್ಲಿ ಏಪ್ರಿಲ್ 4ರಂದು ತುಮಕೂರು ನಗರದ ಟೌನ್‌ಹಾಲ್ ವೃತ್ತದ ಬಳಿ ಪ್ರತಿಭಟನೆ ನಡೆಸಿದರು.

ಪ್ರತಿಭಟನಾಕರ ಉದ್ದೇಶಿಸಿ ಮಾತನಾಡಿ ರಾಜ್ಯ ಕಾರ್ಯದರ್ಶಿ ಸೈಯದ್ ಮುಜಿಬ್ ಅವರು ರಾಜ್ಯ ಸರ್ಕಾರ ಪ್ರಥಮ ಬಜೆಟ್‌ನಲ್ಲಿ ತಪ್ಪಿದೆ ಎಂದು ಆರೋಪಿಸಿದರು.

ರಾಜ್ಯ ಖಚಾಂಚಿ ಸಿ.ವೆಂಕಟೇಶ್ ಮಾತನಾಡಿದರು. ಸಂಘದ ಜಿಲ್ಲಾ ಕಾರ್ಯದರ್ಶಿ ಸುಬ್ರಮಣ್ಯಎನ್.ಕೆ ಮಾತನಾಡಿ ಯು.ಜಿ.ಡಿ.ಗಳಲ್ಲಿ ಸಾವುಗಳು ನಿಲ್ಲುತ್ತಿಲ್ಲ, ಸರ್ಕಾರ ಈ ವಿಚಾರದಲ್ಲಿ ಗಂಭಿರವಾಗಿಲ್ಲವೆಂದು ಅಪಾದಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ಖಚಾಂಚಿ ಕೆ.ಮಂಜುನಾಥ್, ನಗರಾಧ್ಯಕ್ಷ ರಾಮಕೃಷ್ಣಪ್ಪ, ಸಹಕಾರ್ಯದರ್ಶಿ ನರಸಿಂಹಮೂರ್ತಿ, ಜೂನಿ ಮುಂತಾದವರು ವಹಿಸಿದ್ದರು.

ಪ್ರತಿಭಟನಾಕರರು ದೊಡ್ಡಬಳ್ಳಾಪುರದಲ್ಲಿ ನಿರ್ಮಾಣ ಹಂತದ ಒಳ ಚರಂಡಿ ಕೆಲಸ ಮಾಡುವ ಕಾರ್ಮಿಕರಿಗೆ ಸೂಕ್ತ ಸುರಕ್ಷತಾ ಸಲಕರಣೆಗಳನ್ನು ನೀಡದೆ ಇಬ್ಬರು ಕಾರ್ಮಿಕರ ಸಾವಿಗೆ ಕಾರಣವಾದ ಕಂಪನಿಗೆ ಕಪ್ಪು ಪಟ್ಟಿಗೆ ಸೇರಿಸಿ-ಕ್ರಿಮಿನಲ್ ಮೊಕದ್ದಮೆ ಹೂಡಲು ಹಾಗೂ ಮಾನವೀಯ ನೆಲೆಯಲ್ಲಿ ಸಹಾಯ ಮಾಡಲು ಬಂದ ಘಟನೆಯಲ್ಲಿ ಮರಣ ಹೊಂದಿರುವ ಕುಟುಂಬಗಳು ಹಾಗೂ ಕಾರ್ಮಿಕರ ಕುಟುಂಬಗಳಿಗೆ ತಲಾ 25 ಲಕ್ಷ ಪರಿಹಾರ ನೀಡುವಂತೆ ಒತ್ತಾಯಿಸಿದರು.

ಪಲ್ಮೀರಾ ವಿಜಯ : ಐಸಿಸ್ ಸೋಲಿನ ಆರಂಭ



ಈವರೆಗೆ ಐಸಿಸ್ ವಶದಲ್ಲಿದ್ದ ಪಲ್ಮೀರಾ ಪಟ್ಟಣವನ್ನು ಸಿರಿಯಾ ಪಡೆಗಳು ಗೆದ್ದುಕೊಂಡಿದ್ದು ಸಿರಿಯಾ ಯುದ್ಧದಲ್ಲಿ ಅತ್ಯಂತ ಮಹತ್ವದ ತಿರುವು. ಪಲ್ಮೀರಾ ಯುನೆಸ್ಕೊ ಚಾರಿತ್ರಿಕ ಮಹತ್ವದ ಪಟ್ಟಣ ಆದ್ದರಿಂದ ರೂಪಕಾತ್ಮಕವಾಗಿ ಮಾತ್ರವಲ್ಲ. ಮಿಲಿಟರಿ ವ್ಯೂಹದ ದೃಷ್ಟಿಯಿಂದಲೂ ಮಹತ್ವದ ವಿಜಯ. ಪಲ್ಮೀರಾ ಸಿರಿಯಾ ನಿಯಂತ್ರಣಕ್ಕೆ ಬಂದಿರುವುದರಿಂದ ಐಸಿಸ್ ರಾಜಧಾನಿ ರಾಕ್ಕಾ ಮತ್ತು ಇರಾಕಿನಲ್ಲಿರುವ ಇತರ ಐಸಿಸ್ ಪಡೆಗಳ ನಡುವೆ ಸಂಪರ್ಕ ಕಡಿಯುತ್ತದೆ. ಪೂರ್ವ ಸಿರಿಯಾದ ಪಟ್ಟಣವಾದ ಪಲ್ಮೀರಾ ವಶದೊಂದಿಗೆ ಈ ಪ್ರದೇಶದಲ್ಲಿ ಒಂಟಿಯಾಗಿದ್ದ ಸಿರಿಯಾ ಪಡೆಗಳಿಗೆ ಬೆಂಬಲ ಸಾದ್ಯವಾಗುತ್ತದೆ. ವಿವಿಧ ಪ್ರದೇಶಗಳಲ್ಲಿರುವ ಐಸಿಸ್ ಪಡೆಗಳನ್ನು ಪ್ರತ್ಯೇಕಿಸಿ ಸೋಲಿಸಲು ಈ ಎರಡೂ ಅಂಶಗಳೂ ಸಹಾಯ ಮಾಡುತ್ತವೆ. ಕುರ್ದಿಶ್ ಪಡೆಗಳು ಐಸಿಸ್‌ನ್ನು ಸೋಲಿಸಿ ಕೊಬಾನೆ ವಶ ಪಡಿಸಿಕೊಂಡಿದ್ದು ಐಸಿಸ್ ಗೋಣು ಮುರಿದಿದೆ. ಇದರ ಜತೆಗೆ ಐಸಿಸ್ ಸೋಲಿನ ಆರಂಭವಾಗಿದೆ.

ಪಲ್ಮೀರಾ ವಿಜಯ ಸಿರಿಯಾ–ರಶ್ಯಾಗಳ ವಿರುದ್ಧ ಅಮೆರಿಕಾ–ನಾಟೋ ಕೂಟದ ಜಾಗತಿಕ ಅಪಪ್ರಚಾರವನ್ನು ಬಯಲು ಮಾಡಿದೆ. ಐಸಿಸ್ ವಿರುದ್ಧ ಹೋರಾಡಿ ಅದನ್ನು ಸೋಲಿಸುವುದರಲ್ಲಿ ಆಸಕ್ತವಾಗಿಲ್ಲ. ಅಮೆರಿಕಾ–ನಾಟೋ ಕೂಟದ ಬೆಂಬಲಿಗಗರಾದ 'ಮಂದಗಾಮಿ'ಗಳನ್ನು ಸೋಲಿಸುವುದರಲ್ಲಿ ಮಾತ್ರ ಅವಕ್ಕೆ ಆಸಕ್ತಿ ಎಂಬುದು ಅಮೆರಿಕಾ–ನಾಟೋ ಕೂಟದ ಜಾಗತಿಕ ಅಪಪ್ರಚಾರವಾಗಿತ್ತು. ಭಯೋತ್ಪಾದಕ ಅಲ್ ಖೈದಾದ 'ಬಿ ಟೀಂ' ಆಗಿದ್ದ ಅಮೆರಿಕಾ–ನಾಟೋ ಕೂಟ ಬೆಂಬಲಿತ 'ಮಂದಗಾಮಿ' ಪಡೆಗಳನ್ನು ಸೋಲಿಸಿ ಐಸಿಸ್ ಮೇಲೆ ದಾಳಿ ಮಾಡಿ ಪಲ್ಮೀರಾವನ್ನು ವಶ ಪಡಿಸಿಕೊಂಡಿದ್ದು ಈ ಅಪಪ್ರಚಾರವನ್ನು ಪೊಳ್ಳೆಂದು ತೋರಿಸಿದೆ. ಮಾತ್ರವಲ್ಲ, ಅಮೆರಿಕಾ–ನಾಟೋ ಕೂಟ ಸಿರಿಯಾ ಸರಕಾರ ಬದಲಾಯಿಸಲು ಭಯೋತ್ಪಾದಕ ಜೆಹಾದಿಗಳ ಜತೆ ಶಾಮೀಲಾಗಿತ್ತು. ಐಸಿಸ್ ಮೇಲೆ ದಾಳಿ ಮಾಡಿ ಸೋಲಿಸುವುದರ ಬಗ್ಗೆ ಅದಕ್ಕೆ ಆಸಕ್ತಿ ಇರಲಿಲ್ಲ ಎಂಬ ಸತ್ಯ ಈಗ ತಮ್ಮ ದೇಶಗಳ ಜನತೆಗೆ ಸ್ಪಷ್ಟವಾಗತೊಡಗಿದೆ. ಐಸಿಸ್ ಸೋಲಿಸುವುದನ್ನು ಗಂಭೀರವಾಗಿ ತೆಗೆದುಕೊಂಡದ್ದು ಸಿರಿಯಾ ಮತ್ತು ಕುರ್ದಿಶ್ ಪಡೆಗಳು ಎಂದೂ ಸ್ಪಷ್ಟವಾಗಿದೆ.

ಅಮೆರಿಕದ ನಿಕಟ ಅನುವರ್ತಿ ಟರ್ಕಿ ಐಸಿಸ್ ಜತೆ ಶಾಮೀಲಾಗಿರುವುದರಿಂದ ಐಸಿಸ್ ಬಲವಾಗಿತ್ತು. ಟರ್ಕಿ ಐಸಿಸ್ ಗೆ ತನ್ನ ಪ್ರದೇಶಗಳ ಮೂಲಕ ತೈಲ ಕಳ್ಳ ರಫ್ತು ಮಾಡಲು ಅನುವು ಮಾಡಿಕೊಟ್ಟಿತ್ತು. ಐಸಿಸ್ ಗೆ ಟರ್ಕಿ ಮೂಲಕವೇ ಮಿಲಿಟರಿ ಮತ್ತು ಇತರ ಪೂರೈಕೆ ಆಗುತ್ತಿತ್ತು. ಆದ್ದರಿಂದಲೇ ಐಸಿಸ್ ಪಡೆಗಳ ವಿರುದ್ಧ ತೀವ್ರ ಪ್ರತಿರೋಧ ಒಡ್ಡಿ ಹಿಮ್ಮೆಟ್ಟಿಸುತ್ತಿದ್ದ ಕುರ್ದಿಶ್ ಪಡೆಗಳ ಮೇಲೆ ಟರ್ಕಿ ದಾಳಿ ಮಾಡುತ್ತಿತ್ತು. ಐಸಿಸ್ ಪಡೆಗಳ ಮೇಲಲ್ಲ. ಅಮೆರಿಕ ಈ ಬಗ್ಗೆ ಗೊತ್ತಿದ್ದೂ ಸುಮ್ಮನಿತ್ತು ಅಥವಾ ಶಾಮೀಲಾಗಿತ್ತು. ಐಸಿಸ್‌ನಿಂದ ಟರ್ಕಿ ಪ್ರದೇಶಗಳ ಮೂಲಕ ತೈಲ ಕಳ್ಳ ರಫ್ತು ಮಾಡುತ್ತಿದ್ದ ಟ್ರಕ್ಕುಗಳ ಮೇಲೆ ರಶ್ಯನ್ ವಿಮಾನಗಳು ಬಾಂಬ್ ದಾಳಿ ಮಾಡಿ ಅದನ್ನು ನಿಲ್ಲಿಸಿ ಟರ್ಕಿ–ಐಸಿಸ್ ದುಷ್ಟ ಕೂಟವನ್ನು ಬಯಲಿಗೆಳೆಯಿತು. ಇತ್ತೀಚೆಗೆ ಯುರೋಪಿಗೆ ಹೋಗುವ ನಿರಾಶ್ರಿತರ ಜತೆ ಕೆಲವು ಭಯೋತ್ಪಾದಕರನ್ನು ಕಳಿಸುವ ವಾಪಸು ಕರೆಸುವ ಅವರಿಗೆ ಪೂರೈಕೆಗಳನ್ನು ಕಳಿಸುವುದರಲ್ಲಿ ಟರ್ಕಿಯ ಪಾತ್ರ ಆಶ್ಚರ್ಯಕರ ಮೂಲಗಳಿಂದ ಬಯಲಾಗಿದೆ. ಅಮೆರಿಕದ ಸೆನೆಟರುಗಳ ಜತೆ ಸಭೆಯಲ್ಲಿ ಜೋರ್ಡಾನ್ ದೊರೆ ಇದನ್ನು ಹೇಳಿದ್ದು ಜಾಗತಿಕ ಮಾಧ್ಯಮಗಳಿಗೆ ಲೀಕ್ ಆಗಿ ಟರ್ಕಿ ಮತ್ತು ಜತೆಗೆ ಅಮೆರಿಕ–ನಾಟೋ ಕೂಟಗಳ ಡಬ್ಬಲ್–ಗೇಮ್ ಗಳೂ ಬಯಲಾಗಿವೆ.

ಯಾವುದೇ ಪರಿಹಾರವಿಲ್ಲ ಎಂಬ ಸ್ಥಿತಿಯಿಂದ ಸಿರಿಯಾ ಬಿಕ್ಕಟ್ಟು ಪರಿಹಾರದ ಹಾದಿಯಲ್ಲಿದೆ ಎಂಬ ಸ್ಥಿತಿಗೆ ಕಾರಣವಾದ ರಶ್ಯದ ಸೀಮಿತ ಮಧ್ಯ ಪ್ರವೇಶವೂ ಜಾಗತಿಕ ಮನ್ನಣೆಗೆ ಪಾತ್ರವಾಗಿದ್ದೂ ಅಮೆರಿಕ–ನಾಟೋ ಕೂಟಗಳ ರಶ್ಯ–ವಿರೋಧಿ ಪ್ರಚಾರಕ್ಕೆ ಮಾರಣಾಂತಿಕ ಹೊಡೆತ ಕೊಟ್ಟಿದೆ. ರಶ್ಯದ ಮಧ್ಯಪ್ರವೇಶ ಇಲ್ಲದೆ ಪಲ್ಮೀರಾ ವಿಜಯ ಸಾಧ್ಯವಿರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಮಿಲಿಟರಿ ಮಧ್ಯಪ್ರವೇಶದಲ್ಲೂ, ಶಾಂತಿ ಮಾತುಕತೆಯಲ್ಲೂ ಅದು ತೋರಿದ ಸಂಯಮ, ಶಿಸ್ತು, ಸಿರಿಯಾದ ಸಾರ್ವಭೌಮತೆ, ಅಂತರ್ರಾಷ್ಟ್ರೀಯ ನಿಯಮಗಳಿಗೆ ತೋರಿದ ಗೌರವ ಜಗತ್ತಿನ ಗಮನ ಸೆಳೆದಿದೆ. ಒಂದು ಸೂಪರ್ ಪವರ್ ತನ್ನ ಹಿತಾಸಕ್ತಿಗಳ ಬಗ್ಗೆ ಮಾತ್ರ ಯೋಚಿಸದೆ ಒಂದು ಪ್ರದೇಶದ ಬಿಕ್ಕಟ್ಟು ಪರಿಹರಿಸಲು ಶಾಂತಿ ಸ್ಥಾಪನೆ ಮಾಡಲು ಹೇಗೆ ಮಧ್ಯ ಪ್ರವೇಶ ಮಾಡಬಹುದು ಎಂದು ತೋರಿಸಿಕೊಟ್ಟಿದೆ. ಮುಖ್ಯ ವ್ಯೂಹಾತ್ಮಕ ಉದ್ದೇಶ ಸಾಧಿಸಿದ ಕೂಡಲೇ ಹಿಂತೆಗೆದದ್ದೂ ಮೆಚ್ಚುಗೆಗೆ ಕಾರಣವಾಗಿದೆ. ರಶ್ಯದ ಮಧ್ಯಪ್ರವೇಶದಿಂದಾಗಿಯೇ ಕದನ ವಿರಾಮ ಸಾಧ್ಯವಾಗಿದ್ದು, ಶಾಂತಿ ಮಾತುಕತೆ ಸಫಲವಾಗುವ ಸೂಚನೆಗಳಿವೆ. ಸಿರಿಯಾದ ಸರಕಾರವನ್ನು ಬಲಪ್ರಯೋಗದಿಂದ ಉರುಳಿಸುವ ಅಮೆರಿಕಾ–ನಾಟೋ ಹುನ್ನಾರವನ್ನೂ ಅದು ಅಷ್ಟೇ ಧೃಡತೆಯಿಂದ ವಿಫಲಗೊಳಿಸಿದೆ.

ಸಿರಿಯಾ ಸರಕಾರ ವ್ಯೂಹಾತ್ಮಕ ವಿಜಯ ಸಾಧಿಸಿದ್ದರೂ ಆ ದೇಶಕ್ಕೆ ಶಾಂತಿ ಮತ್ತು ಸುಭದ್ರತೆ ಇನ್ನೂ ದೂರದ ಗುರಿಯಾಗಿದೆ. ಇದಕ್ಕಾಗಿ ಶಾಂತಿ ಮಾತುಕತೆಯಲ್ಲೂ ಸಿರಿಯಾದ ಆಂತರಿಕ ರಾಜಕೀಯ ಸಮಸ್ಯೆ ಪರಿಹರಿಸುವುದರಲ್ಲಿ ಅದೇ ಮುತ್ಸದಿತನ ತೋರಿಸಬೇಕಾಗಿದೆ. ಕಳೆದ ಕೆಲವು ವರ್ಷಗಳ ಬಿಕ್ಕಟ್ಟು ಅಧಿಕಾರಶಾಹಿ ಕೇಂದ್ರೀಕೃತ ಪ್ರಭುತ್ವದಿಂದ ಸಾಧಿಸಿದ್ದ ಸಿರಿಯಾದ ಐಕ್ಯತೆ, ಸಮಗ್ರತೆ, ಸಾರ್ವಭೌಮತೆಗೆ ಭಂಗ ತಂದಿದೆ. ಈಗಾಗಲೇ ಸಿರಿಯಾದ ವಿಭಜನೆಗೆ ಒತ್ತಾಯ–ಒತ್ತಡಗಳು ಬಂದಿವೆ ಕುರ್ದಿಶ್ ಹೋರಾಟಗಾರರು ಕುರ್ದಿಶ್ ಪ್ರಾಂತ್ಯ ಇರುವ ಫೆಡರಲ್ ಪ್ರಜಾಸತ್ತಾತ್ಮಕ ಸಿರಿಯಾ ರಚನೆಗೆ ಒತ್ತಾಯಿಸುತ್ತಿದ್ದಾರೆ. ಸಿರಿಯಾವನ್ನು ವಿಭಜನೆ ಮಾಡುವುದಕ್ಕಿಂತ ಫೆಡರಲ್ ಪ್ರಜಾಸತ್ತಾತ್ಮಕ ದೇಶ ಸ್ಥಾಪಿಸುವುದು ಹೆಚ್ಚು ಒಳ್ಳೆಯದು. ಈ ಬಗ್ಗೆ ಸಿರಿಯಾದ ಸರಕಾರ ಮತ್ತು ರಾಜಕೀಯ ಶಕ್ತಿಗಳು ಗಮನ ಹರಿಸಬೇಕು.

ಬ್ರೆಜಿಲ್ ಪ್ರತಿಭಟನೆ – ಭ್ರಷ್ಟಾಚಾರದ ವಿರುದ್ಧವೇ?

ಬ್ರೆಜಿಲಿನ ನಗರಗಳ ಪ್ರಮುಖ ಬೀದಿಗಳಲ್ಲಿ ಎರಡು ದೇಶವ್ಯಾಪಿ ಪ್ರತಿಭಟನೆಗಳಲ್ಲಿ ಜನ ತುಂಬಿ ತುಳುಕಿದರು. ಮೊದಲ ಪ್ರತಿಭಟನೆಯ ಪ್ರಮುಖ ಘೋಷಣೆ "ದೋಷಾರೋಪಣೆ: ಹೌದು" ಆಗಿತ್ತು. ಅದರ ಪ್ರಮುಖ ಒತ್ತಾಯ ಅಧ್ಯಕ್ಷೆ ದಿಲ್ಮಾ ರುಸೆಫ್ ರಾಜೀನಾಮೆ ಕೊಡಬೇಕು ಅಥವಾ ದೋಷಾರೋಫಣೆ ಮಾಡಿ ಕಿತ್ತು ಹಾಕಬೇಕು. ಹತ್ತು ಲಕ್ಷ ಜನ ಭಾಗವಹಿಸಿದ ಎರಡನೆಯ ದೇಶವ್ಯಾಪಿ ಪ್ರತಿಭಟನೆಯ ಘೊಷಣೆ "ಕ್ಷಿಪ್ರಕ್ರಾಂತಿ ಆಗಲು ಬಿಡುವುದಿಲ್ಲ" ಎಂಬುದು ಆಗಿತ್ತು. ಇದು ಬ್ರೆಜಿಲಿನ ಜನತಾ ರಂಗ ಸಂಘಟಿಸಿದ ಪ್ರತಿಭಟನೆ ಆಗಿತ್ತು. ಚುನಾಯಿತ ಜನಪ್ರಿಯ ಜನ–ಪರ ಅಧ್ಯಕ್ಷರನ್ನು ಮಿಲಿಟರಿ ಕ್ಷಿಪ್ರಕ್ರಾಂತಿ ಮೂಲಕ ಉರುಳಿಸುವ ಬ್ರೆಜಿಲಿನ ಆಳುವ ವರ್ಗಗಳ ಹಳೆ ಚಾಳಿಯ ಬಗ್ಗೆ ಇದು ಟೀಕೆ, ಎಚ್ಚರ ಎರಡೂ ಆಗಿತ್ತು.

ಬ್ರೆಜಿಲ್ ಕಳೆದ 50 ದಶಕಗಳಲ್ಲಿ ಅತ್ಯಂತ ತೀವ್ರ ಆರ್ಥಿಕ ಬಿಕ್ಕಟ್ಟು ಎದುರಿಸುತ್ತಿದೆ. ಕಚ್ಚಾ ಸರಕುಗಳ ಬೆಲೆ ಮತ್ತು ಚೀನಾಕ್ಕೆ ರಫ್ತು ವ್ಯಾಪಾರ ಕುಸಿತಗಳಿಂದ ಬ್ರೆಜಿಲ್ ಆರ್ಥಿಕ ತತ್ತರಿಸಿ ಹೋಗಿದೆ. ಕಳೆದ 14 ವರ್ಷಗಳಿಂದ ಅಧಿಕಾರದಲ್ಲಿ ಇರುವ ವರ್ಕರ್ಸ್ ಪಾರ್ಟಿ ಕಚ್ಚಾ ಸರಕುಗಳ ಮೇಲೆ ಆರ್ಥಿಕದ ಅವಲಂಬನೆ ಮಾಡುವತ್ತ ಗಮನ ಹರಿಸಿಲ್ಲ. ದಿಲ್ಮಾ ಸರಕಾರ ಹಲವು ಸರಕು–ಸೇವೆಗಳ ಬೆಲೆ ಏರಿಸಿದ್ದು ತೀವ್ರ ಅತೃಪ್ತಿ ಉಂಟು ಮಾಡಿದೆ. ಆದರೆ ಇತ್ತೀಚೆಗೆ ನಡೆದ ಮೊದಲ ಪ್ರತಿಭಟನೆ ಬೆಲೆ ಏರಿಕೆ ವಿರುದ್ಧ ಅಲ್ಲ. ಭ್ರಷ್ಟಾಚಾರದ ವಿರುದ್ಧ. ಅಧ್ಯಕ್ಷೆ ದಿಲ್ಮಾ ಮೇಲೆ ಭ್ರಷ್ಟಾಚಾರದ ಆಪಾದನೆ ಬಂದಿದ್ದು ತನಿಖೆ ನಡೆಯುತ್ತಿದೆ. ಆದರೆ ತನಿಖೆ ಫಲಿತಾಂಶಗಳಿಗೆ ಕಾಯದೆ ದಿಲ್ಮಾ ರಾಜೀನಾಮೆ ಕೊಡಬೇಕು. ಆಕೆ ಮೇಲೆ ದೋಷಾರೋಪಣೆ ಹಾಕಿ ಕಿತ್ತು ಹಾಕಬೇಕು ಎಂಬುದು ಬಲಪಂಥೀಯ ವಿರೋಧ ಪಕ್ಷಗಳ ಕೂಗು.

ಬ್ರೆಜಿಲ್‌ನಲ್ಲಿ ಭ್ರಷ್ಟಾಚಾರ ಹೊಸತಲ್ಲ. ಬ್ರೆಜಿಲಿನಲ್ಲಿ "ವ್ಯವಸ್ಥೆ ಭ್ರಷ್ಟವಾಗಿಲ್ಲ. ಭ್ರಷ್ಟಾಚಾರವೇ ಇಲ್ಲಿನ ವ್ಯವಸ್ಥೆ" ಎಂಬ ಜೋಕಿದೆ. ಭಾರೀ ಸರಕಾರಿ ಕಂಪನಿಗಳ ವ್ಯವಹಾರದಲ್ಲಿ ಭ್ರಷ್ಟಾಚಾರಕ್ಕೆ ಬಹಳ ಅವಕಾಶಗಳಿವೆ. ರಾಜಕೀಯ ನಾಯಕರು ಈ ಅವಕಾಶ ಬಳಸಿಕೊಳ್ಳುವುದು ಅಪರೂಪವೇನಲ್ಲ. ದಿಲ್ಮಾ ವಿರುದ್ಧ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ವಿರೋಧ ಪಕ್ಷದ ಅಭ್ಯರ್ಥಿ ಮೇಲೆ ಇನ್ನೂ ಗುರುತರವಾದ ಆಪಾದನೆಗಳಿವೆ. ಆದರೆ ವರ್ಕರ್ಸ್ ಪಾರ್ಟಿಯ ನಾಯಕರುಗಳಾದ ದಿಲ್ಮಾ ಮತ್ತು ಲೂಲಾ ಸಹ ಭ್ರಷ್ಟಾಚಾರದ ಆಮಿಶದಿಂದ ಪಾರಾಗಲಿಲ್ಲ ಎಂಬುದು ನಿಜ. ಆದರೆ ವಿರೋಧ ಪಕ್ಷಗಳ ನಿಜವಾದ ಗುರಿ ಇರುವುದು ಚುನಾವಣೆಗಳಲ್ಲಿ ಸಾಧಿಸಲಾಗದ್ದನ್ನು ಈಗಿನ ಆರ್ಥಿಕ ಬಿಕ್ಕಟ್ಟಿನಿಂದ ಬಂದಿರುವ ಅತೃಪ್ತಿ ಮತ್ತು ಭ್ರಷ್ಟಾಚಾರದ ಆಪಾದನೆಗಳನ್ನು ಬಳಸಿ ಸಾಧಿಸುವುದು. ಇದು ಕ್ಷಿಪ್ರಕ್ರಾಂತಿಯ ಹೊಸ ಮಾದರಿ. ಈ ಹೊಸ ಮಾದರಿಯ 'ಕ್ಷಿಪ್ರಕ್ರಾಂತಿ' ಮಿಲಿಟರಿ ಬ್ಯಾರಕುಗಳಲ್ಲಿ ಆರಂಭವಾಗುವುದಿಲ್ಲ. ಪತ್ರಿಕೆ ಟಿವಿಗಳಲ್ಲಿ ಆರಂಭವಾಗುತ್ತದೆ. ಇಂದಿನ 'ಕ್ಷಿಪ್ರಕ್ರಾಂತಿ' ಆರಂಭಿಸಿ ಹರಡುವವರು ಮಾಧ್ಯಮದ ಜನ. ಬ್ರೆಜಿಲಿನಲ್ಲಿ ಗ್ಲೋಬೊ ನೆಟ್ ವರ್ಕ ಎಂಬ ಒಂದು ಮಾಧ್ಯಮ ಕಂಪನಿ, ಟಿವಿ, ಪತ್ರಿಕೆ ಮತ್ತು ಇತರ ಎಲ್ಲಾ ಮಾಧ್ಯಮಗಳಲ್ಲಿ ಅರ್ಧಕ್ಕಿಂತ ಹೆಚ್ಚಿನದರ ಒಡೆತನ ಹೊಂದಿದೆ. ಇದು ಬಲಪಂಥೀಯ ವಿರೋಧ ಪಕ್ಷದ ಬೆಂಬಲಿಗನಾಗಿದ್ದು ಈ ಪ್ರತಿಭಟನೆ ಸಂಘಟಿಸುವುದರಲ್ಲಿ ದೊಡ್ಡ ಪಾತ್ರ ವಹಿಸಿತ್ತು.

ಬಲಪಂಥಿಯ ಪಕ್ಷಗಳು, ಮಾಧ್ಯಮಗಳ ಮುಖ್ಯ ಗುರಿ ವರ್ಕರ್ಸ್ ಪಾರ್ಟಿಯ ಸರಕಾರದ ಸಫಲ ಬಡತನ ನಿರ್ಮೂಲನೆ ಯೋಜನೆ 'ಬೊಲ್ಸಾ ಫ್ಯಾಮಿಲಿಯ'ವನ್ನು ನಿಲ್ಲಿಸುವುದು. ವರ್ಕರ್ಸ್ ಪಾರ್ಟಿಯ ಜನಪ್ರಿಯತೆ ಮತ್ತು ರಾಜಕೀಯ ನೆಲೆಯ ಹಿಂದಿರುವ ಗುಟ್ಟು ಅದು. ಕಳೆದ ಒಂದುವರೆ ದಶಕದಲ್ಲಿ ಬಡತನವನ್ನು ಹೆಚ್ಚು ಕಡಿಮೆ ನಿರ್ಮೂಲನ ಮಾಡಲಾಗಿದೆ. ದೇಶದ ಕಾಲು ಭಾಗ (ಅಂದರೆ ಸುಮರು 5 ಕೋಟಿ) ಜನ ಈ ಯೋಜನೆಯಿಂದಾಗಿ ಬಡತನದಿಂದ ಹೊರಗೆ ಬಂದಿದ್ದಾರೆ. 2016 ಬಜೆಟಿನಲ್ಲಿ ಈ ಯೋಜನೆಯ ಅನುದಾನದ ಮೂರನೇ ಒಂದು ಭಾಗವನ್ನು ಕಡಿತಗೊಳಿಸಲಾಗಿದೆ. ಅದನ್ನು ಈಗಿನ ರಾಜಕೀಯ–ಆರ್ಥಿಕ ಬಿಕ್ಕಟ್ಟು ಬಳಸಿ ಪೂರ್ಣವಾಗಿ ನಿಲ್ಲಿಸಬೇಕು ಎಂಬುದು ದೇಶದ ಬಲಪಂಥೀಯ ಶಕ್ತಿಗಳ ಮತ್ತು ಶ್ರೀಮಂತ–ಮೇಲ್ಮಧ್ಯಮ ವರ್ಗಗಳ ಜನರ ಹಠ. ವರ್ಕರ್ಸ್ ಪಾರ್ಟಿಯ ಸರಕಾರ ಕಾರ್ಮಿಕರ ಕನಿಷ್ಟ ವೇತನ ಏರಿಸಿರುವುದು, ಅವರ ಹಕ್ಕುಗಳನ್ನು ವಿಸ್ತರಿಸಿರುವುದು ಮತ್ತು ಕಾರ್ಮಿಕ ಕುಟುಂಬಗಳಿಂದ ಸಾರ್ವಜನಿಕ ವಿ.ವಿ.ಗಳಿಗೆ ಪ್ರವೇಶ ಅವಕಾಶ ವಿಸ್ತರಿಸಿರುವುದು ಅವರ ಆಕ್ರೋಶಕ್ಕೆ ಕಾರಣವಾಗಿದೆ. ಆದ್ದರಿಂದಲೇ ಬಡವರು, ಕೆಳ ಮಧ್ಯಮ ವರ್ಗದ ಜನ ಸರಕಾರದ ಪರವಾಗಿ ಸೆಟೆದು ನಿಂತಿದ್ದಾರೆ – ಇನ್ನೊಂದು ಕ್ಷಿಪ್ರಕ್ರಾಂತಿ ಆಗಗೊಡುವುದಿಲ್ಲ' ಅಂತ. ಭ್ರಷ್ಟಾಚಾರ ಅವರಿಗೆ ಮುಖ್ಯ ವಿಷಯ ಅಲ್ಲ. ಒಂದು ಸಮೀಕ್ಷೆ ಪ್ರಕಾರ ದೇಶದ ಮೂರನೇ ಒಂದು ಭಾಗ ಜನ ಮಾತ್ರ ಭ್ರಷ್ಟಾಚಾರ ಮುಖ್ಯ ವಿಷಯ ಅಂತಾರೆ. ಉಳಿದವರಿಗೆ ಶಿಕ್ಷಣ, ಆರೋಗ್ಯ, ಉದ್ಯೋಗ ಮುಖ್ಯ ವಿಷಯ. ಬಹುಶಃ ಮೊದಲ ಮೂರನೇ ಒಂದು ಭಾಗ ಬಲಪಂಥಿಯರ ಬೆಂಬಲಿಸುತ್ತಾರೆ. ಉಳಿದ ಮೂರನೇ ಎರಡು ಭಾಗ ಜನ ಸರಕಾರವನ್ನು ಬೆಂಬಲಿಸುತ್ತಾರೆ.

ಆದರೆ ವರ್ಕರ್ಸ್ ಪಾರ್ಟಿ ಸಹ ತನ್ನ ಹಾದಿ ಸರಿಪಡಿಸಿಕೊಳ್ಳಬೇಕಾಗಿದೆ. ಅದು ಎಡ–ನಡು ಪಂಥೀಯ ಪಕ್ಷ. ಬಂಡವಾಳಶಾಹಿಯನ್ನು ಕಿತ್ತೊಗೆಯಬೇಕು ಎಂಬ ಗುರಿ ಇಟ್ಟುಕೊಂಡ ಪಕ್ಷವಲ್ಲ. ಬಂಡವಾಳಶಾಹಿಯನ್ನು 'ಮಾನವೀಯ' ಮಾಡಲು ಸಾಧ್ಯ ಎಂದು ಅದನ್ನು ಮಾಡ ಹೊರಟಿರುವ ಪಕ್ಷ. ಬಂಡವಾಳಶಾಹಿಯ ಭ್ರಷ್ಟಾಚಾರದಿಂದ ಅದಕ್ಕೆ ದೂರವಿರಲು ಸಾಧ್ಯವಾಗಿಲ್ಲ. ದಿಲ್ಮಾ ಸರಕಾರವಂತೂ ಆರ್ಥಿಕ ಬಿಕ್ಕಟ್ಟಿನ ಭಾರದಿಂದ ಬಂಡವಾಳಶಾಹಿ ಬಯಸುವ 'ಮಿತವ್ಯಯ' ಜಾರಿ ಮಾಡುವತ್ತ ಸಾಗಿದೆ. ಇದನ್ನು ಸರಿಪಡಿಸಲು ಲೂಲಾ ಸರಕಾರಕ್ಕೆ ಸೇರುತ್ತಾರೆ ಎಂದು ಯೋಜಿಸಲಾಗಿತ್ತು. ಆದರೆ ಭ್ರಷ್ಟಾಚಾರದ ಹೆಸರಲ್ಲಿ ಅದನ್ನು ತಡೆಯಲಾಗಿದೆ. ಬಿಕ್ಕಟ್ಟಿನಿಂದ ಹೊರ ಬರಲು ಬಂಡವಾಳಶಾಹಿಯನ್ನು ಕಿತ್ತೊಗೆಯುವ, ಎಲ್ಲಾ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಒಗ್ಗೂಡಿಸುವುದರಿಂದ ಮಾತ್ರ ಸಾಧ್ಯ. ಈ ಹಾದಿ ಅದು ತುಳಿಯುತ್ತದೆಯೇ ಎಂದು ಕಾದು ನೋಡಬೇಕಾಗಿದೆ.



ಮತ್ತೆ ಭುಗಿಲೆದ್ದ ಸಿಗರನಹಳ್ಳಿ............



ವಿಜಯ್ ಕುಮಾರ್ ಸಿಗರನಹಳ್ಳಿ


ಸಿಗರನಹಳ್ಳಿ ಈಗ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಗಿರುವ ಹಳ್ಳಿ. ಇದಕ್ಕೆ ಕಾರಣ 2015ರ ಆಗಸ್ಟ್ 31 ರಂದು ನಾಲ್ಕು ಮಂದಿ ದಲಿತ ಮಹಿಳೆಯರು ಆಕಸ್ಮಾತ್ ಅಲ್ಲಿನ ಬಸವೇಶ್ವರ ದೇಗುಲ ಪ್ರವೇಶ ಮಾಡಿದ್ದು.

ಈಗ ಆರು ತಿಂಗಳ ನಂತರ ಮತ್ತೊಮ್ಮೆ ವಿವಾದ ಭುಗಿಲೆದ್ದಿದೆ. ಅದಕ್ಕೆ ಕಾರಣ ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಗೆ ನೀಡಿದ ಒಂದು ಅರ್ಜಿ. ಏಪ್ರಿಲ್ 1 ಮತ್ತು 2 ರಂದು ಸಿಗರನಹಳ್ಳಿ ಸೇರಿದಂತೆ ಏಳು ಹಳ್ಳಿ ಸೇರಿ ನಡೆಸುವ ಹರಿಹರಪುರದ ಜಾತ್ರೆ ಉತ್ಸವದ ಅಂಗವಾಗಿ ವಾರದ ಮುನ್ನ 6 ತಿಂಗಳಿಂದ ಬೀಗ ಬಿದ್ದಿದ್ದ ದೇಗುಲ ಬಾಗಿಲು ತೆರೆದುಕೊಂಡಿತ್ತು. ದಲಿತರ ಪ್ರವೇಶ ಮಾಡಿ ನಂತರ 6 ತಿಂಗಳು ಬೀಗ ಹಾಕಿದ್ದ ದೇಗುಲವನ್ನು ಬಾಗಿಲು ತೆರೆದು 2 ಲಕ್ಷ ರೂಪಾಯಿ ಖರ್ಚು ಮಾಡಿ ಶುದ್ಧೀಕರಣ ಮಾಡಲಾಗಿತ್ತು. ಹೋಮ–ಹವನಾದಿಗಳು ನಡೆದಿದ್ದವು. ಶಾಸಕ ಎಚ್.ಡಿ.ರೇವಣ್ಣ ಕೂಡ ಆಗಮಿಸಿ ಪೂಜೆ ಸಲ್ಲಿಸಿದ್ದರು. ಆದರೆ ದಲಿತರು ಮಾತ್ರ ಈ ಎಲ್ಲದರಿಂದ ದೂರ ಉಳಿದಿದ್ದರು. ಆದರೆ ಮಾರ್ಚ್ 30 ರಂದು ಒಂದು ಅರ್ಜಿಯನ್ನು ಜಿಲ್ಲಾಡಳಿತಕ್ಕೆ ಎಸೆದುಬಿಟ್ಟರು. ಅದೊಂದು ಅರ್ಜಿ ಮತ್ತೊಮ್ಮೆ ಸಿಗರನಹಳ್ಳಿ ರಾಷ್ಟ್ರಮಟ್ಟದಲ್ಲಿ ಸುದ್ದಿ ಮಾಡಲು ಕಾರಣವಾಯಿತು. ಏಪ್ರಿಲ್ 1 ರಿಂದ ಆರಂಭವಾಗುವ ಜಾತ್ರೆಯಲ್ಲಿ ದಲಿತರನ್ನು ಒಳಗೊಳ್ಳುವಂತೆ ಮಾಡಬೇಕು. ಊರೆಲ್ಲಾ ಸುತ್ತಾಡಿದರೂ ಈವರೆಗೆ ದಲಿತ ಕೇರಿ ನೋಡದ ಅಡ್ಡೆ ಉತ್ಸವ ಈ ಬಾರಿ ಈ ಬೀದಿಗೆ ಬರಬೇಕು. ಅದಕ್ಕೂ ಮುನ್ನ ಬಸವೇಶ್ವರ ದೇಗುಲದಲ್ಲಿ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಬೇಕು ಎಂದು ಮನವಿ ಪತ್ರದಲ್ಲಿ ಬರೆಯಲಾಗಿತ್ತು. ಇದೊಂದು ಅರ್ಜಿ ಇಡೀ ಜಿಲ್ಲಾಡಳಿತದ ನಿದ್ರೆಗೆಡಿಸಿತ್ತು.

ಏಪ್ರಿಲ್ 1 ರಂದು ಆಗಮಿಸಿದ ಉಪವಿಭಾಗಾಧಿಕಾರಿ ವಿಜಯಾ ಹಾಗೂ ಎಎಸ್ಪಿ ಶೋಭಾರಾಣಿ ನೇತೃತ್ವದ ತಂಡ ಆ ಕ್ಷೇತ್ರದ ಶಾಸಕ ರೇವಣ್ಣ ಅವರಿಗೆ ವಿಷಯ ಮುಟ್ಟಿಸಿರಲಿಲ್ಲ. ಆದರೆ ಅರ್ಜಿ ಸರ್ಕಾರಿ ಕಚೇರಿ ತಲುಪಿದ ಮರು ಕ್ಷಣವೇ ರೇವಣ್ಣ ಅವರ ಕಿವಿಗೆ ತಲುಪಿತ್ತು. ಸಿಗರನಹಳ್ಳಿ ಮೇಲ್ವರ್ಗದ ಜನ ರೇವಣ್ಣ ಅವರ ಮನೆ ಬಾಗಿಲು ತಲುಪಿದ್ದರು. ತಮಗೆ ವಿಷಯ ಮುಟ್ಟಿಸದೆ ಸಿಗರನಹಳ್ಳಿಗೆ ಆಗಮಿಸುವ ಅಧಿಕಾರಿಗಳಿಗೆ ಬಿಸಿ ಮುಟ್ಟಿಸುವಂತೆ ಮೌಖಿಕ ಆದೇಶ ನೀಡಿದ್ದ ರೇವಣ್ಣ, ದೃಶ್ಯ ಮಾಧ್ಯಮದವರು ಸಿಗರನಹಳ್ಳಿಯತ್ತ ಬರದಂತೆ ನೋಡಿಕೊಂಡರು. ನಾಲೆ ಕಾಮಗಾರಿ ವೀಕ್ಷಣೆ ನೆಪದಲ್ಲಿ ದೃಶ್ಯ ಮಾಧ್ಯಮದ ತಂಡವನ್ನು ಕರೆದೊಯ್ದರು.

ಇತ್ತ ದಲಿತ ಕೇರಿಗೆ ಬಂದ ಅಧಿಕಾರಿಗಳು ಮೇಲ್ವರ್ಗದವರ ಮನವೊಲಿಸಲು ಬಸವೇಶ್ವರ ದೇಗುಲದ ಬಳಿ ಹೋದರು. ಆದರೆ ಮಧ್ಯಾಹ್ನ ದಾಟಿದರು ಬರಲಿಲ್ಲ. 2 ಲಕ್ಷ ರೂಪಾಯಿ ಖರ್ಚು ಮಾಡಿದ ದೇಗುಲಕ್ಕೆ ದಲಿತರು ಮತ್ತೊಮ್ಮೆ ಪ್ರವೇಶ ಮಾಡುವುದನ್ನು ಅವರು ಕಡಾ ಖಂಡಿತವಾಗಿ ನಿರಾಕರಿಸಿದರು. ಈ ಸಂದರ್ಭ ವರದಿ ಮಾಡಲು ಬಂದಿದ್ದ ಹೊಳನರಸೀಪುರದ ಇಬ್ಬರು ಪತ್ರಕರ್ತರು ಫೋಟೋ ತೆಗೆದಿದ್ದೆ ತಡ ಅವರ ಮೇಲೆ ಎರಗಿ ಬಿದ್ದರು. ವಿಜಯವಾಣಿ ವರದಿಗಾರ ಕೃಷ್ಣ ಮತ್ತು ವಿಶ್ವವಾಣಿ ವರದಿಗಾರ ವಸಂತಯ್ಯ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದರು. ತಡೆಯಲು ಹೋದ ಪೊಲೀಸರ ವಿರುದ್ಧವೂ ತಮ್ಮ ದರ್ಪ ಮುಂದುವರಿಸಿದರು. ಪೊಲೀಸರ ಸಂಖ್ಯೆ ಕಡಿಮೆ ಇದ್ದ ಕಾರಣಕ್ಕೆ ನಿಯಂತ್ರಣ ಸಾಧ್ಯವಾಗಲಿಲ್ಲ. ನಂತರ ಆಗಮಿಸಿದ ಎಸ್ಪಿ ರಾಹುಲ್ ಕುಮಾರ್ ಮೇಲೂ ಕಲ್ಲು ತೂರಲಾಯಿತು. ಗಾಯಗೊಂಡ ಪೊಲೀಸರು, ಪತ್ರಕರ್ತರು ಆಸ್ಪತ್ರೆಗೆ ದಾಖಲಾದರು. ಅಲ್ಲಿಗೆ ಅಂದು ದೇಗುಲಕ್ಕೆ ದಲಿತರು ಪ್ರವೇಶ ಮಾಡಿಸುವ ಅಧಿಕಾರಿಗಳ ಕಸರತ್ತು ಕೊನೆಗೊಂಡಿತು. ಪರಿಸ್ಥಿತಿ ಹತೋಟಿಗೆ ತರಲು ಲಾಠಿ ಪ್ರಹಾರ ನಡೆಸಿ ಸೆಕ್ಷನ್ 144 ಜಾರಿ ಮಾಡಿದರು. ಸಿಗರನಹಳ್ಳಿ ಜನ ಜಾತ್ರೆ ಮಾಡುವ ಆಸೆ ಬಿಟ್ಟು ಊರು ತೊರೆದರು. ಮರು ದಿನ ಆಗಮಿಸಿದ ಶಾಸಕ ರೇವಣ್ಣ, ದಲಿತರನ್ನು ದೇಗುಲಕ್ಕೆ ಪ್ರವೇಶ ಮಾಡಿಸದೆ ಜಾತ್ರೆಯ ರಥ ಎಳೆದೊಯ್ದರು.


ಇದೀಗ ಪೊಲೀಸರ ಮೇಲೆ ಹಲ್ಲೆ ನಡೆಸಿರುವ ಆರೋಪದಲ್ಲಿ 30 ಜನ ಬಂಧಿತರಾಗಿದ್ದಾರೆ. ಅವರನ್ನು ಬಿಡಿಸಲು ಓಡಾಡುತ್ತಿರುವ ರೇವಣ್ಣ, ದಲಿತರಿಗೆ ನ್ಯಾಯ ಕೊಡಿಸುವ ಬಗ್ಗೆ ಯೋಚಿಸಿಲ್ಲ. ಬದಲಿಗೆ ದೇಗುಲ ಪ್ರವೇಶಕ್ಕೆ ಅರ್ಜಿ ಕೊಟ್ಟಿದ್ದೆ ತಪ್ಪು ಎಂಬಂತೆ ದಲಿತರನ್ನು ಈ ಘಟನೆಗೆ ಖಳನಾಯಕರನ್ನಾಗಿ ಮಾಡಿ ಆರೋಪ ಮಾಡುತ್ತಿದ್ದಾರೆ. ಅಲ್ಲದೆ ದಲಿತರ ಮೇಲೆ ದೌರ್ಜನ್ಯ ನಡೆಸಿದವರ ಪರವಾಗಿಯೇ ಜೆಡಿಎಸ್ ನಾಯಕತ್ವದಲ್ಲಿ ಜಿಲ್ಲೆಯ ಎಲ್ಲ ಶಾಸಕರು ಮತ್ತು ಬೆಂಬಲಿಗರೊಂದಿಗೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಪ್ರತಿಭಟನೆ ನಡೆಸಿದ್ದಾರೆ, ಆದರೆ ಇವರು ಹಿಂದೆಂದೂ ಜನರ ಯಾವ ಪ್ರಶ್ನೆಗಳಿಗಾಗಿಯೂ ಬೀದಿಗಿಳಿದು ಹೋರಾಟ ಮಾಡಿದವರಲ್ಲ. ದೌರ್ಜನ್ಯದಿಂದ ದಿಕ್ಕು ತೋಚದ ದಲಿತರು ನ್ಯಾಯಕ್ಕಾಗಿ ಹವಣಿಸುತ್ತಿದ್ದಾರೆ. ಇತ್ತ ಘಟನೆ ಪ್ರಾರಂಬವಾದಾಗಿನಿಂದ ಹಿಂದೆ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಎಚ್.ಸಿ.ಮಹದೇವಪ್ಪ ಮತ್ತು ಈಗ ಹಾಸನದವರೇ ಆದ ಎ.ಮಂಜು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರೂ ಇದುವರೆಗೂ ಒಮ್ಮೆಯೂ ಸಿಗರನಹಳ್ಳಿಗೆ ಬೇಟಿ ನೀಡಿಲ್ಲ. ರಾಜ್ಯ ಸರ್ಕಾರ ಇವೆಲ್ಲವನ್ನು ನೋಡುತ್ತ ಜಾಣಕುರುಡು ಪ್ರದರ್ಶಿಸುತ್ತಿದೆ.




ಅಭಿವೃದ್ಧಿ ಮತ್ತು ದಲಿತ ತಾರತಮ್ಯ

ಅಭಿವೃದ್ಧಿ ಬಡವರನ್ನು ಅದರಲ್ಲೂ ದಲಿತರನ್ನು ಮುಟ್ಟುತ್ತಿಲ್ಲ ಎಂಬುದು ಸರ್ವವಿದಿತ. ಎಷ್ಟರ ಮಟ್ಟಿಗೆ ಎಲ್ಲಿ ಎಂಬುದರ ಬಗ್ಗೆ ನಿಖರ ಮಾಹಿತಿ ಇಲ್ಲದೆ ಈ ಅಸಮಾನತೆ, ತಾರತಮ್ಯ ಸರಪಡಿಸಲು ಸಾಧ್ಯವಿಲ್ಲ. ಆದ್ದರಿಂದ ಸಿಪಿಐ(ಎಂ) ಮತ್ತಿತರ ದಲಿತ ಪ್ರಗತಿಪರ ಚಳುವಳಿಗಳ ಒತ್ತಡದಿಂದ ಸರಕಾರ ಈ ಮಾಹಿತಿ ಕಲೆ ಹಾಕಲು ಆರಂಭಿಸಿದೆ. 2014ರ ಜಿಲ್ಲಾವಾರು ಮಾನವ ಅಭಿವೃದ್ಧಿ ವರದಿಗಳಲ್ಲಿ ಈ ಮಾಹಿತಿ ಕೊಡಲಾಗಿದೆ. ದಲಿತರ ವಿರುದ್ಧ ತಾರತಮ್ಯದ 10 ಅಂಶಗಳನ್ನು ಕ್ಷೇತ್ರ ಸಮೀಕ್ಷೆ ಆಧಾರದ ಮೇಲೆ ಕಲೆ ಹಾಕಿ ದಲಿತರ ವಿರುದ್ಧ ತಾರತಮ್ಯದ ಸೂಚಕ ಒಂದನ್ನು ತಯಾರಿಸಲಾಗಿದೆ. ಜತೆಗೆ ಇರುವ ಎರಡು ಗ್ರಾಫಿಕ್ಸ್ ಗಳಲ್ಲಿ ಕೆಲವು ಜಿಲ್ಲೆಗಳ ಮಾಹಿತಿಯನ್ನು ಕೊಡಲಾಗಿದೆ. ಎಲ್ಲಾ ಜಿಲ್ಲೆಗಳ ವರದಿಗಳು ಇನ್ನೂ ಪ್ರಕಟವಾಗಿಲ್ಲ.

ಹೆಚ್.ಆರ್. ನವೀನ್‌ಕುಮಾರ್





JANASHAKTHI KANNADA VARA PATRIKE: Printed by G.V.SRIRAMA REDDY, EMS Bhavana, No.37/A, 8th Cross, Mahalakshmi Layout, BANGALORE-560086Published by: G.V.SRIRAMA REDDY EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor NITHYANANDASWAMI EMS Bhavana, No.37/A, 8th Cross, Mahalakshmi Layout, BANGALORE-560086 Editor: NITHYANANDASWAMI